ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 1 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 16 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ; ಸಾರ್ವಜನಿಕವಾಗಿ ಪೆನ್‌ಡ್ರೈವ್‌ಗಳ ವಿತರಿಸಿ ಹೆಣ್ಣು ಮಕ್ಕಳ ಮಾನ ಹರಾಜು ಆರೋಪ

ಡಿಸಿಎಂ ಡಿ.ಕೆ.ಶಿವಕುಮಾರ್ ವಜಾಕ್ಕೆ ಮಾಜಿ ಸಿಎಂ ಕುಮಾರಸ್ವಾಮಿ ಆಗ್ರಹ

● ಜೆಡಿಎಸ್ ಕೋರ್ ಕಮಿಟಿ ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯರಿಗೆ ಆಗ್ರಹ ● ನಾವು ಪ್ರಜ್ವಲ್ ರೇವಣ್ಣನ ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ; ತಪ್ಪು ಮಾಡಿದ್ದರೆ ಶಿಕ್ಷೆ ಆಗಲಿ ● ಎರಡು ತಿಂಗಳ ಹಿಂದೆಯೇ ಪ್ರಜ್ವಲ್ ಮಾಜಿ ಕಾರ್ ಡ್ರೈವರ್ ಕಾರ್ತಿಕ್ ಡಿ.ಕೆ.ಬ್ರದರ್ಸ್‌ಗೆ ಪೆನ್‌ಡ್ರೈವ್ ನೀಡಿದ ಮಾಹಿತಿಯನ್ನು ವಕೀಲ ದೇವರಾಜೇಗೌಡರಲ್ಲಿ ತಿಳಿಸಿದ್ದಾನೆ



ಬೆಂಗಳೂರು, ಏ.30(ಕೆಎಂಶಿ)– ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯದ ವಿಡಿಯೊ ಪೆನ್‌ಡ್ರೈವ್‌ಗಳನ್ನು ಸಾರ್ವಜನಿಕವಾಗಿ ವಿತರಿಸಿ, ಹೆಣ್ಣು ಮಕ್ಕಳ ಮಾನ ಹರಾಜು ಮಾಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ ಕೋರ್ ಕಮಿಟಿ ಸಭೆ ನಂತರ ಸುದೀರ್ಘ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ಈ ಕಾಂಗ್ರೆಸ್ ಸರ್ಕಾರ ಹೆಣ್ಣು ಮಕ್ಕಳಿಗೆ ಗೌರವ ನೀಡುವುದೇ ಆದರೆ, ಮೊದಲು ಈ ವ್ಯಕ್ತಿಯನ್ನು ವಜಾಗೊಳಿಸಿ, ಎಸ್‌ಐಟಿ ತನಿಖೆಯಲ್ಲಿ ಇದನ್ನೂ ಸೇರಿಸಿ ಎಂದು ಆಗ್ರಹಿಸಿದರು. ಪ್ರಜ್ವಲ್ ರೇವಣ್ಣ ಅವರನ್ನು ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಅವರು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ. ಆದರೆ, ● 9ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಜೆಡಿಎಸ್‌ನಿಂದ ಅಮಾನತು

ಬೆಂಗಳೂರು, ಏ.30(ಕೆಎಂಶಿ)– ಲೈಂಗಿಕ ಹಗರಣದಲ್ಲಿ ಸಿಲುಕಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಜೆಡಿಎಸ್‌ನಿಂದ ಅಮಾನತು ಮಾಡಲಾಗಿದೆ.



ಜಾತ್ಯತೀತ ಜನತಾ ದಳದ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹಾಗೂ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ಮಂಗಳವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಪಕ್ಷದ ಘನತೆ ಮತ್ತು ಗೌರವಕ್ಕೆ ಹಾಗೂ ● 9ನೇ ಪುಟಕ್ಕೆ

ಶುಭಾಶಯಗಳು



ಕಾರ್ಮಿಕರ ದಿನಾಚರಣೆಯ ಅಂಗವಾಗಿ ನಾಡಿನ ಸಮಸ್ತ ಕಾರ್ಮಿಕ ಬಾಂಧವರಿಗೆ ಶುಭಾಶಯಗಳು

ಬಿಡುವು

ಕಾರ್ಮಿಕ ದಿನಾಚರಣೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.5.2024ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ದೇವರಾಜೇಗೌಡಗೆ ಪೆನ್ ಡ್ರೈವ್ ಕೊಟ್ಟಿದ್ದೆ; ಕಾಂಗ್ರೆಸ್ ನಾಯಕರಿಗೆ ಕೊಟ್ಟಿಲ್ಲ

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮೊಮ್ಮಗ, ಜೆಡಿಎಸ್‌ನ ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಕೇಳಿ ಬಂದಿರುವ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣರ ಮಾಜಿ ಕಾರು ಚಾಲಕ ಕಾರ್ತಿಕ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಪ್ರಜ್ವಲ್ ರೇವಣ್ಣರ ಮಾಜಿ ಕಾರು ಚಾಲಕ ಕಾರ್ತಿಕ್ ಅಜ್ಞಾತ ಸ್ಥಳದಿಂದ ವಿಡಿಯೋ ಮಾಡಿದ್ದು, ಅದರಲ್ಲಿ ● 10ನೇ ಪುಟಕ್ಕೆ



ಕಾರ್ತಿಕ್

ಸಕಲ ಸರ್ಕಾರಿ ಗೌರವದೊಂದಿಗೆ ಸಂಸದ ಶ್ರೀನಿವಾಸ ಪ್ರಸಾದ್ ಅಂತ್ಯಕ್ರಿಯೆ

ಮರೆಯಾದ ದಲಿತ ಸೂರ್ಯ; ಭೂ ತಾಯಿ ಮಡಿಲು ಸೇರಿದ ಬೌದ್ಧ ಧರ್ಮದ ಅನುಯಾಯಿ



ಸಂಸದ ವಿ.ಶ್ರೀನಿವಾಸ ಪ್ರಸಾದ್

● ಹುಟ್ಟೂರು ಅಶೋಕಪುರಂನಲ್ಲಿ ಶ್ರೀನಿವಾಸ ಪ್ರಸಾದ್ ಅಂತಿಮ ಯಾತ್ರೆ
● ರಾಷ್ಟ್ರಗೀತೆ ಮೊಳಗಿಸಿ, 21 ಸುತ್ತು ಗುಂಡು ಹಾರಿಸಿ ಪೊಲೀಸರ ಗೌರವ
● 15 ಬೌದ್ಧ ಧರ್ಮದ ಭಂತೇಜಿಗಳು ಅಂತ್ಯಕ್ರಿಯೆಯ ವಿಧಿ–ವಿಧಾನದಲ್ಲಿ ಭಾಗಿ
● ಒಂದು ಗಂಟೆಗೂ ಅಧಿಕ ಕಾಲ ನಡೆದ ಬೌದ್ಧ ಧರ್ಮಾನುಸಾರ ಅಂತ್ಯಕ್ರಿಯೆ ವಿಧಾನ



ಮೈಸೂರಿನ ಅಶೋಕಪುರಂನಲ್ಲಿ ಮಂಗಳವಾರ ಸಂಸದ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ.

ಮೈಸೂರು, ಏ.30(ಬಿಎಲ್‌ಯು)– ಚಾಮರಾಜನಗರದ ಸಂಸದರೂ ಆದ ಹಿರಿಯ ರಾಜಕಾರಣಿ, ದಲಿತ ಸೂರ್ಯ ವಿ.ಶ್ರೀನಿವಾಸ ಪ್ರಸಾದ್ ಅವರ ಅಂತ್ಯಕ್ರಿಯೆ ಮಂಗಳವಾರ ಸಕಲ ಸರ್ಕಾರಿ ಗೌರವದೊಂದಿಗೆ ಬೌದ್ಧ ಧರ್ಮದ ವಿಧಿ ವಿಧಾನಗಳಂತೆ ನಡೆಯಿತು. ಮೈಸೂರಿನ ಮಾನಂದವಾಡಿ ರಸ್ತೆಯ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಶ್ರೀನಿವಾಸಪ್ರಸಾದ್ ಅವರ ಅಂತ್ಯಸಂಸ್ಕಾರ ನೆರವೇರಿತು.

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸೋಮವಾರ ಮುಂಜಾನೆ ನಿಧನರಾದ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರವನ್ನು ಮೊದಲು ಮೈಸೂರಿನ ಜಯಲಕ್ಷ್ಮಿಪುರಂನ ಅವರ ಸ್ವಗೃಹಕ್ಕೆ ತರಲಾಗಿತ್ತು. ತರುವಾಯ ಶ್ರೀನಿವಾಸ ಪ್ರಸಾದ್ ವ್ಯಾಸಂಗ ಮಾಡಿದ ಅಶೋಕಪುರಂನ ಎನ್‌ಟಿಎಂ ಸರ್ಕಾರಿ ಶಾಲೆಯಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗಿತ್ತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದ ಪ್ರತಾಪ್ ಸಿಂಹ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಸೇರಿದಂತೆ ಇತರರು ಇಂದು ಬೆಳಿಗ್ಗೆ ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದು, ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ಅಂತಿಮ ಯಾತ್ರೆ: ತರುವಾಯ ಎನ್‌ಟಿಎಂ ಶಾಲೆಯಿಂದ ವಿಶೇಷ ವಾಹನದಲ್ಲಿ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆ ಆರಂಭವಾಯಿತು. ಶ್ರೀನಿವಾಸ ಪ್ರಸಾದ್ ಅವರು ಹುಟ್ಟಿ, ಬೆಳೆದ ಮನೆಯ ಬಳಿ ಕೆಲಕಾಲ ಅಂತಿಮ ಯಾತ್ರೆಯ ವಾಹನ ನಿಲ್ಲಿಸಲಾಯಿತು.

ಬೌದ್ಧ ಧರ್ಮದ ವಿಧಿ ವಿಧಾನದಂತೆ ಭೂತಾಯಿ ಮಡಿಲು ಸೇರಿದ ಶ್ರೀನಿವಾಸ ಪ್ರಸಾದ್

ಶ್ರೀನಿವಾಸ ಪ್ರಸಾದ್ ಅವರು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರು. ಡಾ.ಅಂಬೇಡ್ಕರ್ ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮ ಸ್ವೀಕಾರ ಮಾಡಿದಂತೆ ತಮ್ಮ ಆಧ್ಯಾತ್ಮಿಕ ದೇವರು ಎಂದೇ ಕರೆಯುತ್ತಿದ್ದ ಡಾ.ಅಂಬೇಡ್ಕರ್ ಅವರ ಹಾದಿಯಲ್ಲೇ ಶ್ರೀನಿವಾಸ ಪ್ರಸಾದ್ ಕೂಡ ಬೌದ್ಧ ಧರ್ಮದ ಅನುಯಾಯಿಯಾಗಿದ್ದರು.

ಈ ಹಿನ್ನೆಲೆಯಲ್ಲಿ ನನ್ನ ಅಂತ್ಯ ಸಂಸ್ಕಾರದ ವಿಧಿ ವಿಧಾನಗಳು ಬೌದ್ಧ ಧರ್ಮದ ವಿಧಿ ವಿಧಾನದಂತೆ ನಡೆಯಬೇಕು ಎಂದು ಕುಟುಂಬಸ್ಥರಿಗೆ ಈ ಮೊದಲೇ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಕುಟುಂಬಸ್ಥರ ಬಯಕೆಯಂತೆ



ಇಂದು ಶ್ರೀನಿವಾಸ ಪ್ರಸಾದ್ ಅವರ ಅಂತ್ಯಸಂಸ್ಕಾರ ಕೂಡ ಬೌದ್ಧ ಧರ್ಮದ ವಿಧಿ ವಿಧಾನದಂತೆ ನೆರವೇರಿತು. ಅಂತ್ಯಸಂಸ್ಕಾರ ನಡೆಯುವ ಸ್ಥಳಕ್ಕೆ ಪಾರ್ಥಿವ ಶರೀರ ಬರುವ ಮೊದಲೇ ಭಂತೇಜಿಗಳು ಪ್ರಾರ್ಥನೆ ಆರಂಭಿಸಿದ್ದರು. ತರುವಾಯ ಭಂತೇಜಿಗಳ ಮಾರ್ಗದರ್ಶನದಲ್ಲಿ ಬೌದ್ಧ ಧರ್ಮದ ವಿಧಿ ವಿಧಾನದಂತೆ ಸುಮಾರು ಒಂದು ಗಂಟೆ ಕಾಲ ಅಂತ್ಯಸಂಸ್ಕಾರ ಕಾರ್ಯ ನೆರವೇರಿತು. ಬದುಕಿದ್ದಾಗ ಬೌದ್ಧ ಧರ್ಮದ ಪಾಲಕರಾಗಿದ್ದ ಶ್ರೀನಿವಾಸ ಪ್ರಸಾದ್ ಬೌದ್ಧ ಧರ್ಮದ ವಿಧಿ ವಿಧಾನದಂತೆಯೇ ಭೂಮಿ ತಾಯಿ ಮಡಿಲು ಸೇರಿದರು.

ನಂತರ ಅಶೋಕಪುರಂನ ಪ್ರಮುಖ ರಸ್ತೆಯ ಮೂಲಕ ಮಾನಂದವಾಡಿ ರಸ್ತೆಯ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ. ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಟ್ರಸ್ಟ್‌ನ ಅಂತ್ಯಕ್ರಿಯೆ ಸ್ಥಳ ತಲುಪಿತು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯಿತ್ರಿ ಉಪಸ್ಥಿತಿಯಲ್ಲಿ ಶ್ರೀನಿವಾಸ ಪ್ರಸಾದ್ ಅವರಿಗೆ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು.

ರಾಷ್ಟ್ರಗೀತೆ ಮೊಳಗಿದ ಸಂದರ್ಭದಲ್ಲಿ ಪೊಲೀಸರು ಮೂರು ಸುತ್ತು ಗುಂಡುಗಳನ್ನು ಹಾರಿಸಿ ಗೌರವ ವಂದನೆ ಸಲ್ಲಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಸರ್ಕಾರದ ಪರವಾಗಿ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿಟ್ಟು ಗೌರವ ಸಲ್ಲಿಸಿದರು. ಸರ್ಕಾರಿ ವಂದನೆಯ ಅಂತಿಮ ಪ್ರಕ್ರಿಯೆಯಾಗಿ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರದ ಮೇಲೆ ಇದ್ದ ರಾಷ್ಟ್ರ ಧ್ವಜವನ್ನು ಅವರ ಪತ್ನಿ ಭಾಗ್ಯಲಕ್ಷ್ಮಿ ಅವರಿಗೆ ಹಸ್ತಾಂತರ ಮಾಡಲಾಯಿತು. ● 7ನೇ ಪುಟಕ್ಕೆ

ಯುವಕನ ಅಪಹರಿಸಿ ಹಣ, ಆಭರಣ ದೋಚಿದ ಪ್ರಕರಣ

ಮೈಸೂರು To ಗೋವಾ ಮಾರ್ಗದಲ್ಲಿ ಸುಲಿಗೆಕೋರರ ಸೆರೆ

ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ದೃಶ್ಯದ ಮಾಹಿತಿ ಆಧರಿಸಿ ವಿವಿ ಪುರಂ ಪೊಲೀಸರ ಯಶಸ್ವಿ ಕಾರ್ಯಾಚರಣೆ; ಘಟನೆ ನಡೆದ ಕೆಲವೇ ಗಂಟೆಯಲ್ಲಿ ಆರೋಪಿಗಳು ಲಾಕ್





ಮೈಸೂರು, ಏ. 30(ಆರ್‌ಕೆ)– ರಾಜಸ್ತಾನದಿಂದ ಅಜ್ಮೀರ್ ರೈಲಿನಲ್ಲಿ ಹಿಂದಿರುಗುತ್ತಿದ್ದ ತನ್ನ ತಂದೆ–ತಾಯಿಯನ್ನು ಕರೆದೊಯ್ಯಲೆಂದು ಕಾರಿನಲ್ಲಿ ರೈಲು ನಿಲ್ದಾಣಕ್ಕೆ ಬರುತ್ತಿದ್ದ ಯುವಕನನ್ನು ಅಪಹರಿಸಿ ಚಿನ್ನಾಭರಣ ಮತ್ತು ಹಣ ದೋಚಿ ಪರಾರಿಯಾಗಿದ್ದ ಮೂವರನ್ನು ಕೃತ್ಯ ನಡೆದ ಕೆಲವೇ ಗಂಟೆಗಳಲ್ಲಿ ಬಂಧಿಸುವಲ್ಲಿ ಮೈಸೂರಿನ ವಿವಿ ಪುರಂ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ಬೆಳವಾಡಿ ಸಮೀಪದ ಚಾಮುಂಡೇಶ್ವರಿನಗರ ನಿವಾಸಿಗಳಾದ ಅಖಿಲೇಶ್, ನಂದೀಶ್ ಹಾಗೂ ಕಾಮನಕೆರೆಹುಂಡಿ ಗ್ರಾಮದ ರಾಹುಲ್ ಬಂಧಿತರು. ಮೈಸೂರಿನ ಸಿದ್ಧಾರ್ಥನಗರ ಅಹಿಂಸಾ ಮಾರ್ಗದ ನಿವಾಸಿ ರಮೇಶ್ ಚಂದ್ ಅವರ ಮಗ ಚಿರಾಗ್ ಜೈನ್‌ನನ್ನು ಏ.28ರ ಭಾನುವಾರ ಮುಂಜಾನೆ 2.30 ಗಂಟೆಯಲ್ಲಿ ಅಪಹರಿಸಿ, ವಿಜಯನಗರ 4ನೇ ಹಂತದ ಯಶಸ್ವಿ ಕಲ್ಯಾಣ ಮಂಟಪದ ಹಿಂದೆ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಬೆದರಿಸಿ 38 ಗ್ರಾಂನ 2 ಚಿನ್ನದ ಸರ, 2,000 ರೂ. ನಗದು ಹಾಗೂ ಆತನ ಮೊಬೈಲ್‌ನಿಂದ ಗೂಗಲ್ ಪೇ ಮೂಲಕ 80,000 ರೂ. ಹಣ ವರ್ಗಾಯಿಸಿಕೊಂಡು ಚಿರಾಗ್ ಜೈನ್‌ನನ್ನು ಆತನ ಕಾರು ಸಮೇತ ಬಿಟ್ಟು ಪರಾರಿಯಾಗಿದ್ದರು.



ಕೃತ್ಯಕ್ಕೆ ಬಳಸಿದ್ದ ಸ್ಕೂಟರ್

ಘಟನೆಯ ವಿವರ: ಬನ್ನೂರಿನಲ್ಲಿ ಚಿನ್ನಾಭರಣ ಅಂಗಡಿ ನಡೆಸುತ್ತಿರುವ ರಮೇಶ್ ಚಂದ್, ತಮ್ಮ ಪತ್ನಿಯೊಂದಿಗೆ ತಮ್ಮ ಊರಾದ ರಾಜಸ್ತಾನಕ್ಕೆ ಹೋಗಿ ಏಪ್ರಿಲ್ 28ರಂದು ಅಜ್ಮೀರ್ ರೈಲಿನಲ್ಲಿ ಹಿಂದಿರುಗುತ್ತಿದ್ದರು. ರೈಲು ಅಂದು ಮುಂಜಾನೆ 2.30 ಗಂಟೆಗೆ ಮೈಸೂರು ರೈಲು ನಿಲ್ದಾಣ ತಲುಪುತ್ತಿತ್ತು. ಹಾಗಾಗಿ ತಮ್ಮನ್ನು ಕರೆದೊಯ್ಯಲು ಕಾರು ತರುವಂತೆ ಪುತ್ರನಿಗೆ ತಿಳಿಸಿದ್ದರು. ● 9ನೇ ಪುಟಕ್ಕೆ

ಪಾರ್ಟಿಯಲ್ಲಿ ಕಂಠಪೂರ್ತಿ ಕುಡಿದು ಬಂದು ಹಣಕ್ಕಾಗಿ ಯುವಕರ ದುಷ್ಕೃತ್ಯ

ಮೈಸೂರು, ಏ.30(ಆರ್‌ಕೆ)–ನಜರ್‌ಬಾದ್ ಮನೆಯೊಂದರಲ್ಲಿ ನಡೆದ ಪಾರ್ಟಿಯಲ್ಲಿ ಕಂಠಪೂರ್ತಿ ಕುಡಿದು ಬರುತ್ತಿದ್ದ ವೇಳೆ ಕಾರಲ್ಲಿ ಒಬ್ಬನೇ ಇದ್ದಿದ್ದರಿಂದ ಅಡ್ಡಗಟ್ಟಿ ಅಪಹರಿಸಿ ಹಣಕ್ಕಾಗಿ ದುಷ್ಕರ್ಮಿಗಳು ಈ ದುಷ್ಕೃತ್ಯ ಎಸಗಿದ್ದಾರೆ.

ಈ ಮೂವರು ಆರೋಪಿಗಳಾದ ಅಖಿಲೇಶ್, ರಾಹುಲ್ ಮತ್ತು ನಂದೀಶ್, ಡಿಪ್ಲೊಮಾ ಮುಗಿಸಿ ಕೆಲಸವಿಲ್ಲದೇ ಓಡಾಡಿಕೊಂಡಿರುವ ಸುಮಾರು 20ರಿಂದ 23 ವರ್ಷ ವಯಸ್ಸಿನವರು. ಹಣಕ್ಕಾಗಿ ಅಪಹರಿಸಿ ದೋಚಿದ್ದಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ. ಚಿರಾಗ್‌ನನ್ನು ಅಪಹರಿಸಿದ ಅವರು, ಆತನ ಮೊಬೈಲ್‌ನಿಂದಲೇ ತಮ್ಮ ಅಕೌಂಟ್‌ಗೆ ಫೋನ್‌ಪೇ ಮೂಲಕ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಇವರೆಲ್ಲಾ ಹೊಸ ಕಳ್ಳರಾದ್ದರಿಂದ ಅವರೇ ಸುಳಿವು ಬಿಟ್ಟುಕೊಟ್ಟಿದ್ದಾರೆ. ಆರೋಪಿಗಳು ಅಪರಾಧ ಎಸಗಿ ಬಸ್ಸಿನಲ್ಲಿ ಪ್ರವಾಸ ಹೊರಟು ಸುಲಭವಾಗಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಅವರನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮನೆ ಬಾಗಿಲು ಮುರಿದು ಚಿನ್ನಾಭರಣ, ನಗದು ಕಳವು

ಏ.2ರಂದು ಬೆಂಗಳೂರಿಂದ ಮೈಸೂರಿಗೆ ಬಂದು ಸ್ನೇಹಿತನ ಸ್ಕೂಟರ್ ಬಳಸಿ ಗೋಕುಲಂನಲ್ಲಿ ಕೃತ್ಯವೆಸಗಿದ ಆರೋಪಿ ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಭಾನುವಾರ ಶರಣು

ಮೈಸೂರು, ಏ.30(ಆರ್‌ಕೆ)–ಮನೆ ಬೀಗ ಮುರಿದು ಭಾರಿ ಪ್ರಮಾಣದ ಚಿನ್ನಾಭರಣ ಮತ್ತು ನಗದು ಕಳವು ಮಾಡಿದ ಆರೋಪಿ ಈಗ ಬೆಂಗಳೂರಲ್ಲಿ ಶರಣಾಗಿದ್ದಾನೆ. ಗೋಕುಲಂನ ಕೆಆರ್‌ಎಸ್ ರಸ್ತೆ, ಹಸು–ಕರು ಪಾರ್ಕ್ ಬಳಿಯ ನಿವಾಸಿ, ಕ್ವಾರಿ ಮಾಲೀಕ ಯೋಗೇಶ್ ಅವರ ಮನೆಯಲ್ಲಿ ಏ.2ರಂದು ಕಳ್ಳತನವಾಗಿತ್ತು. ಆರೋಪಿ ಬೆಂಗಳೂರಿನ ಸೈಯದ್ ಈ ಕೃತ್ಯ ಎಸಗಿದ್ದ.

ಯೋಗೇಶ್, ಅಂದು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲೆಂದು ಕುಟುಂಬ ಸಮೇತ ಇಲವಾಲದ ತಮ್ಮ ಸಹೋದರಿ ಮನೆಗೆ ಹೋಗಿದ್ದಾಗ ಮಧ್ಯಾಹ್ನ 2.15 ಗಂಟೆಯಲ್ಲಿ ಸ್ಕೂಟರ್‌ನಲ್ಲಿ ಬಂದ ಸೈಯದ್ ಬಾಗಿಲು ಮೀಟಿ ಒಳಗೆ ಹೋಗಿ ಕೊಠಡಿಯ ಅಲ್ಮೇರಾದಲ್ಲಿದ್ದ 6 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 2 ಲಕ್ಷ ರೂ. ನಗದಿನೊಂದಿಗೆ ಪರಾರಿಯಾಗಿದ್ದ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿ ಮಹಜರು ನಡೆಸಿದ ವಿ.ವಿ. ಪುರಂ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ ಹಾಗೂ ಸಿಬ್ಬಂದಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಸಿಸಿಟಿವಿ ಫುಟೇಜ್‌ನಲ್ಲಿ ಕೃತ್ಯಕ್ಕೆ ಬಳಸಿದ್ದ ಸ್ಕೂಟರ್ ಮೈಸೂರಿನ ಉದಯಗಿರಿಯ ವ್ಯಕ್ತಿಗೆ ಸೇರಿದ್ದು ಎಂಬ ಮಾಹಿತಿ ದೊರೆಯಿತು. ಈ ಸುಳಿವಿನ ಬೆನ್ನತ್ತಿದ ಪೊಲೀಸರು, ● 9ನೇ ಪುಟಕ್ಕೆ

ಐಪಿಎಲ್ ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡು ದ್ವಿಚಕ್ರ ವಾಹನ ಕಳ್ಳತನಕ್ಕೆ ಇಳಿದಿದ್ದ ಸಿವಿಲ್ ಇಂಜಿನಿಯರ್

ಆರೋಪಿಯಿಂದ 1.20 ಲಕ್ಷ ರೂ. ಮೌಲ್ಯದ ಎರಡು ದ್ವಿಚಕ್ರ ವಾಹನ ವಶಕ್ಕೆ

ಮೈಸೂರು, ಏ.30(ಜಿಎ)–ಐಪಿಎಲ್ ಬೆಟ್ಟಿಂಗ್‌ನಲ್ಲಿ ಲಕ್ಷಾಂತರ ರೂ. ಹಣ ಕಳೆದುಕೊಂಡು ಸಾಲ ತೀರಿಸಲು ದ್ವಿಚಕ್ರ ವಾಹನ ಕಳ್ಳತನಕ್ಕೆ ಇಳಿದಿದ್ದ ಸಿವಿಲ್ ಇಂಜಿನಿಯರ್‌ನೊಬ್ಬನನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಂಡ್ಯ ಜಿಲ್ಲೆ ಗೆಂಡೆಕೊಪ್ಪಲು ಗ್ರಾಮದ ಕೇಶವ (28) ಬಂಧಿತ ಆರೋಪಿಯಾಗಿದ್ದು, ಈತನಿಂದ 1.20 ಲಕ್ಷ ಮೌಲ್ಯದ ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಿಇ ಸಿವಿಲ್ ಇಂಜಿನಿಯರಿಂಗ್ ವ್ಯಾಸಂಗ ಮಾಡಿರುವ ಕೇಶವ ಕಳೆದ ಮೂರು ವರ್ಷಗಳಿಂದ ಐಪಿಎಲ್ ಬೆಟ್ಟಿಂಗ್ ದಂಧೆಗೆ ದಾಸನಾಗಿ 3 ಲಕ್ಷ ರೂ. ಕಳೆದುಕೊಂಡಿದ್ದ. ಸಾಲ ಕೊಟ್ಟವರು ಪೀಡಿಸಲಾರಂಭಿಸಿದ್ದರು. ಇದರಿಂದ ಸಾಲ ತೀರಿಸಲು ಬೈಕ್ ಕಳ್ಳತನಕ್ಕೆ ಇಳಿದಿದ್ದ. ಕುವೆಂಪುನಗರ ಪೊಲೀಸ್ ಠಾಣಾ ವ್ಯಾಪ್ತಿ ಯಲ್ಲಿ ದ್ವಿಚಕ್ರ ವಾಹನ ಕಳುವು ಮಾಡಿ ಸಿಕ್ಕಿಬಿದ್ದ ಕೇಶವನಿಂದ ಸದ್ಯ ಪೊಲೀಸರು 2 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಹಿಂದೆ ಈತ ವಿವಿಧ



ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳುವು ಮಾಡಿದ ಕುರಿತು 8 ಪ್ರಕರಣ ದಾಖಲಾಗಿವೆ.

ದ್ವಿಚಕ್ರ ವಾಹನ ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ವೇಳೆ ಪೊಲೀಸರು ಗಸ್ತು ತಿರುಗುತ್ತಿದ್ದಾಗ, ಕದ್ದ ಬೈಕನ್ನೂ ಗಿರಿವಿ ಇಡಲು ಕೊಂಡೊಯ್ಯುತ್ತಿದ್ದ ಆರೋಪಿಯನ್ನು ತಡೆದು ವಿಚಾರಣೆ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿದ್ದು, ನಂತರ ಆತನನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಮತ್ತು ಸಂಚಾರ ವಿಭಾಗ ಡಿಸಿಪಿ ಜಾಹ್ನವಿ ಅವರ ಮಾರ್ಗದರ್ಶನದಲ್ಲಿ ಕೆ.ಆರ್. ವಿಭಾಗದ ಎಸಿಪಿ ರಮೇಶ್‌ಕುಮಾರ್ ಉಸ್ತುವಾರಿಯಲ್ಲಿ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ಗೋಪಾಲ್ ನೇತೃತ್ವದಲ್ಲಿ ಸಿಬ್ಬಂದಿಗಳಾದ ಮಂಜುನಾಥ್, ಆನಂದ್, ಹಜರತ್ ಅಲಿ, ಸುರೇಶ್, ನಾಗೇಶ್ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ನಗರ ಪೊಲೀಸ್ ಆಯುಕ್ತ ಡಾ.ಬಿ.ರಮೇಶ್ ಹಾಗೂ ಕಾನೂನು–ಸುವ್ಯವಸ್ಥೆ ಡಿಸಿಪಿ ಮುತ್ತುರಾಜ್ ಪ್ರಶಂಸಿಸಿದ್ದಾರೆ.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ರೂ.ಗಳ ಒಳಗಿರಬೇಕು. ಅರ್ಜಿಗಳನ್ನು ಮೇ 9ರಿಂದ 21ರವರೆಗೆ ತಾಲೂಕು ಕಚೇರಿಗಳಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ಕಚೇರಿಗಳಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಲು ಮೇ.21 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮೈಸೂರು/ಹುಣಸೂರು/ಹೆಚ್.ಡಿ.ಕೋಟೆ/ನಂಜನಗೂಡು ಮತ್ತು ಟಿ.ನರಸೀಪುರ ತಾಲೂಕು ಹಾಗೂ ಸಹಾಯಕ ನಿರ್ದೇಶಕರ ಕಚೇರಿ, ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯವರ ದೂ.ಸಂ:0821–2427140 ಸಂಪರ್ಕಿಸಿ.

ಶುಭಚಂದ್ರ, ಸುರೇಶ್‌ಕುಮಾರ್ ಜೈನ್‌ಗೆ ಪುರಾತತ್ವ ಸುಬೋಧ ಪ್ರಶಸ್ತಿ



ಮೈಸೂರು, ಏ.30(ಎಸ್‌ಪಿಎನ್)–ಮೈಸೂರು ವಿವಿ ಜೈನ ಅಧ್ಯಯನ ಸಂಸ್ಥೆಯ ವಿಶ್ರಾಂತ ಮುಖ್ಯಸ್ಥ ಶುಭಚಂದ್ರ ಹಾಗೂ ಉದ್ಯಮಿ ಸುರೇಶ್‌ಕುಮಾರ್ ಜೈನ್ ಅವರಿಗೆ 'ಪುರಾತತ್ವ ಸುಬೋಧ' ಪ್ರಶಸ್ತಿಯನ್ನು ಶ್ರವಣ ಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು.

ಹಾಸನ ಜಿಲ್ಲೆ ಶ್ರವಣ ಬೆಳಗೊಳದಲ್ಲಿ ಶ್ರೀ ಭಾರತ ವರ್ಷಿಯ ದಿಗಂಬರ ಜೈನ ತೀರ್ಥ ಸಂರಕ್ಷಿಣಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಗಜರಾಜ ಗಂಗವಾಲ್, ರಾಜಕುಮಾರ್ ಜೈನ್ ಸೇಟಿ, ನಿರ್ಮಲ ಕುಮಾರ್ ಸೇಟಿ, ಟ್ರಸ್ಟಿ ಧರ್ಮೇಂದ್ರ ಜೈನ್ ಸೇಟಿ ಅವರ ಸಮ್ಮುಖದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮೊಜ್‌ದೆ ಖಾಬಜಿಜೋಜ್‌ಗೆ ಪಿಹೆಚ್.ಡಿ



ಮೈಸೂರು: ಡಾ.ಸಿ.ರಾಮಸ್ವಾಮಿ ಅವರ ಮಾರ್ಗದರ್ಶನದಲ್ಲಿ ಮೊಜ್‌ದೆ ಖಾಬಜಿಜೋಜ್ ಅವರು ಮನೋವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಎಐಟಿಟಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ ಯುವತಿಯರಿಗೆ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಟೂಲ್ ಡಿಸೈನ್‌ನಲ್ಲಿ ಪೋಸ್ಟ್ ಡಿಪ್ಲೊಮಾ ತರಬೇತಿಗೆ ಡಿಪ್ಲೊಮಾ/ಬಿಇ (ಎಂಇ/ಎಇ/ಐಪಿ/ಡಿಟಿಡಿಎಂ/ಡಿಪಿಎಂ) ವಿದ್ಯಾರ್ಹತೆ, ಟೂಲ್ ರೂಮ್ ಮೆಷಿನಿಸ್ಟ್ ತರಬೇತಿಗೆ ಎಸ್.ಎಸ್.ಎಲ್.ಸಿ, ಟೂಲ್ & ಡೈ ಮೇಕರ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಮತ್ತು ಐಟಿಐ, ಸಿಎನ್‌ಸಿ ಟೆಕ್ನಾಲಜಿ ಮತ್ತು ಸಿಎಮ್‌ಎಮ್ ತರಬೇತಿಗೆ ಐಟಿಐ/ಡಿಪ್ಲೊಮಾ, ಡಿಸೈನರ್ ಮೆಕ್ಯಾನಿಕಲ್ (ಸಿಎಡಿ–ಸಿಎಎಮ್) ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಎಲೆಕ್ಟ್ರಿಷಿಯನ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಕನ್ವೆನ್ಷನಲ್ ಮಷೀನ್ಸ್ ಮತ್ತು ಕ್ವಾಲಿಟಿ ಕಂಟ್ರೋಲ್ಸ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಸಿಎನ್‌ಸಿ ಮೆಷಿನ್ ಆಪರೇಟರ್ (ಟರ್ನರ್/ಮಿಲ್ಲರ್) ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಉತ್ಪನ್ನ ವಿನ್ಯಾಸ ಎಂಜಿನಿಯರ್ ಸಿಎಡಿ–ಸಿಎಎಂ ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಕ್ವಾಲಿಟಿ ಇನ್ಸ್‌ಪೆಕ್ಟರ್ ತರಬೇತಿಗೆ ಐಟಿಐ ಅಥವಾ ಡಿಪ್ಲೊಮಾ ಹಾಗೂ ಸಿಎನ್‌ಸಿ ಪ್ರೋಗ್ರಾಮರ್ ವಿಎಂಸಿ ಮತ್ತು ಟರ್ನಿಂಗ್ ತರಬೇತಿಗೆ ಡಿಪ್ಲೊಮಾ ಅಥವಾ ಬಿ.ಇ ವಿದ್ಯಾರ್ಹತೆಯನ್ನು ಹೊಂದಿರುವ 16ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 10 ಕೊನೆಯ ದಿನಾಂಕವಾಗಿದೆ. ಮಾಹಿತಿಗೆ ದೂ.ಸಂ: 9945442654 /9980615384.



ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸೆಂಟರ್ ವತಿಯಿಂದ ಭಾನುವಾರ ನಡೆದ ಮಿಸ್ಟರ್ ಮೈಸೂರು ಸ್ಪರ್ಧೆಯಲ್ಲಿ ಮೈಸೂರಿನ ರಾಕೇಶ್ ಮಿಸ್ಟರ್ ಮೈಸೂರು ಪ್ರಶಸ್ತಿ ಪಡೆದಿದ್ದಾರೆ. ಇವರ ಜೊತೆ ತರಬೇತುದಾರ ಮಂಜುನಾಥ್ ಇದ್ದಾರೆ.

ಇಂದು ಕಾರ್ಮಿಕರ ದಿನಾಚರಣೆ

ಮೈಸೂರು: ಮೈಸೂರಿನ ಸುಯೋಗ್ ಆಸ್ಪತ್ರೆ ಹಾಗೂ ಸುಯೋಗ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮೇ 1ರಂದು ಬುಧವಾರ 11 ಗಂಟೆಗೆ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯ ಸಭಾಂಗಣದಲ್ಲಿ ಕಾರ್ಮಿಕರ ದಿನಾಚರಣೆ ಅಂಗವಾಗಿ ಕಾರ್ಮಿಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಕೈಗಾರಿಕಾ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಜಗದೀಶ್ ಉದ್ಘಾಟಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಇಎಸ್‌ಐ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನ ಕೆ.ಆರ್.ಮೊಹಲ್ಲಾದ ಶ್ರೀ ಸೀತಾರಾಮಮಂದಿರ ಟ್ರಸ್ಟ್ ಆಶ್ರಯದಲ್ಲಿ ಜರುಗಿದ ಶ್ರೀ ರಾಮ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅನ್ನ ಸಂತರ್ಪಣೆಗೆ ಚಾಲನೆ ನೀಡಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಮಹೇಶ್, ಉಮೇಶ್, ಮಾರುತಿ, ಮಂಜು, ಕುಮಾರ್, ವಸಂತ್ ಮತ್ತಿತರರು ಉಪಸ್ಥಿತರಿದ್ದರು.

ತನಿಖಾಧಿಕಾರಿಗಳ ಮುಂದೆ ಪ್ರಜ್ವಲ್ ರೇವಣ್ಣ ಶರಣಾಗಲಿ

ಮೈಸೂರು,ಏ.30–ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಸಂಸದ ಪ್ರಜ್ವಲ್ ರೇವಣ್ಣ ಅವರ ವರ್ತನೆಯನ್ನು ಖಂಡಿಸಿರುವ ಮಹಿಳಾ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರೇಖಾ ಶ್ರೀನಿವಾಸ್, ಕೂಡಲೇ ತನಿಖಾಧಿಕಾರಿಗಳ ಮುಂದೆ ಶರಣಾಗುವಂತೆ ಆಗ್ರಹಿಸಿದ್ದಾರೆ. ಪ್ರಜ್ವಲ್ ಮಾಡಿರುವ ಈ ಕೃತ್ಯದಿಂದಾಗಿ ಇಡೀ ಕರ್ನಾಟಕದ ಜನತೆ ದೇಶದ ಮುಂದೆ ತಲೆತಗ್ಗಿಸುವಂತಾಗಿದೆ. ಅವರಿಗೆ ಮಾನಸಿಕ ಅಸ್ವಸ್ಥತೆ ಇರಬಹುದು. ಬೇಟಿ ಬಚಾವೋ ಯೋಜನೆ ಬರೀ ಡೋಂಗಿಯಾಗಿದ್ದು, ಪ್ರಜ್ವಲ್‌ನಂತಹ ಕಾಮುಕ ವ್ಯಕ್ತಿಗಳನ್ನು ಸಂಸದರನ್ನಾಗಿ ಮಾಡಿದರೆ ಮುಂದೆ ದೇಶದ ಹೆಣ್ಣು ಮಕ್ಕಳ ಗತಿ ಏನು ಎಂದು ಪ್ರಶ್ನಿಸಿದರು. ಒಂದಲ್ಲಾ, ಎರಡಲ್ಲಾ, ಹತ್ತಾರು ಹೆಣ್ಣು ಮಕ್ಕಳ ಜೀವನ ಹಾಳು ಮಾಡಿರುವ ಇಂಥ ವಿಕೃತಕಾಮಿಯ ವಿರುದ್ಧ ಬಿಜೆಪಿ ಯಾಕೋ ಮೌನ ವಹಿಸಿ, ಕಾಪಾಡುತ್ತಿದೆ ಎಂದು ದೂರಿದ್ದಾರೆ.

ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್‌ನಲ್ಲಿ ಬಿ.ಆರ್.ನರೇಂದ್ರಗೆ ಪದಕ



ಇತ್ತೀಚೆಗೆ ಮೈಸೂರಿನ ಎಸ್‌ಕೆಎನ್‌ಎಸ್‌ಸಿ ಕ್ಲಬ್ ಆವರಣದಲ್ಲಿ ನಡೆದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಹಾಲಿ ಚಾಂಪಿಯನ್ ಬಿ.ಆರ್.ನರೇಂದ್ರ ಮೈಸೂರು ಸ್ಪೋರ್ಟ್ಸ್ ಕ್ಲಬ್ ಪುರುಷರ ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್ 2024ರಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಅವರು ಪುರುಷರ ಡಬಲ್ಸ್ ಟೇಬಲ್ ಟೆನ್ನಿಸ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ.

ಅಂತರಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕ್ಷಯರೋಗಿಗಳಿಗೆ ಪೌಷ್ಟಿಕ ಆಹಾರ ಕಿಟ್ ವಿತರಣೆ

ಮೈಸೂರು,ಏ.30–ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕ್ಷಯರೋಗಿಗಳಿಗೆ ಪ್ರವುದ್ಧ ಫೌಂಡೇಷನ್ ವತಿಯಿಂದ ಪೌಷ್ಟಿಕ ಆಹಾರ ಕಿಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ ಡಾ. ಮಹಮ್ಮದ್ ಸಿರಾಜ್ ಅಹಮದ್, ಪ್ರವುದ್ಧ ಫೌಂಡೇಶನ್‌ನ ವ್ಯವಸ್ಥಾಪಕ ನಿರ್ದೇಶಕ ಮಂಜುನಾಥ, ನಿರ್ದೇಶಕರಾದ ಸನಾವುಲ್ಲ, ಅಯ್ಯಪ್ಪ, ವೈದ್ಯಾಧಿಕಾರಿ ಡಾ.ಹರ್ಷ ಇನ್ನಿತರರು ಉಪಸ್ಥಿತರಿದ್ದರು.

ಈ ವೇಳೆ ಮಹಮದ್ ಸಿರಾಜ್ ಮಾತನಾಡಿ, ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದ ನಿಕ್ಷಯ್ ಮಿತ್ರ ಯೋಜನೆಯ ಬಗ್ಗೆ ತಿಳಿಸಿ, ಟಿಬಿ ರೋಗಿಗಳಿಗೆ ಔಷಧದ ಜೊತೆಗೆ ಪೌಷ್ಟಿಕ ಆಹಾರದ ಅಗತ್ಯವನ್ನು ವಿವರಿಸಿದರು. ಡಾ.ಹರ್ಷ ಮಾತನಾಡಿ, ಟಿಬಿ ರೋಗಿಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ದೊರೆಯುವ ಪರೀಕ್ಷೆ, ಚಿಕಿತ್ಸೆ ಹಾಗೂ ನಿಕ್ಷಯ್ ಯೋಜನೆ ಬಗ್ಗೆ ವಿವರಿಸಿದರು.



ಪ್ರವುದ್ಧ ಫೌಂಡೇಶನ್ ವತಿಯಿಂದ ಸುಮಾರು 25 ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ಕಿಟ್ ವಿತರಿಸಲಾಯಿತು. ಸ್ಥಳೀಯ ಮುಖಂಡರು, ಎನ್‌ಟಿಇಪಿ ಸಿಬ್ಬಂದಿ ನಾಗರಾಜ್, ಉಮೇಶ್ ಮತ್ತು ಆರೋಗ್ಯ ಕೇಂದ್ರದ ಸಿಬ್ಬಂದಿ ಭಾಗವಹಿಸಿದ್ದರು.

ಡಾ.ರಾಜ್‌ಕುಮಾರ್ ಜಯಂತ್ಯುತ್ಸವ ಸಂಪನ್ನ



ಡಾ.ರಾಜ್ ಕುಮಾರ್‌ರವರ ಮೊಮ್ಮಗಳು ಲಕ್ಷ್ಮೀ ಗೋವಿಂದ ರಾಜು ಅವರ ಪುತ್ರಿ ಪಾರ್ವತಿ ವಿನಯ್ ಹಾಗೂ ಖ್ಯಾತ ಉದ್ಯಮಿ ರವಿಗೌಡ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಏ.30–ಮೈಸೂರಿನ ಡಾ.ರಾಜ್‌ಕುಮಾರ್ ಕಲಾಸೇವಾ ಟ್ರಸ್ಟ್ ವತಿಯಿಂದ ಕೊಡುಗೈ ದಾನಿ, ಬಡವರ ಬಂಧು, ಕಲಾಪೋಷಕ ಮೈಸೂರು ಜಯರಾಂ ನೇತೃತ್ವದಲ್ಲಿ ನಿರಂತರವಾಗಿ ಒಂದು ವಾರ ಕಾಲ ನಾದಬ್ರಹ್ಮ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ರಾಜ್ ಕುಮಾರ್ 96ನೇ ಜಯಂತ್ಯುತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.


ಏ.23ರಂದು ಡಾ.ಪಿ.ಬಿ.ಶ್ರೀನಿವಾಸ್ ಅಣ್ಣಾವ್ರಿಗಾಗಿ ಹಾಡಿರುವ ಗೀತೆಗಳು, ಏ.24ರಂದು ಅಣ್ಣಾವ್ರು ಹಾಡಿರುವ ಏಕವ್ಯಕ್ತಿ (ಸೋಲೋ) ಗೀತೆಗಳು. ಏ.25ರಂದು ಅಣ್ಣಾವ್ರು ಸಹನಟರುಗಳಿಗೆ ಹಾಡಿರುವ ಗೀತೆಗಳು, ಏ.26ರಂದು ಅಣ್ಣಾವ್ರ ಚಿತ್ರಗಳ ಮಹಿಳಾ ಪ್ರಧಾನ ಗೀತೆಗಳು ಮತ್ತು ಅಣ್ಣಾವ್ರು ಹಾಡಿರುವ ಗೀತೆಗಳು, ಏ.28 ಹಾಗೂ ಏ.29ರಂದು ಅಣ್ಣಾವ್ರು ಹಾಡಿರುವ ಯುಗಳ ಗೀತೆಗಳು, ಏ.30ರಂದು ಇತರೆ ಗಾಯಕರು ಅಣ್ಣಾವ್ರಿಗಾಗಿ ಹಾಡಿರುವ ಗೀತೆಗಳು, ಅಣ್ಣಾವ್ರು ಹಾಡಿರುವ ಭಕ್ತಿಗೀತೆಗಳನ್ನು ನಗರದ ಪ್ರತಿಭಾನ್ವಿತ ಕಲಾವಿದರಿಂದ ಸುಶ್ರಾವ್ಯವಾಗಿ ಪ್ರಸ್ತುತಪಡಿಸಲಾಯಿತು.

ಮೈಸೂರು ಜಯರಾಂ ಯುವ ಕಲಾವಿದರಿಗೆ ಅವಕಾಶ ಕಲ್ಪಿಸಿ, ಅವರನ್ನು ಮುಖ್ಯವಾಹಿನಿಗೆ ತರಬೇಕೆಂದು ಅವಿರತ ಪ್ರಯತ್ನ ನಡೆಸುತ್ತಿದ್ದಾರೆ. ಮೈಸೂರಿನ ನಾದಬ್ರಹ್ಮ ಸಭಾಂಗಣದಲ್ಲಿ ಕುಳಿತು ಡಾ.ರಾಜ್‌ರವರ ಹಾಡುಗಳನ್ನು ಕೇಳುವಾಗ ಸುಮಾರು 45 ವರ್ಷಗಳ ಹಿಂದೆ ಕೇಳಿ ಹೋದ ಅನುಭವವಾಯಿತು. ಡಾ.ರಾಜ್ ಧ್ವನಿ ಗಾಯಕರು ಹಾಗೂ ಟ್ರಸ್ಟ್‌ನ ಅಧ್ಯಕ್ಷರೂ ಆದ ಮೈಸೂರು ಜಯರಾಂ ಅವರ ಪರಿಕಲ್ಪನೆ, ಯೋಚನೆ, ಆಲೋಚನೆ ಹಾಗೂ ಗಾಯನಕ್ಕೆ ಪ್ರೇಕ್ಷಕರು ಮನಸೋತು ಕೊಂಡಾಡಿದರು.



ಮೈಸೂರಿನ ರೋಟರಿ ಸೆಂಟರ್ (ರೋಟರಿ ಸ್ಕೂಲ್)ನಲ್ಲಿ ಸುಮಂಗಲಿ ಸೇವಾ ಟ್ರಸ್ಟ್ ವತಿಯಿಂದ ನಡೆದ ಸಮಾರಂಭದಲ್ಲಿ ಚಲನಚಿತ್ರ ಪೋಷಕ ನಟಿ ಮೈಸೂರು ಪ್ರೇಮಾ ಅವರಿಗೆ ಕರ್ನಾಟಕ ಪ್ರಜಾ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಿತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಶ್ರೀರಂಗಪಟ್ಟಣದ ಅಧ್ಯಕ್ಷೆ ಎನ್.ಸರಸ್ವತಿ, ಟ್ರಸ್ಟ್ ಅಧ್ಯಕ್ಷ ಹೆಚ್.ವಿ.ಪುಟ್ಟಸ್ವಾಮಿ ಇದ್ದಾರೆ.

ನೇಮಕ



ಮೈಸೂರು: ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಉದಯಗಿರಿ ನಿವಾಸಿ ತರ್ಬೇಜ್ ಖಾನ್ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.05.2024 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಥಾಬಿಂದು ಪ್ರಕಾಶನ, ಮಂಗಳೂರು:** ಪಿ.ವಿ.ಪ್ರದೀಪ್‌ಕುಮಾರ್ ಸಾರಥ್ಯದಲ್ಲಿ ಸಾಹಿತ್ಯ ಸಂಭ್ರಮ–2024 ಕೃತಿಗಳ ಅನಾವರಣ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಕರ್ನಾಟಕ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಅತಿಥಿಗಳು: ಜಿಲ್ಲಾ ಕಸಾಪ ಉಪಾಧ್ಯಕ್ಷ ಡಾ.ಟಿ.ತ್ಯಾಗರಾಜ್, ಹಿರಿಯ ಸಾಹಿತಿ ಡಾ.ಕೊಳ್ಳಪ್ಪೆ ಗೋವಿಂದ ಭಟ್ ಮಂಗಳೂರು, ಹಿರಿಯ ಲೇಖಕಿ ಪ್ರಭಾ ಶಾಸ್ತ್ರಿ ಜೋಶ್ಯುಲ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಕಾರ್ಮಿಕರ ದಿನಾಚರಣೆ ಹಾಗೂ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಕಾರ್ಯಕ್ರಮ, ಉದ್ಘಾಟನೆ: ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ. ಶುಶ್ರುತ್ ಗೌಡ, ಅಧ್ಯಕ್ಷತೆ: ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ.ರಾಮು, ಪ್ರಾಸ್ತಾವಿಕ ನುಡಿ: ವೇದಿಕೆ ರಾಜ್ಯಾಧ್ಯಕ್ಷೆ ಶ್ರೀಮತಿ ಹೆಚ್.ಎಲ್. ಯಮುನಾ, ಮುಖ್ಯ ಅತಿಥಿಗಳು: ಪಾಲಿಕೆ ಆಯುಕ್ತ ಡಾ. ಎನ್.ಎನ್. ಮಧು, ಹೆಚ್ಚುವರಿ ಆಯುಕ್ತೆ ಶ್ರೀಮತಿ ಕುಸುಮ ಕುಮಾರಿ, ನಯನ ಕುಮಾರ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ.ಕುಮಾರ್, ಜೆ.ಎಸ್.ಭೈರಲಿಂಗಯ್ಯ, ರಾಜ್ಯ ಒಕ್ಕಲಿಗರ ಸಂಘ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿ ರಾಜಕೀಯ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮೃತ್ಯುಂಜಯ ಮಿರ್ಲೆ, ಶಾಶ್ವತ ಸೇವಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಲೋಕೇಶ್, ಸ್ಥಳ: ನಗರ ವಸತಿ ರಹಿತರಿಗೆ ಆಶ್ರಯ ಕೇಂದ್ರ (ಪುರುಷರು) ವಲಯ ಕಚೇರಿ ಆವರಣ, ನ್ಯೂ ಶೇಷಾದ್ರಿ ಅಯ್ಯರ್ ರಸ್ತೆ, ವಿದ್ಯಾವರ್ಧಕ ಕಾಲೇಜು ಎದುರು, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಒಳಗುಡಿ ಉತ್ಸವ, ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಪರಮಹಂಸ ಯೋಗ ಮಹಾವಿದ್ಯಾಲಯ, ಐವೈಪಿ ಇಂಟರ್‌ನ್ಯಾಷನಲ್ ಯೋಗ ಆರ್ಗನೈಜೇಷನ್:** ಬೇಸಿಗೆ ಶಿಬಿರದ ಸಮಾರೋಪ ಮತ್ತು ಯೋಗಾಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಅಂತರರಾಷ್ಟ್ರೀಯ ಯೋಗ ತರಬೇತುದಾರ ಶಿವಪ್ರಕಾಶ್ ಗುರೂಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಿಬಿರಾರ್ಥಿಗಳಿಗೆ ಅರ್ಹತಾ ಪತ್ರ ವಿತರಣೆ: ಆಕಾಶವಾಣಿ ನಿರ್ದೇಶಕ ಎಸ್.ಎಸ್.ಉಮೇಶ್, ಯೋಗಾಚಾರ್ಯ ಪ್ರಶಸ್ತಿ ಪ್ರದಾನ: ಅರಸೀಕೆರೆ ಯೋಗಾನಂದ, ಮುಖ್ಯ ಅತಿಥಿಗಳು: ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷ ರಮೇಶ್‌ಕುಮಾರ್, ಅಂತರರಾಷ್ಟ್ರೀಯ ಯೋಗ ತರಬೇತುದಾರ ಹೆಚ್.ಎಂ.ರವಾಣಿಕರ್, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್ :** ರೋಟರಿ ವೀನಸ್ ಶ್ರಮಜೀವಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಹಿರಿಯ ಕಾರ್ಮಿಕ ಅಧಿಕಾರಿ ಎಚ್.ಪಿ. ಜಯಣ್ಣ, ಪ್ರಶಸ್ತಿ ಪುರಸ್ಕೃತರು : ಅಂಗನವಾಡಿ ಶಿಕ್ಷಕಿ ಶ್ರೀಮತಿ ಎಸ್. ರಾಧಿಕಾ, ಶುಶ್ರೂಷಕಿ ಶ್ರೀಮತಿ ಮೇರಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ–ಎನ್.ಎನ್.ಸುರೇಂದ್ರನಾಥ್ ಸಾತ್ವಿಕ್, 6.40 ಪದಸಂಸ್ಕೃತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ಮಿಶ್ರಮಾಧುರ್ಯ ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಎಂ.ಸುಮಿತ್ರ ಮತ್ತು ಸಂಗಡಿಗರಿಂದ ತತ್ವಪದಗಳು, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.45 ಹಿಂದಿ ಪಾಠ, 6.50 ಕೃಷಿರಂಗ–ಸಾವಯವ ಸಂಪದ, ಕೃಷಿಯಲ್ಲಿ ಹವಾಮಾನ ಮುನ್ಸೂಚನೆಗಳನ್ನು ಕುರಿತ ನೇರ ಫೋನ್–ಇನ್ ಕಾರ್ಯಕ್ರಮ ಭಾಗವಹಿಸುತ್ತಾರೆ ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಸಿ.ರಾಮಚಂದ್ರ ಹಾಗೂ ಕೃಷಿ ಹವಾಮಾನ ವಿಭಾಗದ ಸಹ ಸಂಶೋಧಕರಾದ ಡಾ.ಸುಮಂತ್‌ಕುಮಾರ್, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ಹಳ್ಳಿ–ಹಾಡು, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

2.05.2024 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು, ಶೇಷಾದ್ರಿಪುರಂ ಪದವಿ ಕಾಲೇಜು, ಬಸವ ಅಧ್ಯಯನ ಕೇಂದ್ರ, ಕನ್ನಡ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ:** ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಪುಷ್ಪಾರ್ಚನೆ: ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರೊ.ಎಂ.ಕೃಷ್ಣೇಗೌಡ ಅವರಿಂದ ಜನಪದ ಸಾಹಿತ್ಯದಲ್ಲಿ ಮಲೆ ಮಹದೇಶ್ವರರು ಕುರಿತು ಉಪನ್ಯಾಸ, ಅಧ್ಯಕ್ಷತೆ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಆಶಯ ನುಡಿ: ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಹೊರ ವರ್ತುಲ ರಸ್ತೆ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ:** 9ನೇ ಗುಂಪಿನ ಮೂಸಂಬಿ ತಂಡದ ಮಕ್ಕಳಿಂದ ಶ್ರೀ ಕೃಷ್ಣ ಗಾರುಡಿ ನಾಟಕ ಪ್ರದರ್ಶನ, ನಿರ್ದೇಶನ: ಕೃಷ್ಣಕುಮಾರ್ ನಾರ್ಣಕಜೆ, ಸ್ಥಳ: ವನರಂಗ, ಸಂಜೆ 6ಕ್ಕೆ.

■ **ಶ್ರೀ ಪ್ರಸನ್ನ ಸುಂದರ ರಾಮಮಂದಿರ ಸೇವಾ ಸಮಿತಿ ಟ್ರಸ್ಟ್:** ಶ್ರೀ ಕ್ರೋಧಿ ನಾಮಸಂವತ್ಸರ 88ನೇ ವರ್ಷದ ಶ್ರೀರಾಮೋತ್ಸವ, ಬೆಳಗ್ಗೆ ಅರುಣ ಪೂರ್ವಕ ಸೂರ್ಯ ನಮಸ್ಕಾರ, ಶ್ರೀ ಮದ್ರಾಮಾಯಣ ಪಾರಾಯಣ, ವೇದೋಕ್ತ ಅಭಿಷೇಕ, ಶ್ರೀ ಸೀತಾ, ಶ್ರೀ ರಾಮ ಸಹಸ್ರನಾಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ವಿದುಷಿ ನಮ್ರತಾ ಎಸ್. ಜೋಯಿಸ್ ಮತ್ತು ವೃಂದದವ ರಿಂದ ನೃತ್ಯ ರೂಪಕ ಕಾರ್ಯಕ್ರಮ, ಸ್ಥಳ:ಶ್ರೀರಾಮ ಮಂದಿರ, ಜಯನಗರ ಎರಡನೇ ಮುಖ್ಯ ರಸ್ತೆ.

ಹದಿನಾರಿನಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಪ್ರಾಥಮಿಕ ಆರೋಗ್ಯ ಕೇಂದ್ರ, ಹದಿನಾರು, ಬೆಳಗ್ಗೆ 9.30 ರಿಂದ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 7.15 ಭಾವಗೀತೆಗಳು, 10.00 ಶಾಸ್ತ್ರೀಯ ಸಂಗೀತ–ಕೆ.ಪಿ.ಉಪಾಧ್ಯಾಯ–ಕೊಳಲು, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 1.00 ಚಿತ್ರಗೀತೆಗಳು, 1.20 ಭಾವಗೀತೆ, 4.00 ಜನಪದ ಸಂಗೀತ–ಡಾ.ಪಿ.ಕೆ.ರಾಜಶೇಖರ್ ಮತ್ತು ಸಂಗಡಿಗರು, 4.30 ಸಂಧ್ಯಾರಾಗ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಟಿ. ನರಸೀಪುರ ತಾಲೂಕು ಬಿ.ಶೆಟ್ಟಿಹಳ್ಳಿ ಗ್ರಾಮದ ಕೃಷಿಕ ದಂಪತಿ ಹೊಂಬೇಗೌಡ ಹಾಗೂ ಎಸ್.ಎಸ್.ಸೌಮ್ಯ, ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ –ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 104ನೇ ಘಟಿಕೋತ್ಸವದಲ್ಲಿ ಎಂ.ಎ. ಕನ್ನಡ ವಿಷಯದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ 10 ಚಿನ್ನದ ಪದಕ ಗಳಿಸಿದ ಕೊಳ್ಳೇಗಾಲ ತಾಲೂಕು ಸತ್ತೇಗಾಲದ ತೇಜಸ್ವಿನಿ ವಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ನಾಟಕ 'ಕವಲು', ರಚನೆ–ಆರ್.ಪವನಕುಮಾರ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಭಾರತ್ ಕ್ಯಾನ್ಸರ್ ಆಸ್ಪತ್ರೆ ಬಳಿ ಹೊತ್ತಿ ಉರಿದ ಆಂಬುಲೆನ್ಸ್





ಮೈಸೂರು,ಏ.30(ಆರ್‌ಕೆ)–ಮೈಸೂರಿನ ಹೆಬ್ಬಾಳು, ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಂದೆ ಸಿಗ್ನಲ್ ಸರ್ಕಲ್‌ನಲ್ಲಿ ಇಂದು ಸಂಜೆ ಖಾಸಗಿ ಆಂಬುಲೆನ್ಸ್‌ವೊಂದು ದಿಢೀರ್ ಬೆಂಕಿಗಾಹುತಿಯಾಯಿತು.

ವಿರಾಜಪೇಟೆ ಮೂಲದ ಜೀವನ ಪಿಂಟೋ ಎಂಬುವರಿಗೆ ಸೇರಿದ ಫೋರ್ಸ್ (ಕೆಎ 48–1315) ಆಂಬುಲೆನ್ಸ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು, ಸಂಪೂರ್ಣವಾಗಿ ಸುಟ್ಟು ಹೋಗಿದೆ. ಸರ್ವಿಸ್ ಮಾಡಿಸಲು ಮೈಸೂರಿಗೆ ಬಂದು ವಾಪಸ್ ಹೋಗುತ್ತಿದ್ದಾಗ ಹೆಬ್ಬಾಳು ರಿಂಗ್ ರಸ್ತೆಯ ಭಾರತ್ ಕ್ಯಾನ್ಸರ್ ಆಸ್ಪತ್ರೆ ಎದುರಿನ ಸಿಗ್ನಲ್‌ಗಾಗಿ ಕಾಯುತ್ತಿದ್ದಾಗ ಸಂಜೆ ಸುಮಾರು 6.50ರಲ್ಲಿ ವಾಹನದ ಹಿಂದೆ ಭಾರಿ ಸದ್ದು ಕೇಳಿಸಿದೆ.

ತಕ್ಷಣ ಚಾಲಕ ಕಂ ಮಾಲೀಕ ಜೀವನ್ ಪಿಂಟೋ ಹಾಗೂ ಇತರ ಇಬ್ಬರು ಕೆಳಗೆ ಇಳಿದು ನೋಡಿದಾಗ ಬೆಂಕಿ ಹೊತ್ತಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಹೆಬ್ಬಾಳು ಕೈಗಾರಿಕಾ ಪ್ರದೇಶದ ಅಗ್ನಿಶಾಮಕ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದರಾದರೂ, ವಾಹನ ಬಹುತೇಕ ಸುಟ್ಟುಹೋಯಿತು. ವಾಹನದಲ್ಲಿದ್ದ ಸಿಲಿಂಡರ್‌ನಲ್ಲಿ ಆಕ್ಸಿಜನ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ ಎಂದು ಹೇಳಲಾಗುತ್ತಿದೆಯಾದರೂ ತನಿಖೆಯಿಂದ ನಿಜವಾದ ಕಾರಣ ತಿಳಿಯ ಬೇಕಾಗಿದೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳು ಠಾಣೆ ಪೊಲೀಸರು ತಿಳಿಸಿದ್ದಾರೆ. ಘಟನೆಯಿಂದ ವಾಹನ ಸುಟ್ಟುಹೋಗಿದೆಯಾದರೂ, ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಕೋವಿಶೀಲ್ಡ್ ಅಪರೂಪದ ಅಡ್ಡ ಪರಿಣಾಮ

ನವದೆಹಲಿ: ಕೋವಿಶೀಲ್ಡ್ ಲಸಿಕೆ ಅಪರೂಪದ ಅಡ್ಡ ಪರಿಣಾಮಗಳನ್ನು ಉಂಟು ಮಾಡಬಹುದು ಎಂದು ಬ್ರಿಟಿಷ್ ಫಾರ್ಮಾ ದೈತ್ಯ ಅಸ್ಟ್ರಾಜೆನೆಕಾ ಒಪ್ಪಿಕೊಂಡಿದೆ.

ಭಾರತದಲ್ಲಿ ಹೆಚ್ಚು ಪ್ರಮಾಣದಲ್ಲಿ ನೀಡಿದ್ದ ಕೋವಿಶೀಲ್ಡ್ ಲಸಿಕೆಯಿಂದಾಗಿ ಅತ್ಯಪರೂಪದ ಪ್ರಕರಣಗಳಲ್ಲಿ ಕೊಂಚ ಅಡ್ಡ ಪರಿಣಾಮ ಉಂಟಾಗಬಹುದು ಎಂದು ಅಸ್ಟ್ರಾಜೆನೆಕಾ ಸಂಸ್ಥೆ ಹೇಳಿದ್ದು, 'ಕೋವಿಶೀಲ್ಡ್ ಅಪರೂಪದ ಸಂದರ್ಭಗಳಲ್ಲಿ, ರಕ್ತ ಹೆಪ್ಪುಗಟ್ಟುವಿಕೆ ಮತ್ತು ಪ್ಲೇಟ್‌ಲೆಟ್ ಕಡಿಮೆಯಾಗುವಿಕೆಗೆ ಕಾರಣವಾಗುವ ಸ್ಥಿತಿಯನ್ನು ಉಂಟು ಮಾಡಬಹುದು ಎಂದು ಅಸ್ಟ್ರಾಜೆನೆಕಾ ಸಂಸ್ಥೆ ತಾನು ಸಲ್ಲಿಸಿರುವ ನ್ಯಾಯಾಲಯದ ದಾಖಲೆಗಳಲ್ಲಿ ಒಪ್ಪಿಕೊಂಡಿದೆ.

ಬ್ರಿಟನ್ ಕೋರ್ಟ್‌ನಲ್ಲಿ ಅಸ್ಟ್ರಾಜೆನೆಕಾ ವಿರುದ್ಧ ಪ್ರಕರಣ: ಇನ್ನು ಬ್ರಿಟನ್‌ನಲ್ಲಿ ಕೋವಿಶೀಲ್ಡ್ ಲಸಿಕೆಯು ಹಲವಾರು ಪ್ರಕರಣಗಳಲ್ಲಿ ಸಾವು ಮತ್ತು ತೀವ್ರತರವಾದ ಗಾಯಗಳಿಗೆ ಕಾರಣವಾದ ಆರೋಪದ ಮೇಲೆ ಅಸ್ಟ್ರಾಜೆನೆಕಾ ಮೊಕದ್ದಮೆ ಎದುರಿಸುತ್ತಿದೆ. ಯುಕೆ ಹೈಕೋರ್ಟ್‌ನಲ್ಲಿ 51 ಪ್ರಕರಣಗಳಲ್ಲಿ ಸಂತ್ರಸ್ತರು 100 ಮಿಲಿಯನ್ ಪೌಂಡ್‌ಗಳವರೆಗೆ ಪರಿಹಾರ ಬಯಸಿದ್ದಾರೆ. ಪ್ರಕರಣದ ಮೊದಲ ದೂರುದಾರರಾದ ಜೇಮೀ ಸ್ಕಾಟ್ ಅವರು ಏಪ್ರಿಲ್ 2021ರಲ್ಲಿ ಲಸಿಕೆ ಪಡೆದಿದ್ದು, ಇದು ರಕ್ತ ಹೆಪ್ಪುಗಟ್ಟುವಿಕೆಯ ನಂತರ ಶಾಶ್ವತ ಮಿದುಳಿನ ಗಾಯಕ್ಕೆ ಕಾರಣವಾಯಿತು. ಇದು ಮೆದುಳು ಕೆಲಸ ಮಾಡುವುದನ್ನು ತಡೆಯಿತು.



ತಾನು ಆಸ್ಪತ್ರೆಯಲ್ಲಿದ್ದಾಗ ಆಸ್ಪತ್ರೆ ಸಿಬ್ಬಂದಿ ತನ್ನ ಹೆಂಡತಿಗೆ ತಾನು ಸಾಯುತ್ತೇನೆ ಎಂದು ಮೂರು ಬಾರಿ ಹೇಳಿದ್ದರು ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಆರೋಪ ನಿರಾಕರಿಸಿದ ಅಸ್ಟ್ರಾಜೆನೆಕಾ: ಇನ್ನು ದೂರುದಾರರು ಮಾಡಿರುವ ಆರೋಪಗಳನ್ನು ಲಸಿಕೆ ತಯಾರಿಕಾ ಸಂಸ್ಥೆ ಅಸ್ಟ್ರಾಜೆನೆಕಾ ತಳ್ಳಿಹಾಕಿದೆಯಾದರೂ, ಫೆಬ್ರವರಿಯಲ್ಲಿ ನ್ಯಾಯಾಲಯದ ದಾಖಲೆಗಳಲ್ಲಿ ಒಂದರಲ್ಲಿ ಕೋವಿಶೀಲ್ಡ್ ಅಪರೂಪದ ಸಂದರ್ಭಗಳಲ್ಲಿ, ಟಿಟಿಎಸ್‌ಗೆ ಕಾರಣವಾಗಬಹುದು. ಟಿಟಿಎಸ್ ಅಂದರೆ ಥ್ರಂಬೋಸಿಸ್ ವಿತ್ ಥ್ರಂಬೋಸೈಟೋಪೆನಿಯಾ ಸಿಂಡ್ರೋಮ್ ಎಂದು. ಅಂದರೆ ಮಾನವರಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಮತ್ತು ಕಡಿಮೆ ರಕ್ತದ ಪ್ಲೇಟ್‌ಲೆಟ್ ಎಣಿಕೆಗೆ ಕಾರಣವಾಗುತ್ತದೆ. ಬಹಳ ಅಪರೂಪದ ಸಂದರ್ಭಗಳಲ್ಲಿ ಲಸಿಕೆಯು ಟಿಟಿಎಸ್‌ಗೆ ಕಾರಣವಾಗಬಹುದು. ಲಸಿಕೆ ಮಾತ್ರವಲ್ಲದೇ ಯಾವುದೇ ಲಸಿಕೆಯ ಅನುಪಸ್ಥಿತಿಯೂ ಕೂಡ ಟಿಟಿಎಸ್‌ಗೆ ಕಾರಣವಾಗುತ್ತದೆ ಎಂದು ಅಸ್ಟ್ರಾಜೆನೆಕಾ ಹೇಳಿದೆ ಎಂದು ವರದಿಯಾಗಿದೆ. ಅಂದಹಾಗೆ ಇಡೀ ಜಗತ್ತನ್ನು ಕಾಡಿದ ಕೋವಿಡ್ ಸಾಂಕ್ರಾಮಿಕ ತಡೆಗೆ ಅಸ್ಟ್ರಾಜೆನೆಕಾ ಮತ್ತು ಆಕ್ಸ್‌ಫರ್ಡ್ ವಿವಿಯಿಂದ ಅಭಿವೃದ್ಧಿಪಡಿಸಲಾದ ಕೋವಿಶೀಲ್ಡ್ ಅನ್ನು ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಉತ್ಪಾದಿಸಿತು. ಭಾರತದಲ್ಲಿ ಈ ಲಸಿಕೆಯನ್ನು ವ್ಯಾಪಕವಾಗಿ ನಿರ್ವಹಿಸಲ್ಪಟ್ಟಿತು. ಇದೀಗ ಇದೇ ಲಸಿಕೆ ವಿರುದ್ಧ ಅಡ್ಡ ಪರಿಣಾಮದ ಮಾತುಗಳು ಕೇಳುಬರುತ್ತಿವೆ.

ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

E-mail: manmulengg@gmail.com ದೂರವಾಣಿ: 08232–274572

ಸಂಖ್ಯೆ: ಮಂಹಾಒ/ಪಿಡಿಜಿ/WTP/2024–25 ದಿನಾಂಕ: 30.04.2024

ಪತ್ರಿಕಾ ಪ್ರಕಟಣೆ

ಮಂಡ್ಯ ಜಿಲ್ಲಾ ಹಾಲು ಒಕ್ಕೂಟ, ಮುಖ್ಯ ಡೇರಿ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆ, ಇದರ ಹಾಲು ಸಂಸ್ಕರಣಾ ಘಟಕದ ದೈನಂದಿನ ಅಗತ್ಯಗಳಿಗೆ ಪ್ರತಿದಿನ 11 ಲಕ್ಷ ಲೀಟರ್ ನೀರಿನ ಅಗತ್ಯವಿದ್ದು, ಪ್ರಸ್ತುತ ಬೇಸಿಗೆಯಿಂದಾಗಿ ಅಂತರ್ಜಲ ನೀರಿನ ಮಟ್ಟ ಕುಸಿತದಿಂದಾಗಿ, 5 ರಿಂದ 6 ಲಕ್ಷ ಲೀಟರ್ ನೀರು ಮಾತ್ರ ಲಭ್ಯವಿರುತ್ತದೆ, ಪ್ರತಿನಿತ್ಯ 4 ರಿಂದ 5 ಲಕ್ಷ ಲೀಟರ್ ನೀರಿನ ಕೊರತೆಉಂಟಾಗಿರುತ್ತದೆ. ಒಕ್ಕೂಟವು ರೈತರ ಸಂಸ್ಥೆಯಾಗಿದ್ದು ಪ್ರತಿದಿನ ರೈತರಿಂದ/ ಹೈನುಗಾರರಿಂದ ಖರೀದಿಸುವ ಹಾಲನ್ನು ಸಂಸ್ಕಾರಣೆ ಮಾಡಲೇ ಬೇಕಾಗಿರುವುದರಿಂದ ಕೊರತೆಯಾಗಿರುವ ನೀರನ್ನು ಖರೀದಿಸಲು ಒಕ್ಕೂಟವು ಇಚ್ಚಿಸುತ್ತದೆ.

ಮುಖ್ಯ ಡೇರಿ ಗೆಜ್ಜಲಗೆರೆ ಸಮೀಪದಲ್ಲಿರುವ ಕೊಳವೆ ಬಾವಿಗಳಲ್ಲಿ ನೀರಿನ ಲಭ್ಯತೆಯನ್ನು ಹೊಂದಿರುವ ಹಾಗೂ ಒಕ್ಕೂಟಕ್ಕೆ ನೀರನ್ನು ಮಾರಾಟ ಮಾಡಲು ಆಸಕ್ತಿ ಉಳ್ಳವರು ಒಕ್ಕೂಟದ ಕೆಳಕಂಡ ಅಧಿಕಾರಿಗಳನ್ನು ಕೂಡಲೇ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರ.

1.ವ್ಯವಸ್ಥಾಪಕರು (ಅಭಿ) – 9535773140
2.ಉಪ ವ್ಯವಸ್ಥಾಪಕರು (ಅಭಿ) – 9886759756
3.ತಾಂತ್ರಿಕ ಅಧಿಕಾರಿ (WTP) – 9886777228

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ತಮಿಳುನಾಡು ನಂತರ ಕರ್ನಾಟಕದಲ್ಲೂ ಲಿಕ್ವಿಡ್ ನೈಟ್ರೋಜನ್ ನಿಷೇಧ ಸಾಧ್ಯತೆ



ಬೆಂಗಳೂರು: ತಮಿಳುನಾಡು ನಂತರ ಕರ್ನಾಟಕ ಕೂಡ ಬಿಸ್ಕೆಟ್ ಮತ್ತು ಐಸ್ ಕ್ರೀಮ್‌ಗಳಂತಹ ಆಹಾರ ಪದಾರ್ಥಗಳ ಜೊತೆಗೆ ಲಿಕ್ವಿಡ್ ನೈಟ್ರೋಜನ್ ಅನ್ನು ನೇರ ಬಳಕೆಗೆ ಯಾವುದೇ ಆಹಾರ ವ್ಯಾಪಾರ ನಿರ್ವಾಹಕರ ವಿರುದ್ಧ ಕ್ರಮಕ್ಕೆ ಆದೇಶ ಹೊರಡಿಸುವ ಸಾಧ್ಯತೆಯಿದೆ. ತಮಿಳುನಾಡು ಆರೋಗ್ಯ ಇಲಾಖೆ ಏಪ್ರಿಲ್ 25ರಂದು ಹೊರಡಿಸಿದ ಆದೇಶದಲ್ಲಿ ಆಹಾರ ಪದಾರ್ಥ ಅಥವಾ ಪಾನೀಯವನ್ನು ನೀಡುವ ಮೊದಲು ದ್ರವ ಸಾರಜನಕವನ್ನು ಸಂಪೂರ್ಣವಾಗಿ ಆವಿಯಾಗಿಸಬೇಕು ಎಂದು ಹೇಳಿದೆ. ದಾವಣಗೆರೆಯಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಾಲಕನೊಬ್ಬ "ಸ್ಮೋಕ್ ಬಿಸ್ಕೆಟ್" ಸೇವಿಸಿದ ನಂತರ ಈ ನಿರ್ದೇಶನವನ್ನು ನೀಡಲಾಗಿದೆ. ಬಾಲಕ ಹೊಗೆ ಬಿಸ್ಕೆಟ್ ತಿಂದು ತೀವ್ರ ಅಸ್ವಸ್ಥನಾಗಿರುವ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ರಂದೀಪ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ, 2006ರ ಪ್ರಕಾರ ಅಂತಹ ನಿದರ್ಶನಗಳು ಕಂಡು ಬಂದರೆ ಕ್ರಮ ಕೈಗೊಳ್ಳಲು ಇಲಾಖೆಯು ಆಹಾರ ಸುರಕ್ಷಾ ಅಧಿಕಾರಿಗಳನ್ನು ಕೇಳಿದೆ ಆದಾಗ್ಯೂ, ಆರೋಗ್ಯ ಇಲಾಖೆಯು ಲಿಕ್ವಿಡ್ ನೈಟ್ರೋಜನ್ ಬಳಕೆಯ ಬಗ್ಗೆ ವಿವರವಾದ ನಿರ್ದೇಶನವನ್ನು ಇನ್ನೂ ಅಧಿಕೃತವಾಗಿ ಹೊರಡಿಸಬೇಕಾಗಿದೆ. ಆಹಾರ ಮತ್ತು ಪಾನೀಯಗಳಲ್ಲಿ ದ್ರವ ರೂಪದ ಸಾರಜನಕದ ಬಳಕೆಯನ್ನು ನಿಯಂತ್ರಿಸುವ ಅಗತ್ಯವನ್ನು ಒತ್ತಿಹೇಳಿದ ಆಸ್ಟರ್ ಸಿಎಂಐ ಆಸ್ಪತ್ರೆಯ ಕ್ಲಿನಿಕಲ್ ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್ ಸೇವೆಗಳ ಮುಖ್ಯಸ್ಥ ಎಡ್ವಿನಾರಾಜ್, ದ್ರವ ಸಾರ ಜನಕವು ಬಣ್ಣರಹಿತ ಮತ್ತು ವಾಸನೆಯಿಲ್ಲದ ಸಾರಜನಕವಾಗಿದ್ದು ಅದು ಕಡಿಮೆ ತಾಪಮಾನದಲ್ಲಿ ಇರುತ್ತದೆ.

ದ್ರವ ಸಾರಜನಕ, ಅದರ ಕುದಿಯುವ ಬಿಂದು–196 ಡಿಗ್ರಿ ಸೆಲ್ಸಿಯಸ್, ಅಸಾಧಾರಣವಾಗಿ ತಂಪಾಗಿರುತ್ತದೆ ಮತ್ತು ಅಂಗಾಂಶಗಳನ್ನು ಫ್ರೀಜ್ ಮಾಡಬಹುದು, ಇದು ಅಂಗಾಂಶಗಳಿಗೆ ಆಮ್ಲಜನಕದ ಪೂರೈಕೆಯನ್ನು ಕಡಿತಗೊಳಿಸುವ ಮೂಲಕ ಉಸಿರುಕಟ್ಟುವಿಕೆಗೆ ಕಾರಣವಾಗುತ್ತದೆ. ದ್ರವ ಸಾರಜನಕವನ್ನು ತಪ್ಪಾಗಿ ನಿರ್ವಹಿಸುವುದು ಅಥವಾ ಆಕಸ್ಮಿಕವಾಗಿ ಸೇವಿಸುವುದರಿಂದ ಅದರ ಅತ್ಯಂತ ಕಡಿಮೆ ತಾಪಮಾನದಿಂದಾಗಿ ಚರ್ಮ ಮತ್ತು ದೇಹದ ಅಂಗಗಳಿಗೆ ತೀವ್ರ ಹಾನಿ ಉಂಟಾಗುತ್ತದೆ ಎಂದು ಹೇಳಿದರು.

ಬೆಂಗಳೂರಲ್ಲಿ ಚಾಕುವಿನಿಂದ ಪರಸ್ಪರ ಇರಿದುಕೊಂಡ ಅಮ್ಮ–ಮಗಳು!

ಮಗಳು ಸಾವು, ತಾಯಿಗೆ ಚಿಕಿತ್ಸೆ

ಬೆಂಗಳೂರು: ತಾಯಿ–ಮಗಳು ಜಗಳವಾಡಿಕೊಂಡು ಪರಸ್ಪರ ಚಾಕುವಿನಿಂದ ಇರಿದುಕೊಂಡಿದ್ದು, ಮಗಳು ಮೃತಪಟ್ಟು ತಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹೃದಯ ವಿದ್ರಾವಕ ಘಟನೆ ಬೆಂಗಳೂರಿನ ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

19 ವರ್ಷದ ಪಿಯುಸಿ ವಿದ್ಯಾರ್ಥಿನಿ ಸಾಹಿತಿ ಮೃತಪಟ್ಟ ಯುವತಿ. ಶಾಸ್ತ್ರಿನಗರದಲ್ಲಿ ಸಾಹಿತಿ ಮತ್ತು ಅವರ ತಾಯಿ ವಾಸವಾಗಿದ್ದರು. ಕೆಲವು ವರ್ಷಗಳ ಹಿಂದೆ ಅವರ ತಂದೆ ಮೃತಪಟ್ಟಿದ್ದರು. ತಾಯಿ ಮತ್ತು ಮಗಳು ಪದೇ ಪದೆ ಜಗಳವಾಡುತ್ತಿದ್ದರು.

ಎಂದಿನಂತೆ ಸೋಮವಾರವೂ ರಾತ್ರಿ ಸುಮಾರು 7.30ರ ವೇಳೆಗೆ ಜಗಳ ಆರಂಭವಾಗಿದೆ. ಇಬ್ಬರೂ ಚಾಕುಗಳನ್ನು ಎತ್ತಿಕೊಂಡು ಪರಸ್ಪರ ಇರಿದುಕೊಂಡಿದ್ದಾರೆ. ತಾಯಿ ಮಗಳ ಕುತ್ತಿಗೆ ಮತ್ತು ಹೊಟ್ಟೆಗೆ ಮೂರು ಬಾರಿ ಇರಿದಿದ್ದರೆ, ಮಗಳು ತನ್ನ ತಾಯಿಗೆ ನಾಲ್ಕು ಬಾರಿ ಇರಿದಿದ್ದಾಳೆ. ಗಲಾಟೆ ಕೇಳಿದ ಅಕ್ಕಪಕ್ಕದವರು ಅವರ ಮನೆಗೆ ಧಾವಿಸಿ, ಇಬ್ಬರೂ ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ನೋಡಿ ಪೊಲೀಸರಿಗೆ ಮಾಹಿತಿ ನೀಡಿದರು.

ಚಾಕು ಇರಿತದಿಂದ ತೀವ್ರ ರಕ್ತಸ್ರಾವವಾಗಿ ಸಾಹಿತಿ ಮೃತಪಟ್ಟಿದ್ದಾರೆ. ಅವರ ತಾಯಿ ಸಹ ಚಾಕು ಇರಿತದಿಂದ ಗಾಯಗೊಂಡಿದ್ದಾರೆ. ಅಪಾಯದಿಂದ ಪಾರಾಗಿರುವ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ, ಇಬ್ಬರು ಮಾತ್ರ ಮನೆಯಲ್ಲಿ ವಾಸಿಸುತ್ತಿದ್ದರು. ತಾಯಿ ಚೇತರಿಸಿಕೊಂಡ ನಂತರವಷ್ಟೇ ಘಟನೆಗೆ ಕಾರಣ ತಿಳಿದು ಬರಲಿದ್ದು, ಆಕೆಯ ಹೇಳಿಕೆ ದಾಖಲಿಸಿಕೊಳ್ಳುತ್ತೇವೆ ಎಂದು ಪೊಲೀಸರು ತಿಳಿಸಿದ್ದಾರೆ. ಬನಶಂಕರಿ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಮಗ : "ಡ್ಯಾಡಿ ಸ್ವಲ್ಪ ಹೋಂ ವರ್ಕ್ ಮಾಡಿಕೊಡಿ"
ತಂದೆ : (ಹೆಂಡತಿ ಟಿ.ವಿ. ನೋಡುತ್ತಿದ್ದು, ಪಾತ್ರೆಗಳನ್ನು ತೊಳೆಯುತ್ತಿದ್ದಾಗ) "ನಿಮ್ಮಮ್ಮನ ಹೋಂ ವರ್ಕ್ ಮಾಡೋದ್ರಲ್ಲೇ ಏದುಸಿರು ಬಿಡ್ತಾ ಇದೀನಿ ! ಇನ್ನು ನಿನ್ನ ಶಾಲಾ ಹೋಂ ವರ್ಕ್ ಅನ್ನೂ ನನ್ನ ಮಾಡಿಕೊಡು ಅಂತಿದ್ದೀಯಲ್ಲಾ?"

ಮೈಸೂರು ಮಿತ್ರ
ಬುಧವಾರ, 1 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅಜ್ಞಾನದ ಕೆಟ್ಟ ಪರಿಣಾಮಗಳಿಂದ ನೀನು ಪಾರಾಗಲಾರೆ. –ಗುರುನಾನಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉದ್ದು ಮದ್ದನ್ನು ಕೆಡಿಸಿತು

ನಿಮ್ಮ ಪತ್ರಗಳು

■ ಶ್ರೀನಿವಾಸಪ್ರಸಾದರು ಬಹಳ ಕಾಲ ನಮ್ಮ ಮನಸ್ಸಲ್ಲಿ ಉಳಿಯುತ್ತಾರೆ

ಮಾನ್ಯರೆ,



ಹಿರಿಯ ರಾಜಕೀಯ ಮುತ್ಸದ್ದಿ, ದಲಿತ ನಾಯಕ, ಹಾಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸದಸ್ಯ, ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರ ನಿಧನ ಅತ್ಯಂತ ನೋವಿನ ಸಂಗತಿ. ರಾಜ್ಯ ಹಾಗೂ ಕೇಂದ್ರ ರಾಜಕಾರಣದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದ ಶ್ರೀನಿವಾಸ ಪ್ರಸಾದ್, ರಾಜ್ಯ ಕಂಡ ಓರ್ವ ಅಪರೂಪದ, ಸ್ವಾಭಿಮಾನಿ ರಾಜಕಾರಣಿ. ನೇರ ನಡೆ, ನುಡಿಗಳಿಗೆ ಮತ್ತೊಂದು ಹೆಸರಾಗಿದ್ದ ಶ್ರೀನಿವಾಸ ಪ್ರಸಾದ್ ಆಗಸ್ಟ್ 6, 1947 ರಂದು ಜನಿಸಿದರು. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

1974ರಲ್ಲಿ ಅಂದರೆ ತಮ್ಮ 27ನೇ ವಯಸ್ಸಿನಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಉಪ ಚುನಾವಣೆಯಲ್ಲಿ ರಾಜ್ಯ ವಿಧಾನಸಭೆಗೆ ಸ್ಪರ್ಧಿಸುವ ಮೂಲಕ ತಮ್ಮ ರಾಜಕೀಯ ಜೀವನ ಪ್ರಾರಂಭಿಸಿದ ಪ್ರಸಾದ್, ಆ ಚುನಾವಣೆಯಲ್ಲಿ ಪರಾಭವಗೊಂಡರೂ ಧೃತಿಗೆಡದೆ, 1980ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ, ಆಯ್ಕೆಯಾಗುವುದರ ಮೂಲಕ ಪ್ರಥಮ ಬಾರಿಗೆ ಲೋಕಸಭೆಯನ್ನು ಪ್ರವೇಶಿಸಿದರು. ನಂತರ, 1984, 1989, 1991 ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಪುನಃ ಆಯ್ಕೆಯಾದರು. 1999ರಲ್ಲಿ ನಡೆದ ಚುನಾವಣೆಯಲ್ಲಿ ಜೆಡಿ(ಯು) ಅಭ್ಯರ್ಥಿಯಾಗಿ ಲೋಕಸಭೆಗೆ ಆಯ್ಕೆಯಾಗಿ, ಅಂದಿನ ಪ್ರಧಾನಿ ದಿವಂಗತ ಅಟಲ ಬಿಹಾರಿ ವಾಜಪೇಯಿ ಸಂಪುಟದಲ್ಲಿ ಆಹಾರ ಖಾತೆಯ ರಾಜ್ಯ ಸಚಿವರಾಗಿ 1999ರಿಂದ 2004 ರವರೆಗೆ ಕಾರ್ಯ ನಿರ್ವಹಿಸಿದ್ದರು.

2008 ಮತ್ತು 2013ರಲ್ಲಿ ರಾಜ್ಯ ವಿಧಾನಸಭೆಗೆ ನಂಜನಗೂಡು ಮೀಸಲು ಕ್ಷೇತ್ರದಿಂದ ಆಯ್ಕೆಯಾದರು. 2013ರಲ್ಲಿ ಸಿದ್ದರಾಮಯ್ಯ ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾದಾಗ, ತಮ್ಮ ಆಪ್ತ ಬಳಗದ ಶ್ರೀನಿವಾಸ ಪ್ರಸಾದರನ್ನು ಕಂದಾಯ ಸಚಿವರನ್ನಾಗಿ ನೇಮಿಸಿದರು. ಆ ಅವಧಿಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಸಹ ಕೆಲಸ ಮಾಡಿದ ಶ್ರೀನಿವಾಸ ಪ್ರಸಾದ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಕಾರಣ ನೀಡದೇ 2017 ರಲ್ಲಿ ರಾಜ್ಯ ಸಚಿವ ಸಂಪುಟದಿಂದ ಕೈಬಿಟ್ಟಾಗ, ಕೆಂಡಾಮಂಡಲರಾದ ಶ್ರೀನಿವಾಸ ಪ್ರಸಾದ್, ಯಾವುದೇ ವಿಚಾರದಲ್ಲೂ ರಾಜೀ ಮಾಡಿಕೊಂಡವರಲ್ಲ. ಅವರು ಸ್ವಾಭಿಮಾನಿ ರಾಜಕಾರಣಿ. 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಚಾಮರಾಜನಗರ ಕ್ಷೇತ್ರದಿಂದ ಪುನಃ ಆಯ್ಕೆಯಾಗುವ ಮೂಲಕ ತಮ್ಮ ರಾಜಕೀಯ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿದ್ದರು. ಕೆಲ ವರ್ಷಗಳ ಹಿಂದೆಯೇ ರಾಜಕೀಯ ನಿವೃತ್ತಿಯ ಬಗ್ಗೆ ಮಾತನಾಡಿದ್ದ ಶ್ರೀನಿವಾಸಪ್ರಸಾದ್, ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ತಾವು ಹಿಂದೆ ನುಡಿದಿದ್ದಂತೆ, ಚುನಾವಣಾ ರಾಜಕೀಯದಿಂದಲೂ ನಿವೃತ್ತರಾಗಿದ್ದರು. ಇತ್ತೀಚೆಗೆ ಶ್ರೀನಿವಾಸ ಪ್ರಸಾದ್‌ರವರ ಆರೋಗ್ಯ ವಿಚಾರಿಸಲು ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಆತ್ಮೀಯವಾಗಿ ಮಾತನಾಡುವ ಮೂಲಕ ಮತ್ತೆ ಸಿದ್ದು–ಪ್ರಸಾದ್ ಒಂದಾದರು. ಅದಾದ ಕೆಲವೇ ದಿನಗಳಲ್ಲಿ ಶ್ರೀನಿವಾಸ ಪ್ರಸಾದ್ ಮರಳಿ ಬಾರದ ಲೋಕಕ್ಕೆ ತೆರಳಿದ್ದಾರೆ. ಓರ್ವ ಪ್ರಬಲ ದಲಿತ ನಾಯಕರಾಗಿ, ಸ್ವಾಭಿಮಾನಿ ರಾಜಕಾರಣಿಯಾಗಿ, ಶ್ರೀನಿವಾಸ ಪ್ರಸಾದ್ ಬಹುಕಾಲ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ವಿಶ್ವ ಕಾರ್ಮಿಕರ ದಿನಾಚರಣೆ : ಕಾರ್ಮಿಕರೇ ದೇಶದ ಬೆನ್ನೆಲುಬು

ಮಾನ್ಯರೆ,

ದುಡಿಯುವ ಕೈಗಳಿಲ್ಲ ಎಂದಾದರೆ ಯಾವ ಉದ್ಯಮಿಯೂ ಯಶಸ್ವಿಯಾಗಲಾರ. ಪ್ರತಿಯೊಬ್ಬ ಉದ್ಯಮಿಯ ಏಳಿಗೆಯ ಹಿಂದೆ ಸಾವಿರಾರು ಉದ್ಯೋಗಿಗಳ, ಕಾರ್ಮಿಕರ ಶ್ರಮವಿರುತ್ತದೆ. ಅರಸ ಕೆಲಸ ಪ್ರಾರಂಭಿಸಿದರೆ ಆಳೊಬ್ಬ ಏಕಾಂಗಿಯಾಗಿ ಅದನ್ನು ಪ್ರಾಮಾಣಿಕವಾಗಿ ಮುಗಿಸುತ್ತಾನೆ ಎಂದು ಫ್ರೆಂಚ್ ನೈತಿಕವಾದಿ, ಪ್ರಬಂಧಕಾರ ಜೋಸೆಫ್ ಜೋಬರ್ಟ್ ಹೇಳಿದ್ದಾರೆ.

ಕಾರ್ಮಿಕರು ಇಲ್ಲದ ದೇಶವನ್ನು ಊಹಿಸಲೂ ಸಾಧ್ಯವೇ? ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಮಿಕರು ಕಷ್ಟಪಟ್ಟು ದುಡಿಯುವುದರಿಂದ ಪ್ರತಿಯೊಂದು ದೇಶ, ರಾಜ್ಯಗಳು ಪ್ರಗತಿ ಕಾಣುತ್ತವೆ. ಕಾರ್ಮಿಕರ ಶ್ರಮ, ತ್ಯಾಗದ ಮೇಲೆಯೇ ದೇಶದ ಅಭಿವೃದ್ಧಿ ಅಡಗಿದೆ. ಇಂತಹ ಶ್ರಮಜೀವಿಗಳನ್ನು ನೆನೆಯುವ, ಗೌರವಿಸುವ ದಿನವೇ ಮೇ 1 ಆಗಿದೆ. ಹೀಗಾಗಿ, ಈ ದಿನ ವರ್ಷವಿಡೀ ದುಡಿಯುವ ಕಾರ್ಮಿಕ ವರ್ಗಕ್ಕೆ ಮೀಸಲಾಗಿದೆ. ಕಾರ್ಮಿಕರ ಶ್ರಮ, ತ್ಯಾಗ, ಕಷ್ಟಗಳನ್ನು ಈ ದಿನ ಜಗತ್ತಿನಾದ್ಯಂತ ಸ್ಮರಿಸಲಾಗುತ್ತದೆ.

ಕಾರ್ಮಿಕ ಎಂದರೆ ಕಷ್ಟದಲ್ಲಿ ಮೀಯುವ ಕಾಯಕಯೋಗಿ ಎಂದರ್ಥ. ಬಹುತೇಕ ರಾಷ್ಟ್ರಗಳು ಇಂದು ವಿಶ್ವ ಕಾರ್ಮಿಕರ ದಿನವನ್ನು ಸಂಭ್ರಮದಿಂದ ಆಚರಿಸುತ್ತವೆ. ಕಾರ್ಮಿಕರ ದಿನ, ಮೇ ಡೇ, ಲೇಬರ್ ಡೇ, ವರ್ಕರ್ಸ್ ಡೇ ಹೀಗೆ ನಾನಾ ಹೆಸರುಗಳಿಂದ ಈ ದಿನವನ್ನು ಕರೆಯಲಾಗುತ್ತದೆ. ಭಾರತದಲ್ಲಿ ಈ ಆಚರಣೆ ಶುರುವಾಗಿದ್ದು 1923ರಲ್ಲಿ ಅಂದು ಮದ್ರಾಸ್ ಅಂದರೆ ಇಂದಿನ ಚೆನ್ನೈನಲ್ಲಿ. 'ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್' ಮೊದಲ ಬಾರಿಗೆ ಭಾರತದಲ್ಲಿ ಕಾರ್ಮಿಕರ ದಿನದ ಆಚರಣೆಗೆ ನಾಂದಿ ಹಾಡಿತ್ತು. ಸದ್ಯ ಭಾರತ ಸೇರಿದಂತೆ ನಾನಾ ದೇಶಗಳು ಮೇ ಒಂದರಂದು ಈ ಕಾರ್ಮಿಕರ ದಿನವನ್ನು ಆಚರಿಸುತ್ತವೆ. ಕಾರ್ಮಿಕರ ಬೆವರೇ ಕಂಪನಿಯ ಅಭಿವೃದ್ಧಿಯಾಗಿದೆ. ಕಾರ್ಮಿಕರಿಲ್ಲದೆ ಯಾವುದೇ ಕಂಪನಿಗಳು ಪ್ರಗತಿಯಾಗಲು ಸಾಧ್ಯವಿಲ್ಲ. ಕಂಪನಿಗಳು, ಸಂಸ್ಥೆಗಳು, ಕಾರ್ಖಾನೆಗಳು ಹಾಗೂ ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಮಿಕರು ಬೆನ್ನೆಲುಬಾಗಿದ್ದಾರೆ.

ಈ ದಿನದಂದು ಕಾರ್ಮಿಕರ ಸೇವೆಯನ್ನು ಸ್ಮರಿಸುತ್ತಾ ಅವರನ್ನು ಗುರುತಿಸಿ, ಸನ್ಮಾನಿಸಿ, ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

■ ವಿಜಯನಗರ 4ನೇ ಹಂತದ ರಸ್ತೆ ಪಕ್ಕ ರಾಶಿ ರಾಶಿ ಕಸ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ, ಮೈಸೂರಿನ ಒಂದು ಪ್ರತಿಷ್ಠಿತ ಬಡಾವಣೆ. ಈ ಬಡಾವಣೆಯಲ್ಲಿ ಕಸದ ನಿರ್ವಹಣೆ ನಿಯಮಿತವಾಗಿಲ್ಲ. ಎರಡು ದಿನಕ್ಕೊಮ್ಮೆ ಕಸ ಸಂಗ್ರಹಕ್ಕೆ ಬರುತ್ತಾರೆ. ಕೆಲವೊಮ್ಮೆ ವಾರ ಕಳೆದರೂ ಬರುವುದೇ ಇಲ್ಲ. ಹೀಗಾಗಿ ಬಡಾವಣೆ ನಿವಾಸಿಗಳು ಕಸ ತೆಗೆಯುವುದನ್ನು ಕಾಯದೆ ಮನೆಯಿಂದ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ತಂದು ರಸ್ತೆ ಪಕ್ಕಕ್ಕೆ ಎಸೆದು ಹೋಗುವುದು ಇಲ್ಲವೇ ಕಸದ ರಾಶಿ ಇರುವಲ್ಲಿ ಎಸೆಯುವುದು ಸಾಮಾನ್ಯವಾಗಿದೆ. ಹೀಗಾಗಿ ವಿಜಯನಗರ 4ನೇ ಹಂತದ ಯಾವುದೇ ರಸ್ತೆಗೆ ಹೋದರು ಕಸದ ರಾಶಿ ರಾಶಿ ಕಾಣಬಹುದು. ಬಡಾವಣೆ ತುಂಬೆಲ್ಲಾ ಪ್ಲಾಸ್ಟಿಕ್ ಹಾರಾಡುತ್ತಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಎರಡು ದಿನಕ್ಕೊಮ್ಮೆಯಾದರೂ ನಿಯಮಿತವಾಗಿ ಎಲ್ಲಾ ಮನೆಗಳಲ್ಲಿ ಕಸ ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಬಡಾವಣೆ ನಿವಾಸಿಗಳು ಕೂಡ ರಸ್ತೆಗೆ ಕಸ ಎಸೆಯುವುದನ್ನು ನಿಲ್ಲಿಸಿ, ಕಸ ಸಂಗ್ರಹಕರಿಗೆ ಕಸವನ್ನು ಕೊಟ್ಟು ಪ್ರತಿಷ್ಠಿತ ಬಡಾವಣೆಯ ಸ್ವಚ್ಛತೆಗೆ ಸಹಕರಿಸಬೇಕಾಗಿ ಮನವಿ ಮಾಡಿಕೊಳ್ಳುತ್ತೇನೆ

–ಬಿ.ಸಿ.ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ವಿಷ್ಣು ಸಹಸ್ರನಾಮ



ಮಹಾಭಾರತದ ಎರಡು ಕಣ್ಣುಗಳಂತೆ ಇರುವ ಗ್ರಂಥ ರತ್ನಗಳೆಂದರೆ ಭಗವದ್ಗೀತೆ ಮತ್ತು ವಿಷ್ಣು ಸಹಸ್ರನಾಮ. ಭಗವದ್ಗೀತೆಯು ಕೃಷ್ಣಾರ್ಜುನ ಸಂವಾದ ರೂಪದಲ್ಲಿದ್ದು, ಅಧ್ಯಾತ್ಮ ಶಾಸ್ತ್ರದ ರಹಸ್ಯಗಳನ್ನೂ ಮಾನವ ಕರ್ತವ್ಯಗಳನ್ನೂ ಬೋಧಿಸುತ್ತದೆ. ಅದು ಅನುಷ್ಠಾನಕ್ಕಾಗಿ ರಚಿತವಾದ ಗ್ರಂಥ. ಅದು ಇರುವುದು ಭೀಷ್ಮ ಪರ್ವದ ಆರಂಭದಲ್ಲಿ. ವಿಷ್ಣು ಸಹಸ್ರನಾಮವು ಮಹಾಭಾರತ ಯುದ್ಧಾನಂತರ ಯುಧಿಷ್ಠಿರನು ಭೀಷ್ಮ ಪಿತಾಮಹನ ಬಳಿಗೆ ತೆರಳಿದಾಗ ಅವನಿಂದ ಪಡೆದ ಅನುಶಾಸನದಲ್ಲಿ ಎಂದರೆ ಅನುಶಾಸನ ಪರ್ವದಲ್ಲಿ ಕಂಡು ಬರುತ್ತದೆ. ಇದರಲ್ಲಿ ಪ್ರಶ್ನೆ ಕೇಳುವವನು ಧರ್ಮರಾಜ, ಎಂದರೆ ಕುಂತಿಯ ಹಿರಿಯ ಮಗ ಯುಧಿಷ್ಠಿರ. ಪ್ರಶ್ನೆಗೆ ಉತ್ತರವನ್ನು ಹೇಳುವವನು ಪಿತಾಮಹ ಭೀಷ್ಮ. ಭೀಷ್ಮನು ಶ್ರೀ ಕೃಷ್ಣನ ಪರಮಭಕ್ತ. ಶ್ರೀ ಕೃಷ್ಣನೇ ಪರಬ್ರಹ್ಮ, ಅವನೇ ಮಹಾವಿಷ್ಣು ಎಂದು ದೃಢವಾಗಿ ಅರಿತುಕೊಂಡಿದ್ದವನು. ಅವನು ಉಪದೇಶಿಸಿದ ವಿಷ್ಣು ಸಹಸ್ರನಾಮ ಜಪಕ್ಕಾಗಿ ಹೇಳಲ್ಪಟ್ಟಿದೆ. ಯುಧಿಷ್ಠಿರ ಕೇಳಿದ ಪ್ರಶ್ನೆ ಏನು?

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್॥
ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ।
ಕಿಂ ಜಪನ್ ಮುಚ್ಯತೇ ಜಂತುರ್ಜನ್ಮ ಸಂಸಾರ ಬಂಧನಾತ್ ॥

ಇಲ್ಲಿ ಆರು ಪ್ರಶ್ನೆಗಳನ್ನು ಯುಧಿಷ್ಠಿರನು ಕೇಳಿದ್ದಾನೆ.

1) ಲೋಕದಲ್ಲಿ ಮುಖ್ಯ ದೇವರು ಯಾರು?
2) ಎಲ್ಲಾ ಜೀವಾತ್ಮರು ಕೊನೆಯಲ್ಲಿ ತಲುಪುವ ಗುರಿ ಯಾವುದು?
3) ಯಾರನ್ನು ಸ್ತುತಿಸಿದರೆ ಜನರು ಆ ಗುರಿಯನ್ನು ತಲುಪಬಹುದು?
4) ಆ ಗುರಿಯನ್ನು ತಲುಪಲು ಮಾನವರು ಯಾರನ್ನು ಪೂಜಿಸಬೇಕು?
5) ನಿನ್ನ ದೃಷ್ಟಿಯಲ್ಲಿ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವಾದ ಧರ್ಮ ಯಾವುದು?
6) ಯಾವುದರ ಜಪದಿಂದ ಮನುಷ್ಯನು ಜನ್ಮ ಬಂಧನದಿಂದ ಬಿಡುಗಡೆಯನ್ನು ಪಡೆಯುವನು?

ಈ ಪ್ರಶ್ನೆಗಳಿಗೆ ಭೀಷ್ಮನು ಕೊಟ್ಟ ಉತ್ತರವಿಂತಿದೆ–

1) ಜಗತ್‌ಪ್ರಭುವೂ ದೇವತೆಗಳಿಗೂ ದೇವನೂ ಪುರುಷೋತ್ತಮನೂ ಆದ ವಿಷ್ಣುವೇ ಏಕದೈವತ.
2) ಸಹಸ್ರನಾಮದಿಂದ ಆ ವಿಷ್ಣುವನ್ನು ಸ್ತುತಿಸುವವರು ತಲುಪುವ ಗುರಿ ಆ ವಿಷ್ಣುವೇ.
3) ಭಕ್ತಿಯಿಂದ ವಿಷ್ಣುವನ್ನು ಸ್ತುತಿಸಿ ಜೀವನದ ಗುರಿಯನ್ನು ತಲುಪಬಹುದು.
4) ವಿಷ್ಣು ಪೂಜೆಯಿಂದ ಜೀವನದ ಲಕ್ಷ್ಯವನ್ನು ಪಡೆದುಕೊಳ್ಳಬಹುದು.
5) ಭಕ್ತಿಯಿಂದ ಸ್ತೋತ್ರವನ್ನು ಪಠಿಸುವುದೇ ಎಲ್ಲ ಧರ್ಮಗಳಲ್ಲಿ ಶ್ರೇಷ್ಠವಾದ ಧರ್ಮ.
6) ವಿಷ್ಣು ಸಹಸ್ರನಾಮದ ಜಪದಿಂದ ಜನ್ಮ ಬಂಧನದಿಂದ ಮುಕ್ತಿಯನ್ನು ಪಡೆಯಬಹುದು.

ಹೀಗೆಂದು ಹೇಳಿ ಭೀಷ್ಮನು ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯ ಭವತ್‌ಪ್ರಭುಃ ಎಂದು ಆರಂಭಿಸಿ ರಥಾಂಗ ಪಾಣಿರಕ್ಷೋಭ್ಯ: ಸರ್ವಪ್ರಹರಣಾಯುಧ: ಎಂದು ಸಹಸ್ರನಾಮ ಸ್ತೋತ್ರವನ್ನು ಸಂಪೂರ್ಣಗೊಳಿಸಿದ್ದಾರೆ. ಈ ಸಹಸ್ರನಾಮಗಳಲ್ಲಿ ರಾಮೋ ವಿರಾಮೋ ವಿರಜೋ ಮಾರ್ಗೋ ನೇಯೋ ನಯೋಽನಯಃ ಎಂಬಲ್ಲಿ ರಾಮನಾಮವೂ ಬಂದಿದೆ. ಈ ರಾಮನಾಮ ಅತ್ಯಂತ ಮುಖ್ಯವಾದುದು.

ರಾಮ ರಾಮೇತಿ ರಾಮೇತಿ ರಮೇ ರಾಮೇ ಮನೋರಮೇ।
ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ ॥

ಎಂಬುದು ಪರಮೇಶ್ವರನ ಮಾತಾಗಿರುವುದರಿಂದ ರಾಮ ಎಂಬ ನಾಮವೊಂದೇ ಸಹಸ್ರನಾಮದ ಸಾರವನ್ನೊಳಗೊಂಡಿದೆ. ವಿಷ್ಣು ಸಹಸ್ರನಾಮ ಜಪವನ್ನು ಮಾಡುವವರಲ್ಲಿ ಕ್ರೋಧ, ಮಾತ್ಸರ್ಯ, ಲೋಭ, ಇತರರಿಗೆ ಅಶುಭವನ್ನುಂಟು ಮಾಡುವ ದುರ್ಬುದ್ಧಿ ಎಂದೂ ಇರುವುದಿಲ್ಲವೆಂದು ಫಲಶ್ರುತಿಯಲ್ಲಿ ಹೇಳಿದ್ದಾರೆ.

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ
ನಾಶುಭಾ ಮತಿಃ ।
ಭವಂತಿ ಕೃತ ಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥

ಜಪವು ವಾಚಿಕ, ಉಪಾಂಶು, ಮನಸ ಎಂದು ಮೂರು ವಿಧ. ಎಲ್ಲರಿಗೂ ಕೇಳಿಸುವಂತೆ ಮಾಡುವ ಜಪ ವಾಚಿಕ. ಇದನ್ನು ಮಾಡಿದಾಗ ಹೇಳಿದವನಿಗೂ ಕೇಳಿದವನಿಗೂ ಪುಣ್ಯಲಾಭವುಂಟಾಗುತ್ತದೆ. ಫಲಶ್ರುತಿಯಲ್ಲಿ ಇದನ್ನು ಹೇಳಿದ್ದಾರೆ –

ಯ ಇದಂ ಶೃಣುಯಾನ್ನಿತ್ಯಂ
ಯಶ್ಚಾಪಿ ಪರಿಕೀರ್ತಯೇತ್ ।
ನಾ ಶುಭಂ ಪ್ರಾಪ್ನುಯಾತ್ ಕಿಂಚಿತ್
ಸೋಽಮುತ್ರೇಹ ಚ ಮನವಃ ॥

ಬೇರೆಯವರಿಗೆ ಕೇಳಿಸದಂತೆ, ತನಗೆ ಮಾತ್ರ ಕೇಳಿಸುವಂತೆ ಮಾಡುವ ಜಪ ಉಪಾಂಶು ಜಪ. ಪದಗಳು, ಅವುಗಳ ಅರ್ಥಗಳು ಮನಸ್ಸಿಗೆ ಕ್ರಮವಾಗಿ ತೋರಿರುವಂತೆ ಇದ್ದರೆ ಅದು ಮಾನಸ ಜಪ. ಯೋಗಿಗಳು ಇದನ್ನೇ ಮಾಡುತ್ತಾರೆ. ಇದು ವಾಚಿಕಕ್ಕಿಂತ ಹೆಚ್ಚು ಫಲವನ್ನು ನೀಡುತ್ತದೆ. ಇದರಲ್ಲಿ ಅರ್ಥಾನುಸಂಧಾನವೂ ಮುಖ್ಯ. ಅರ್ಥಾನು ಸಂಧಾನವಿಲ್ಲದಿದ್ದರೆ ಜಪದ ಪೂರ್ಣ ಫಲ ದೊರಕದು. ಸಹಸ್ರನಾಮದ ಒಂದೊಂದು ನಾಮವೂ ಆಧ್ಯಾತ್ಮಿಕಾರ್ಥಗಳಿಂದ ತುಂಬಿದೆ. ಉದಾಹರಣೆಗೆ –

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ।
ಅವ್ಯಹಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ॥

ಎಂಬುದನ್ನು ತೆಗೆದುಕೊಳ್ಳೋಣ. ವಿಷ್ಣುವು ಪೂತಾತ್ಮನು. ಪೂತಃ ಆತ್ಮಾ ಯಸ್ಯ ಸಃ ಶಂಕರಾಚಾರ್ಯರು ಹೇಳುವ ಹಾಗೆ ಭಗವಂತನು ನಿರ್ಗುಣನಾದ್ದರಿಂದ ಅವನು ಸದಾ ಪವಿತ್ರನಾಗಿರುತ್ತಾನೆ. ಯಾವ ಗುಣಗಳ ಉಪರಾಗ ಅಥವಾ ಸಂಪರ್ಕವು ಭಗವಂತನಲ್ಲಿದ್ದರೂ ಅದು ಅವನ ಇಚ್ಛೆಯಿಂದ ಮಾತ್ರ. ಸಗುಣಬ್ರಹ್ಮವನ್ನು ಒಪ್ಪಿಕೊಳ್ಳುವವರ ದೃಷ್ಟಿಯಿಂದ ನೋಡಿದರೆ ಭಗವಂತನಲ್ಲಿ ಕೇವಲ ಕಲ್ಯಾಣ ಗುಣಗಳು ಮಾತ್ರ ಇರುವುದರಿಂದ ಶ್ರೀ ವಿಷ್ಣು ಪೂತಾತ್ಮಾ. ಪರಮಾತ್ಮಾ ಎಂದರೆ ಕಾರ್ಯಕಾರಣ ವಿಲಕ್ಷಣನಾದ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವುಳ್ಳವನು. ಪರಮ ಎಂದರೆ ಅವನಿಗಿಂತ ಮೇಲೆ ಇನ್ನೊಂದು ಇಲ್ಲ. ಮುಕ್ತಾನಾಂ ಪರಮಾಗತಿಃ, ಅದೇ ಪರಮಗತಿ. ಅಲ್ಲಿಗೆ ಹೋಗಿ ಸೇರಿದವರಿಗೆ ಮತ್ತೆ ಜನ್ಮಮೃತ್ಯುಗಳ ಸೋಂಕು ಇಲ್ಲ. ಇದನ್ನೇ ಭಗವದ್ಗೀತೆಯಲ್ಲಿ –

ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ॥

ಎಂದು ವಿವರಿಸಲಾಗಿದೆ. ಅನಾವೃತ್ತಿಃ ಶಬ್ದಾತ್ ಎಂಬ ಬ್ರಹ್ಮ ಸೂತ್ರವೂ ಇದನ್ನೇ ಸಮರ್ಥಿಸಿದೆ. ಅವ್ಯಯ ಎಂದರೆ ವ್ಯಯ, ನಾಶ, ವಿಕಾರ ಇಲ್ಲದವನು. ಅಜರೋಽಮರೋಽವ್ಯಯಃ ಎಂದು ಶ್ರುತಿಯೂ ಘೋಷಿಸುತ್ತಿದೆ. ಪುರುಷ ಎಂದು ಭಗವಂತನನ್ನು ಇಲ್ಲಿ ಕರೆದಿದ್ದಾರೆ. ನಿಜವಾಗಿ ಹೇಳಬೇಕೆಂದರೆ ವಿಷ್ಣುವೊಬ್ಬನೇ ಪುರುಷ. ಜೀವಾತ್ಮರೆಲ್ಲ ಸ್ತ್ರೀರೂಪರು. ಇದನ್ನೇ ಶಿವಶರಣರು 'ಲಿಂಗ ಪತಿ, ಶರಣ' ಸತಿ ಎಂದು ನಿರೂಪಿಸಿದ್ದಾರೆ.

ಪುರುಷ ಶಬ್ದಕ್ಕೆ ಅನೇಕ ವ್ಯಾಖ್ಯಾನಗಳನ್ನು ಶಂಕರಾಚಾರ್ಯರು ಭಾಷ್ಯದಲ್ಲಿ ಮಾಡಿದ್ದಾರೆ. ಭಗವಂತನು ಸರ್ವ ಕಾರ್ಯಗಳನ್ನೂ ಸಾಕ್ಷಾತ್ ನೋಡುತ್ತಿರುವುದರಿಂದ ಸಾಕ್ಷೀ. ಸರ್ವಸಾಕ್ಷಿಯಾಗಿರುವ ಬೇರೆ ಯಾರು ಇರಲು ಸಾಧ್ಯ? ಕ್ಷೇತ್ರ ಎಂದರೆ ಶರೀರ. ಅದನ್ನು ಅರಿತುಕೊಳ್ಳುತ್ತಿರುವವನು ಕ್ಷೇತ್ರಜ್ಞ. ಎಲ್ಲ ಜೀವರಲ್ಲಿ ಅಂತರ್ಯಾಮಿಯಾಗಿ ಕ್ಷೇತ್ರಜ್ಞನಾಗಿರುವವನು ಆ ವಿಷ್ಣುವೇ.

'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ'

ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನೇ ಹೇಳಿದ್ದಾನೆ. ಅಕ್ಷರ ಎಂದರೆ ಕ್ಷರವಲ್ಲದ ಶಾಶ್ವತ ಸ್ವರೂಪವನ್ನುಳ್ಳ ವಿಷ್ಣು.

ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ॥

ಎಂಬುದೂ ಭಗವದ್ಗೀತಾವಾಕ್ಯ.

ಹೀಗೆ ವಿಷ್ಣು ಸಹಸ್ರನಾಮದ ಒಂದೊಂದು ನಾಮವನ್ನು ಪಠಿಸಿದಾಗಲೂ ನಾನಾರ್ಥಗಳು ಹೊಳೆಯುತ್ತವೆ. ಭಗವಂತನ ವೈಭವ ಕೊನೆಯಿಲ್ಲದ್ದು. ಒಂದು ನಾಮದ ಪೂರ್ಣಾರ್ಥವನ್ನೇ ಗ್ರಹಿಸಲು ನಾವು ಅಶಕ್ತರು. ಸಹಸ್ರನಾಮಗಳನ್ನು ಅರ್ಥ ಸಹಿತವಾಗಿ ಅರಿತುಕೊಳ್ಳಲು ಪುರುಷಾಯುಷವೇ ಸಾಲದು

ಏಕೋ ವಿಷ್ಣು ರ್ಮಹದ್ ಭೂತಂ
ಪೃಥಗ್‌ಭೂತಾನ್ಯನೇಕಶಃ।
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ
ಭುಂಕ್ತೇ ವಿಶ್ವಭುಗವ್ಯಯಃ॥

ಇಳಿವಯಸಲ್ಲಿ ನೆಮ್ಮದಿ ಜೀವನ...!

ಒಂದು ಮಾತಿದೆ, ಅಂದರೆ ಕಡ್ಡಾಯವಾಗಿ ಎಲ್ಲರಿಗೂ ಮುಪ್ಪು ಆವರಿಸುತ್ತದೆ. ಆದರೆ ಮುಪ್ಪಾಗಿದೆ ಅಂತ ಮನಸ್ಸಿಗೆ ತೆಗೆದುಕೊಂಡು ಬೇಸರಿಸಿಕೊಳ್ಳೋದು ಐಚ್ಛಿಕ ವಿಷಯ (Getting old is Mandatory, Feeling old is optional).



ಎಷ್ಟೋ ಜನರು ತಮ್ಮ ವಯಸ್ಸು ಅರವತ್ತರ ಆಸುಪಾಸಿಗೆ ಬಂದ ಕೂಡಲೇ ವಿನಾಕಾರಣ ಗಾಬರಿ, ಗೊಂದಲಕ್ಕೊಳಗಾಗುತ್ತಾರೆ. ಹೀಗೆ ಆತಂಕಕ್ಕೊಳಗಾಗದೆ, ವಯಸ್ಸು ಆಗುವುದು ದೇಹಕ್ಕೇ ಹೊರತೂ ಮನಸ್ಸಿಗಲ್ಲ ಎಂದು ಅರಿತು ಲವಲವಿಕೆಯಿಂದ ಇರಲು ಪ್ರಯತ್ನಿಸಬೇಕು.

ತಮ್ಮ ಅರವತ್ತನೆ ವಯಸ್ಸಿನಲ್ಲಿ ಕೆಲಸದಿಂದ ನಿವೃತ್ತಿಗೊಳ್ಳುವ ಸರ್ಕಾರಿ ಕಚೇರಿ ಅಥವಾ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ನೌಕರರಿಗೆ, ಸ್ವಂತ ಉದ್ಯೋಗ, ಕೃಷಿ, ಬೇರೆ ಯಾವುದಾದರೂ ವೃತ್ತಿ ಮಾಡಿ ವಯೋಸಹಜ ಕಾರಣದಿಂದ ವಿಶ್ರಾಂತ ಜೀವನ ನಡೆಸುವುದಕ್ಕೆ ನಿರ್ಧಾರ ತೆಗೆದುಕೊಂಡವರಿಗೆ, ಸುಖಮಯವಾದ ನೆಮ್ಮದಿಯ ಜೀವನ ನಡೆಸಲು ಇಲ್ಲಿವೆ ಕೆಲವೊಂದು ಟಿಪ್ಸ್‌ಗಳು.

- ನನಗೆ ವಯಸ್ಸಾಗಿದೆ, ಆಗುತ್ತಾ ಇದೆ ಅಂತ ಯೋಚಿಸುವುದನ್ನು ಬಿಟ್ಟುಬಿಡಿ. ಮನಸ್ಸನ್ನು ಲವಲವಿಕೆಯಿಂದ ಇಟ್ಟುಕೊಳ್ಳಿ.
- ಒಮ್ಮೆ ನಿವೃತ್ತರಾದ ಮೇಲೆ ತೀರಾ ಸಂಸಾರ ತೂಗಿಸುವ ಅವಶ್ಯಕತೆ ಇದ್ದು, ಅನಿವಾರ್ಯ ಆದರೆ ಮಾತ್ರ ಕೆಲಸಕ್ಕೆ ಹೋಗಿ. ಏಕೆಂದರೆ ದೇಹ ಮತ್ತು ಮನಸ್ಸಿಗೆ ಅರವತ್ತರ ನಂತರ ಸ್ವಲ್ಪ ವಿಶ್ರಾಂತಿ ಅತ್ಯಗತ್ಯ.
- ಬೆಳಗ್ಗೆ ಬೇಗ ಏಳುವುದನ್ನು ಅಭ್ಯಾಸ ಮಾಡಿಕೊಳ್ಳಿ. ಎದ್ದ ಕೂಡಲೇ ಕನಿಷ್ಠ ನಲವತ್ತರಿಂದ ಅರವತ್ತು ನಿಮಿಷ ಒಳ್ಳೆಯ ಜಾಗದಲ್ಲಿ ವಾಯು ವಿಹಾರ ಅಥವಾ ನಿಮ್ಮ ದೇಹಕ್ಕೆ ಹೊಂದುವಂತಹ ವ್ಯಾಯಾಮ ಮಾಡಿ.
- ನಂತರ ದಿನಪತ್ರಿಕೆಯನ್ನು ವಿವರವಾಗಿ ಓದಿ. ಒಳ್ಳೆಯ ಪುಸ್ತಕಗಳನ್ನು, ಧಾರ್ಮಿಕ ಗ್ರಂಥಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ.
- ಸ್ವಲ್ಪ ಹೊತ್ತು ಟಿವಿ ನೋಡಿ, ಸ್ವಲ್ಪ ಹೊತ್ತು ಸಂಗೀತ ಕೇಳಿ. ಮನಸ್ಸಿಗೆ ಉಲ್ಲಾಸ ಉಂಟಾಗುತ್ತದೆ.
- ಸ್ವಲ್ಪ ಸಮಯ ಬಾಳಸಂಗಾತಿ ಜೊತೆ ಕಳೆಯಲು ಮೀಸಲಿಡಿ. ಮೊಮ್ಮಕ್ಕಳನ್ನು ಆಟ ಆಡಿಸಿ. ಶಾಲೆ ಹತ್ತಿರವಿದ್ದು ನಿಮಗೆ ಬಿಟ್ಟು ಬರಲು ಸಾಧ್ಯವಿದ್ದರೆ ಪ್ರತಿದಿನ ಹೋಗಿ ಮಕ್ಕಳ ಬಿಟ್ಟು ಬನ್ನಿ.
- ಸಮೀಪದಲ್ಲಿ ಯಾವುದಾದರೂ ಸಾಂಸ್ಕೃತಿಕ ಕಾರ್ಯಕ್ರಮವಿದ್ದರೆ ಅಥವಾ ಯಾರದ್ದಾದರೂ ಪ್ರವಚನವಿದ್ದರೆ ತಪ್ಪದೇ ಹೋಗಿ ನೋಡಿ.
- ಸಮಾನ ವಯಸ್ಸಿನ ಹಾಗೂ ಮನಸ್ಸಿನವರೊಂದಿಗೆ ಸ್ನೇಹ ಬೆಳೆಸಿಕೊಳ್ಳಿ ಹಾಗೂ ಯಾವಾಗಲಾದರೊಮ್ಮೆ ಅವರೊಂದಿಗೆ ಪ್ರವಾಸಕ್ಕೆ ಹೋಗಿ ಬರ್ತಾ ಇರಿ.
- ಬಿ.ಪಿ, ಶುಗರ್ ಇದೆ ಎಂದು ಆತಂಕಬೇಡ. ಈಗ ಅದು ಬಹುತೇಕರಿಗೆ ನಲವತ್ತಕ್ಕೆ ಬರುವ ಒಂದು disorder. ಇದು ಒಂದು ದೊಡ್ಡ ಕಾಯಿಲೆ ಅಲ್ಲ. ಆದರೆ ಇದರ ಬಗ್ಗೆ ನಿರ್ಲಕ್ಷ್ಯ ಬೇಡ. ವೈದ್ಯರಿಗೆ ಆಗಾಗ್ಗೆ ತೋರಿಸಿಕೊಂಡು ಅವರ ಸಲಹೆಯಂತೆ ಔಷಧ ಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಿ.
- ನಿಮ್ಮ ದೇಹಕ್ಕೆ ಒಗ್ಗುವಂತಹ ಆಹಾರವನ್ನು ಮಾತ್ರ ಸೇವಿಸಿರಿ ಹಾಗೂ ಅದನ್ನು ಸರಿಯಾದ ಸಮಯಕ್ಕೆ ತೆಗೆದುಕೊಳ್ಳಿ.
- ಹೊರಗಡೆ ಕೆಲಸ ಮಾಡಿ ಸುಸ್ತಾಗಿ ಮನೆಗೆ ಬರುವ ಮಗ, ಸೊಸೆ ನಿಮ್ಮ ಹತ್ತಿರವೇ ಕೂತು ಸಮಯ ಕಳೆಯಲಿ. ಸದಾ ನಿಮ್ಮ ಸೇವೆನೇ ಮಾಡಲಿ ಅಂತ ನಿರೀಕ್ಷೆ ಇಟ್ಟುಕೊಂಡು ನಿರಾಶರಾಗಬೇಡಿ. ಈಗಿನ ಯಾಂತ್ರಿಕ ಬದುಕಿನಲ್ಲಿ ಅದು ಕಷ್ಟ.
- ನಿಮ್ಮ ಮಗ ಮತ್ತು ಸೊಸೆ ತೆಗೆದುಕೊಳ್ಳುವ ಅವರ ವೈಯಕ್ತಿಕ ಜೀವನದ ಎಲ್ಲಾ ನಿರ್ಧಾರಗಳಿಗೂ ಮೂಗು ತೂರಿಸಬೇಡಿ. ಅದು ಹೆಚ್ಚಿನವರಿಗೆ ಇಷ್ಟ ಆಗುವುದಿಲ್ಲ. ಇದು ಸುಮ್ಮನೆ ಮನಸ್ತಾಪಕ್ಕೆ ಕಾರಣವಾಗುತ್ತದೆ.

ಈ ಹನ್ನೆರಡು ಸೂತ್ರವನ್ನು ಯಾವುದೇ ನೌಕರಿಯಿಂದ ನಿವೃತ್ತರಾಗಿ ವಿಶ್ರಾಂತ ಜೀವನ ನಡೆಸುವ ಎಲ್ಲರೂ ಪಾಲಿಸಿದರೆ ಮುಪ್ಪಿನಲ್ಲೂ ಅದೇ ಉಲ್ಲಾಸ, ಉತ್ಸಾಹದಿಂದ ಜೀವನ ಸಾಗಿಸಬಹುದು. ವಯಸ್ಸಾಗುವುದು ದೇಹಕ್ಕೆ ಹೊರತು ಮನಸ್ಸಿಗಲ್ಲ ಎಂದು ಅರಿಯಬೇಕು.

ಹಾಗೆಯೇ ಬದುಕಿನ ಮುಸ್ಸಂಜೆಯಲ್ಲಿ ಕಾಲ ಕಳೆಯುತ್ತಿರುವವರ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರೂ ಕೂಡ ಅವರನ್ನು ಸ್ವಲ್ಪ ಪ್ರೀತಿಯಿಂದ ಕಾಣಬೇಕು. ಕೆಲವರು ವಯೋಸಹಜ ಕಾರಣಗಳಿಂದ ದೈಹಿಕ ಹಾಗೂ ಮಾನಸಿಕವಾಗಿ ಕುಗ್ಗಿ ಹೋಗಿರುತ್ತಾರೆ. ಅಂತಹವರ ಬಗ್ಗೆ ಸ್ವಲ್ಪ ಜಾಸ್ತಿ ಗಮನವಿರಲಿ. ಮನೆಯವರ ಪ್ರೀತಿ ಅವರಲ್ಲಿ ಲವಲವಿಕೆ ಹೆಚ್ಚಿಸುತ್ತದೆ.

●ರಾಘವೇಂದ್ರ ಜೋಯಿಸ್
9880398355

ದುಡಿವವರ ಬದುಕು ಹಸನಾಗಲಿ



ವಿಶ್ವಾದ್ಯಂತ ಮೇ ಒಂದರಂದು ಕಾರ್ಮಿಕ ಬಾಂಧವರು ಕಾರ್ಮಿಕ ದಿನಾಚರಣೆಯನ್ನು ಸಡಗರ ಮತ್ತು ಸಂಭ್ರಮಗಳಿಂದ ಆಚರಿಸುವ ಮೂಲಕ ಶ್ರಮಿಕ ವರ್ಗದ ಧೀಶಕ್ತಿಯನ್ನು ಪ್ರದರ್ಶಿಸುವುದು ವಾಡಿಕೆಯಾಗಿದೆ. ಕಾರ್ಮಿಕರ ಶಕ್ತಿ ಮತ್ತು ಐಕ್ಯತೆಯನ್ನು ಪ್ರದರ್ಶಿಸಲು ಕೂಡ ಮೇ ದಿನಾಚರಣೆ ಒಂದು ವೇದಿಕೆಯಾಗಬಲ್ಲದು. ಭಾರತದಲ್ಲಿ ಮೇ ದಿನಾಚರಣೆಯನ್ನು ಪ್ರಪ್ರಥಮವಾಗಿ 01.05.1923 ರಂದು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಆಚರಿಸಲಾಯಿತು. ಕಾರ್ಮಿಕ ಅಥವಾ ಶ್ರಮಿಕ ವರ್ಗ ಇಂದು ಹತ್ತು ಹಲವು ಸಂಕೋಲೆಗಳಿಂದ ಬಂಧಿಯಾಗಿದೆ. ದೇಶಾದ್ಯಂತ ತನ್ನ ಕರಾಳ ಹಸ್ತವನ್ನು ಚಾಚಿರುವ ನಿರುದ್ಯೋಗ, ಇಡೀ ಕಾರ್ಮಿಕ ವರ್ಗಕ್ಕೆ ನುಂಗಲಾಗದ ತುತ್ತಾಗಿದೆ. ಇದರ ಜೊತೆಗೆ, ಲಾಕ್ ಔಟ್, ಲೇ ಆಫ್ ಮುಂತಾದ ಉಪಕ್ರಮಗಳು ಕಾರ್ಮಿಕರ ಪಾಲಿಗೆ ವಿಷಮಕಾರಿಯಾಗಿ ಪರಿಣಮಿಸಿವೆ. ದೇಶಾದ್ಯಂತ ಅನೇಕ ರೀತಿಯ ಮುಷ್ಕರಗಳು ನಡೆಯುತ್ತಲೇ ಇರುತ್ತವೆ. ಕಾರ್ಮಿಕ ಬಾಂಧವರು ಎಂದಿಗಿಂತ ಹೆಚ್ಚಿನ ರೀತಿಯ ಕಷ್ಟನಷ್ಟಗಳಿಗೆ ತುತ್ತಾಗಿ ಒಂದು ರೀತಿಯ ಅತಂತ್ರವಾದ ಬದುಕನ್ನು ಸಾಗಿಸುತ್ತಿದ್ದಾರೆ. ಕೆಲವು ಕಾರ್ಮಿಕ ಕಾನೂನುಗಳಿಗೆ ಇತ್ತೀಚೆಗೆ ತಂದ ತಿದ್ದುಪಡಿಗಳು ದುಡಿಯುವ ವರ್ಗಕ್ಕೆ ಮಾರಕವಾಗಿವೆ ಎಂದು ಹೇಳಲಾಗುತ್ತಿದೆ. ಸರಿ ಸುಮಾರು ಕಳೆದ ಮೂರು ವರ್ಷಗಳಷ್ಟು ಕಾಲದಿಂದ ಭಾರತ ಸೇರಿದಂತೆ ಇಡೀ ವಿಶ್ವವನ್ನೇ ಕಾಡುತ್ತಿದ್ದ ಕೊರೊನಾ ಸೋಂಕು, ಕಾರ್ಮಿಕರ ಪಾಲಿಗಂತೂ ನುಂಗಲಾಗದ ತುತ್ತಾಗಿತ್ತು. ಅವರಿಗೆ ಕಂಟಕವಾಯಿತು.

ಕೊರೊನಾ ಸೋಂಕಿನ ಉಪಟಳ ವಿಶ್ವಾದ್ಯಂತ ಶ್ರಮಿಕ ವರ್ಗದ ಮೇಲೆ ಸಾಕಷ್ಟು ದುಷ್ಪರಿಣಾಮಗಳನ್ನು ಬೀರಿತು. ನೂರಾರು ಕಾರ್ಖಾನೆಗಳ ಉತ್ಪಾದನೆ ಇಲ್ಲದೇ ಮುಚ್ಚಬೇಕಾಯಿತು. ಹಲವಾರು ದೇಶಗಳ ಅರ್ಥ ವ್ಯವಸ್ಥೆ ಹಳಿತಪ್ಪಿತು. ಸುದೈವವಶಾತ್, ಕೊರೊನಾ ಸೋಂಕು ನಿಯಂತ್ರಣಕ್ಕೆ ಬಂದು ಎಲ್ಲಾ ದೇಶಗಳ ಆರ್ಥಿಕತೆ ಚೇತರಿಕೆಯ ಹಾದಿ ಹಿಡಿದಿರುವುದು ಸಮಾಧಾನಕರ ಸಂಗತಿ. ಭಾರತ ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವುದು ಸಹ ಸ್ವಾಗತಾರ್ಹವಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ಭಾರತ ವಿಶ್ವದ 3 ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂಬ ವಿಶ್ವಾಸವನ್ನು ಅನೇಕ ಆರ್ಥಿಕ ತಜ್ಞರು ವ್ಯಕ್ತಪಡಿಸಿದ್ದಾರೆ.

ಸ್ನಾತಕೋತ್ತರ ಪದವಿ ಪಡೆದವರೂ ಕೂಡ ಹಂಗಾಮಿ ಉಪನ್ಯಾಸಕರಾಗಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇವರಿಗೆ ಯಾವುದೇ ರೀತಿಯ ಸೌಲಭ್ಯವೂ ಇಲ್ಲ. ಮತ್ತೇ ಕೆಲವರಿಗೆ ಒಂದು ಸೌಲಭ್ಯ ಸಿಕ್ಕರೆ, ಮತ್ತೊಂದು ಸಿಗಲಾರದು. ಹಾಗಂತ ಇರುವ ಕೆಲಸವನ್ನು ಬಿಟ್ಟು ಬಾಯಿಗೆ ಮಣ್ಣು ಹಾಕಿಕೊಳ್ಳಲು ಇವರಿಗೆ ಇಷ್ಟವಿಲ್ಲ. ಹಾಗೋ, ಹೀಗೋ ಅದಕ್ಕೆ ಜೋತು ಬಿದ್ದಿರುತ್ತಾರೆ. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾಗಿ, ಪುರುಷರಿಗೆ ಸರಿ ಸಮನಾಗಿ ಮಹಿಳೆಯರು ಕೂಡ ಮೂಗಿಗೆ ಕವಡೆ ಕಟ್ಟಿಕೊಂಡವರ ಹಾಗೇ ದುಡಿಯುತ್ತಿದ್ದಾರೆ. ಇವರಿಗೆ ಬರುವ ಅಲ್ಪ ವೇತನದಲ್ಲಿ ಮನೆಯ ಎಲ್ಲಾ ಸದಸ್ಯರ ತುತ್ತಿನ ಚೀಲ ತುಂಬಿಸಬೇಕಾದ ದಾರುಣ ಪರಿಸ್ಥಿತಿ ಎಷ್ಟೋ ಮನೆಗಳಲ್ಲಿ ಇದೆ. ಖಾಸಗೀಕರಣದ ಹೆಸರಲ್ಲಿ ಸರ್ಕಾರಿ ಒಡೆತನದ ಅನೇಕ ಕಾರ್ಖಾನೆಗಳು ಖಾಸಗೀಯವರ ಪಾಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಆಧಾರಿತ ಹಾಗೂ ಸಾಫ್ಟ್ ವೇರ್ ಕಂಪನಿಗಳಲ್ಲಿ ಸಹ ಉದ್ಯೋಗ ಕಡಿತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಭಾರತೀಯ ನೌಕರ ಇಂದು ಅತ್ಯಂತ ಅಗ್ಗಕ್ಕೆ ಸಿಗುವ ವಸ್ತುವಾಗಿ ಬಿಟ್ಟಿದ್ದಾನೆಂಬುದನ್ನು ನಂಬಲೇಬೇಕಾದ ಘೋರ ಸತ್ಯ. ಹಾಗಂತ ಕಾರ್ಮಿಕರು ಮಾಡುವುದೆಲ್ಲಾ ಸರಿ ಎಂದು ನಾನು ಹೇಳುವುದಿಲ್ಲ. ಅಶಿಸ್ತು, ಸೋಮಾರಿತನ ಅವಿಧೇಯತೆ, ಮುಂತಾದ ಅವಗುಣಗಳಿಂದ ಕಾರ್ಮಿಕರು ಹೊರಬರಬೇಕಾಗಿದೆ. ಹಕ್ಕಿಗಾಗಿ ಹೋರಾಡುವ ಅವರು ತಮ್ಮ ಕರ್ತವ್ಯಗಳನ್ನು ಮರೆಯಬಾರದು. ಎಷ್ಟೋ ಕಾರ್ಖಾನೆಗಳಲ್ಲಿ ಕಾರ್ಮಿಕರ ಅಶಿಸ್ತು ಅಥವಾ ಬೇಜವಾಬ್ದಾರಿಯಿಂದಾಗಿ ಉತ್ಪಾದನೆ ಕುಂಠಿತಗೊಳ್ಳುತ್ತಿದೆ.

ಸಣ್ಣ ಪುಟ್ಟ ಕಾರಣಗಳನ್ನು ಮುಂದಿಟ್ಟುಕೊಂಡು ಮುಷ್ಕರಕ್ಕೆ ಕರೆ ಕೊಡುವುದು, ಉತ್ಪಾದನೆಯನ್ನು ಕುಂಠಿತಗೊಳಿಸುವುದು, ಕಾರ್ಮಿಕರನ್ನು ಮಾಲೀಕರ ವಿರುದ್ಧ ಎತ್ತಿ ಕಟ್ಟುವುದು, ಕಾರ್ಮಿಕ ಸಂಘಟನೆಯ ಹೆಸರಿನಲ್ಲಿ ಕೆಲಸದ ಸ್ಥಳಗಳಲ್ಲಿ ಅರಾಜಕತೆ ಸೃಷ್ಟಿಸುವುದು, ಮುಂತಾದವುಗಳಿಂದ ಕಾರ್ಮಿಕರು ಹೊರಬರಬೇಕಾಗಿದೆ. ಎಷ್ಟೋ ಕಾರ್ಖಾನೆಗಳಲ್ಲಿ ಕಾರ್ಮಿಕ ಹಾಗೂ ಮಾಲೀಕರ ನಡುವೆ ಸೌಹಾರ್ದಯುತ ಸಂಬಂಧವಿದೆ. ಕೆಲವು ಕಾರ್ಖಾನ 'ಗಳಲ್ಲಿ, ಕನ್ನಡ ರಾಜ್ಯೋ ತ್ಸವ, ಮೇ ದಿನಾಚರಣೆ ಮುಂತಾದವುಗಳನ್ನು ಆಡಳಿತ ವರ್ಗ ಹಾಗೂ ಕಾರ್ಮಿಕ ವರ್ಗ ಜಂಟಿಯಾಗಿ ಆಚರಿಸಿ ರುವ ಉದಾಹರಣೆಗಳು ನಮ್ಮ ಮುಂದಿವೆ.

ಮಾಲೀಕ ಹಾಗೂ ಕಾರ್ಮಿಕರ ನಡುವೆ ಉತ್ತಮ ಬಾಂಧವ್ಯವಿದ್ದರೆ, ಕಾರ್ಮಿಕರಿಗೂ, ಮಾಲೀಕರಿಗೂ ಕ್ಷೇಮ. ಆದರೂ ಖಾಸಗಿ ವಲಯದಲ್ಲಿ ಕಾರ್ಮಿಕರ ಶೋಷಣೆ ಹೆಚ್ಚಿನ ರೀತಿಯಲ್ಲಿ ನಡೆಯುತ್ತದೆ. ಇಂದು ಬಹುತೇಕ ಕಾರ್ಮಿಕರಲ್ಲಿ 'ಅಭದ್ರತೆ' ಹೆಚ್ಚಿನ ರೀತಿಯಲ್ಲಿ ಕಾಡುತ್ತಿದೆ. ಇಂದು ಕೆಲಸದಲ್ಲಿ ಇದ್ದವನು, ನಾಳೆಯೂ ಇರುತ್ತಾನೆ ಎಂಬ ಯಾವ ಭರವಸೆಯೂ ಇಲ್ಲ. ಬೆಂಗಳೂರು, ಮುಂಬಯಿಯಂತಹ ಮಹಾ ಮತ್ತು ಮಾಯಾನಗರಗಳ ಸಾಫ್ಟ್‌ವೇರ್ ಕಂಪನಿಗಳಲ್ಲಿ ಲಕ್ಷಾಂತರ ರೂಪಾಯಿಗಳ ಸಂಬಳ ಪಡೆಯುವ ಅಧಿಕಾರಿಗಳಲ್ಲಿ ಕೂಡ ಕೆಲಸದ ಅಭದ್ರತೆ ಬೆಂಬಿಡದೇ ಕಾಡುತ್ತಿದೆ.

ಕಾರ್ಮಿಕ ದಿನಾಚರಣೆಯನ್ನು ಸಡಗರ ಮತ್ತು ಸಂಭ್ರಮದಿಂದ ಆಚರಿಸುವ ಮನೋಸ್ಥಿತಿ ಇಂದು ಯಾವುದೇ ಕಾರ್ಮಿಕನಲ್ಲಿ ಉಳಿದಿಲ್ಲವೆಂದೇ ಹೇಳಬಹುದು. ಆದರೂ ಕಾರ್ಮಿಕ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ದೇಶದ ಎಲ್ಲಾ ಕಾರ್ಮಿಕರ ಸ್ಥಿತಿಗತಿಗಳು ಸುಧಾರಿಸಲಿ. ಅವರ ಬದುಕು ಹಸನಾಗಲಿ ಎಂದು ಹಾರೈಸೋಣ.

●ಕೆ.ವಿ.ವಾಸು, ವಕೀಲರು ಮತ್ತು ನೋಟರಿ
ಮೊ.9341731661

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜೋಯಾಲುಕ್ಕಾಸ್‌ನಿಂದ ಅಕ್ಷಯ ತೃತೀಯ ಹಬ್ಬಕ್ಕೆ ವಿಶೇಷ ಆಫರ್

ಮೈಸೂರು,ಏ.30– ಜೋಯಾಲುಕ್ಕಾಸ್, ಅಕ್ಷಯ ತೃತೀಯ ಹಬ್ಬದ ಸಂದರ್ಭದಲ್ಲಿ ವಿವಿಧ ಕೊಡುಗೆಗಳನ್ನು ಘೋಷಿಸಿದೆ. ರೂ. 50,000 ಮತ್ತು ಅಧಿಕ ಮೌಲ್ಯದ ವಜ್ರಗಳು, ಅನ್ಕಟ್ ವಜ್ರಗಳು ಮತ್ತು ಬೆಲೆಬಾಳುವ ರತ್ನಾಭರಣಗಳ ಖರೀದಿಯ ಮೇಲೆ ರೂ. 2000 ಮೌಲ್ಯದ ಉಚಿತ ಗಿಫ್ಟ್ ವೋಚರ್‌ಗಳನ್ನು ನೀಡಲಾಗುವುದು. ಇಂತಹ ಆಫರ್ ಮೇ 12ರವರೆಗೆ ಮಾತ್ರ ಅನ್ವಯ.

ರೂ. 50,000 ಮತ್ತು ಅಧಿಕ ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸುವಾಗ ಗ್ರಾಹಕರಿಗೆ ರೂ. 1000 ಮೌಲ್ಯದ ಗಿಫ್ಟ್ ವೋಚರ್ ನೀಡಲಾಗುವುದು. ಮತ್ತು ರೂ. 10,000 ಮೌಲ್ಯದ ಬೆಳ್ಳಿ ಆಭರಣಗಳನ್ನು ಖರೀದಿಸಿದಾಗ ಗ್ರಾಹಕರಿಗೆ ರೂ. 500 ಮೌಲ್ಯದ ಗಿಫ್ಟ್ ವೋಚರ್ ನೀಡಲಾಗುವುದು. ವಿಶೇಷ ಕೊಡುಗೆಯು ಈ ವಿಶೇಷ ಹಬ್ಬ ಅಕ್ಷಯ ತೃತೀಯದ ಶುಭ ಸಂದರ್ಭವನ್ನು ಆಚರಿಸಲು ಗ್ರಾಹಕರಿಗೆ ಜೋಯಾಲುಕ್ಕಾಸ್‌ನಿಂದ ಕೊಡ ಮಾಡುವ ಹೆಚ್ಚುವರಿ ಪ್ರೋತ್ಸಾಹವಾಗಿದೆ. ಗ್ರಾಹಕರು ಮೇ 3ರಿಂದ 12ರವರೆಗೆ ಭಾರತದಾದ್ಯಂತ ಇರುವ ಜೋಯಾಲುಕ್ಕಾಸ್‌ನ ಎಲ್ಲಾ ಮಳಿಗೆಗಳಲ್ಲಿ ಈ ಹಬ್ಬದ ಕೊಡುಗೆ ಲಭ್ಯವಿದೆ. ಈ ಅಕ್ಷಯ ತೃತೀಯ ಸಂದರ್ಭದಲ್ಲಿ ಜೋಯಾಲುಕ್ಕಾಸ್‌ನಲ್ಲಿ ಗ್ರಾಹಕರು ಅನ್ವೇಷಿಸಲು ಒಂದು ಮಿಲಿಯನ್‌ಗಿಂತಲೂ ಹೆಚ್ಚಿನ ಅನನ್ಯ ವಿನ್ಯಾಸಗಳನ್ನು ಹೊಂದಿರುವ ವ್ಯಾಪಕ ಶ್ರೇಣಿಯ ಆಭರಣಗಳಿವೆ. ಈ ಆಭರಣಗಳು ಸಮಕಾಲೀನ ಪ್ರವೃತ್ತಿಗಳೊಂದಿಗೆ ಸಾಂಪ್ರದಾಯಿಕ ಸೊಬಗುಗಳ ಸಮ್ಮಿಲನವಾಗಿದೆ.

ಹಬ್ಬದ ಆಫರ್ ಕುರಿತು ಪ್ರತಿಕ್ರಿಯಿಸಿ ಮಾತನಾಡಿದ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್, ಅಕ್ಷಯ ತೃತೀಯದ ಶುಭ ಸಂದರ್ಭದಲ್ಲಿ ಈ ಕೊಡುಗೆಗಳು ನಮ್ಮ ಅಮೂಲ್ಯ ಗ್ರಾಹಕರಿಗೆ ಹೆಚ್ಚಿನ ಪ್ರಯೋಜನವನ್ನು ನೀಡಲಿವೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಈ ಅಕ್ಷಯ ತೃತೀಯ ಕೊಡುಗೆಗಳು ಭಾರತದಾದ್ಯಂತ ಜೋಯಾಲುಕ್ಕಾಸ್ ಶೋರೂಮ್‌ಗಳಲ್ಲಿ ಲಭ್ಯ.

ನಾಳೆಯಿಂದ ಮೈಸೂರು ವಿವಿ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟ

ಮೈಸೂರು,ಏ.30–ಮೈಸೂರು ವಿಶ್ವವಿದ್ಯಾನಿಲಯದ ಪ್ರಸಕ್ತ ಸಾಲಿನ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟವನ್ನು ಮೇ 2ರಿಂದ 4ರವರೆಗೆ ವಿವಿ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಲಾಗಿದೆ. ಈ ಕ್ರೀಡಾಕೂಟವನ್ನು ಮೇ 2ರಂದು ಬೆಳಗ್ಗೆ 8.30ಕ್ಕೆ ಸ್ಪೋರ್ಟ್ ಪೆವಿಲಿಯನ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ವಿ.ಆರ್.ಶೈಲಜಾ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಆಟಗಾರ್ತಿ ಹಾಗೂ ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಡಾ.ಸವಿತಾ ಪ್ರಶಾಂತ್ ರಾಮಯ್ಯ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಲಿದ್ದು, ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ.ಪಿ.ಕೃಷ್ಣಯ್ಯ ಉಪಸ್ಥಿತರಿರುವರು. ಕ್ರೀಡಾಕೂಟದಲ್ಲಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ 800 ಮಹಿಳಾ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ನಾಳೆ ಡಾ.ವಿ.ಲಕ್ಷ್ಮಿನಾರಾಯಣರಿಗೆ ನುಡಿ ನಮನ



ಮೈಸೂರು, ಏ.30(ಜಿಎ)–ಇತ್ತೀಚೆಗೆ ನಿಧನರಾದ ಜನಪರ ಚಳವಳಿ ಹೋರಾಟಗಾರ ಹಾಗೂ ಖ್ಯಾತ ವೈದ್ಯರಾಗಿದ್ದ ಡಾ.ವಿ. ಲಕ್ಷ್ಮಿನಾರಾಯಣ ಅವರಿಗೆ ವಿವಿಧ ಪ್ರಗತಿಪರ ಸಂಘಟನೆಗಳ ವತಿಯಿಂದ ಮೇ2ರಂದು ಸಂಜೆ 4.30ಕ್ಕೆ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ನುಡಿ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕ ನಾ.ದಿವಾಕರ್ ಈ ವಿಷಯ ತಿಳಿಸಿ, ಲಕ್ಷ್ಮಿನಾರಾಯಣ ಅವರು ವೈದ್ಯರಾಗಿ ಸೇವೆ ಸಲ್ಲಿಸುವ ವೇಳೆ ಕುಷ್ಠರೋಗಿಗಳಿಗೂ ಚಿಕಿತ್ಸೆ ನೀಡಿ ಅವರಿಗೆ ಅಂಟಿದ್ದ ಸಾಮಾಜಿಕ ಕಳಂಕ ತೊಡೆದುಹಾಕುವ ಕೆಲಸ ಮಾಡುತ್ತಿದ್ದರು. ಕಾರ್ಮಿಕ, ಶೋಷಿತ ವರ್ಗದವರಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದರು. ಹಾಗೇ ಮಾನವ ಹಕ್ಕುಗಳ ಉಲ್ಲಂಘನೆಯ 0ಯಾವುದೇ ಘಟನೆ ನಡೆದರೂ ಸ್ಥಳಕ್ಕೆ ಸತ್ಯಶೋಧನಾ ಸಮಿತಿ ಕರೆದೊಯ್ದು, ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡುತ್ತಿದ್ದರು. ಪ್ರಗತಿಪರ ಸಂಘಟನೆಗಳ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ, ತಾತ್ವಿಕ ಹಾಗೂ ಸೈದ್ಧಾಂತಿಕವಾಗಿ ಕಮ್ಯುನಿಸ್ಟ್ ನಾಯಕರಾಗಿದ್ದರು. ಹೀಗಾಗಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರೊ. ಕಾಳಚನ್ನೇಗೌಡ, ಡಾ.ಜಗನ್ನಾಥ್, ಡಾ.ಪದ್ಮಾ, ಜವರಯ್ಯ ಉಪಸ್ಥಿತರಿದ್ದರು.



ಮೈಸೂರಿನ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಯುವ ನಾಯಕ ತರಬೇತಿ ಶಿಬಿರದ ವಿದ್ಯಾರ್ಥಿಗಳು ಮೈಸೂರಿನ ಚಾಮುಂಡಿಬೆಟ್ಟದಲ್ಲಿರುವ ದಾಸೋಹ ಭವನ, ಹೊರಾಂಗಣ, ಒಳಾಂಗಣವನ್ನು ಸ್ವಚ್ಛತೆ ಮಾಡಿದರು. ಕಾರ್ಯಕ್ರಮ ಮುಗಿದ ನಂತರ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ನೀಡಲಾಯಿತು.

ಕುಂಜಮ್ ಶ್ರೀನಿವಾಸ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಪ್ರೊ. ರಾಮನಾಥನ್ ನಾಯ್ಡು ಅವರ ಮಾರ್ಗದರ್ಶನದಲ್ಲಿ ಕುಂಜಮ್ ಶ್ರೀನಿವಾಸ್ ಕೊಯಾ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ

ಯಲ್ಲಪ್ಪ



ಮೈಸೂರು, ಏ. 30– ಮೈಸೂರಿನ ಸರಸ್ವತಿಪುರಂ ನಿವಾಸಿ, ಅಬಕಾರಿ ಇಲಾಖೆ ನಿವೃತ್ತ ಡೆಪ್ಯುಟಿ ಕಮೀಷನರ್ ಹಾಗೂ ದಾನಿಗಳಾದ ಯಲ್ಲಪ್ಪ (79) ಮಂಗಳವಾರ ಬೆಳಿಗ್ಗೆ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ ಸುಮಿತ್ರ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರು ರಾಮಕೃಷ್ಣ ಆಶ್ರಮದ ನಿಕಟವರ್ತಿಯಾಗಿದ್ದರು. ಜೆ.ಎಸ್.ಎಸ್ ವೈದ್ಯಕೀಯ ಕಾಲೇಜಿಗೆ ಇವರ ದೇಹದಾನ ಮಾಡಲಾಗಿದೆ. ಇವರು ಹಲವಾರು ಸಮಾಜ ಸೇವಾ ಕಾರ್ಯಗಳಲ್ಲಿ ಭಾಗಿಯಾಗಿದ್ದರು.

ಎ.ಬಿ. ಮಾಲತಿ ಅಲಂಕಾಲಿಯಾ



ಮೈಸೂರಿನ ಭಾರ್ಗವಿನಗರದ ನಿವಾಸಿ ಹಾಗೂ ಕವಿ, ಬರಹಗಾರ್ತಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ (ಎಸ್‌ಬಿಎಂ) ನಿವೃತ್ತ ಉದ್ಯೋಗಿ ಎ.ಬಿ. ಮಾಲತಿ ಅಲಂಕಾಲಿಯಾ (67) ಮಂಗಳವಾರ ಬೆಳಗ್ಗೆ ನಿಧನರಾದರು. ಮೂಲತಃ ಕೊಡಗಿನ ಸೋಮವಾರಪೇಟೆಯವರಾದ ಇವರು ಪತಿ ಕೆ.ಆರ್.ಭಂಡಾರಿ (ನಿವೃತ್ತ ಬ್ಯಾಂಕ್ ಅಧಿಕಾರಿ), ಪುತ್ರ ಓಶಾನ್ (ಕೆನರಾ ಬ್ಯಾಂಕ್ ಅಧಿಕಾರಿ) ಸೇರಿದಂತೆ ಅಪಾರ ಬಂಧು ಬಳಗ ಮತ್ತು ಮಿತ್ರರನ್ನು ಅಗಲಿದ್ದಾರೆ. ಮಾಲತಿ ಅವರು ಕೊಡಗಿನ ಹಿರಿಯ ಬರಹಗಾರ ಮತ್ತು ಕವಿ ಶಿವಾದೇವಿ ಅವನೀಶ್ ಚಂದ್ರ ಅವರ ಕಿರಿಯ ಸಹೋದರಿ.ಇವರ ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಯಿಷ್‌ನಲ್ಲಿ ಪ್ರೀ ಸ್ಕೂಲ್ ಗ್ರ್ಯಾಜುಯೇಷನ್ ಕಾರ್ಯಕ್ರಮ

ಸಾಮಾನ್ಯ ಮಕ್ಕಳೊಂದಿಗೆ ಬೌದ್ಧಿಕ, ದೈಹಿಕ ಅಂಗವಿಕಲರು ಶಿಕ್ಷಣ ಪಡೆಯುವಂತಾಗಬೇಕು



ಮೈಸೂರಿನ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ನಾಲೆಜ್ ಪಾರ್ಕ್‌ನಲ್ಲಿ ವಿಶೇಷ ಶಿಕ್ಷಣ ವಿಭಾಗದಿಂದ ಮಂಗಳವಾರ ಪ್ರೀ ಸ್ಕೂಲ್ ಗ್ರ್ಯಾಜುಯೇಷನ್ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಏ.30(ಜಿಎ)–ಬೌದ್ಧಿಕ ಅಥವಾ ದೈಹಿಕ ಅಂಗವಿಕಲತೆಯಿಂದ ಬಳಲುತ್ತಿರುವ ಮಕ್ಕಳಿಗೂ ಎಲ್ಲರಂತೆ ಸಾಮಾನ್ಯ ಸ್ಥಳದಲ್ಲಿಯೇ ಶಿಕ್ಷಣ, ಆರೋಗ್ಯ ಕಾಳಜಿ ಪಡೆಯುವುದು ಅವರ ಹಕ್ಕು ಎಂದು ರಾಜ್ಯ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಉಪ ನಿರ್ದೇಶಕಿ ಸಿ.ಅಶ್ವತ್ಥಮ್ಮ ತಿಳಿಸಿದರು.

ಮೈಸೂರಿನ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ನಾಲೆಜ್ ಪಾರ್ಕ್‌ನಲ್ಲಿ ವಿಶೇಷ ಶಿಕ್ಷಣ ವಿಭಾಗದಿಂದ ಮಂಗಳವಾರ ನಡೆದ ಪ್ರೀ ಸ್ಕೂಲ್ ಗ್ರ್ಯಾಜುಯೇಷನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನುವಂಶೀಯತೆ, ಅಪಘಾತಗಳು ಮಕ್ಕಳನ್ನು ಈ ಸಮಸ್ಯೆಗೆ ದೂಡುತ್ತದೆ. ಪೋಷಕರ ಸಹಕಾರದಿಂದ ಮಾತ್ರ ಇಂಥ ಮಕ್ಕಳು ಉತ್ತಮ ಭವಿಷ್ಯ ಹೊಂದಬಹುದು, ಇಂದು ಸಾಕಷ್ಟು ಪೋಷಕರೂ ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಿದ್ದು, ಇತರ ಸಾಮಾನ್ಯ ಮಕ್ಕಳೊಂದಿಗೆ ಸ್ಪರ್ಧಿಸುವ ಸಾಮರ್ಥ್ಯ ಹೊಂದುತ್ತಿದ್ದಾರೆ ಎಂದರು.

ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಮಾತನಾಡಿ, ಬುದ್ಧಿಮಾಂದ್ಯ ಅಥವಾ ಇತರ ಸಮಸ್ಯೆಯುಳ್ಳ ಮಕ್ಕಳನ್ನು ನಿಭಾಯಿಸುವುದು ಸುಲಭವಲ್ಲ. ಸಾಕಷ್ಟು ಶ್ರಮ ಬೇಕು. ಇಲ್ಲಿ ಒಬ್ಬರನ್ನೇ ಹೊರೆ ಹೊರಲು ಬಿಡದೇ ಸಂಗಾತಿಗಳು ಒಗ್ಗಟ್ಟಾಗಿರಬೇಕು. ಮಕ್ಕಳನ್ನು ಪ್ರೇಮದಿಂದ ಸಲಹಬೇಕು. ಹೆಚ್ಚಿನ ಪ್ರಕರಣಗಳಲ್ಲಿ ಈ ಮಕ್ಕಳ ತಾಯಂದಿರನ್ನು ಒಂಟಿ ಮಾಡಲಾಗುತ್ತದೆ. ದೂಷಿಸಲಾಗುತ್ತದೆ. ಅದಾಗಬಾರದು. ಇದು ಎಲ್ಲರಿಗೂ ಮೀರಿದ ಸನ್ನಿವೇಶ. ಸಹಜವಾಗಿ ಸ್ವೀಕರಿಸಿ, ಪರಸ್ಪರ ಸಹಕರಿಸಿ ನಿಭಾಯಿಸಬೇಕು. ಸಂಸ್ಥೆಯಲ್ಲಿ 3 ವರ್ಷ ಕಾಲ ಮಕ್ಕಳನ್ನು ತಿದ್ದುತ್ತಾ ತಾಯಂದಿರು ಕೂಡ ಸಾಕಷ್ಟು ಬಳಲಿರುತ್ತಾರೆ. ಮಗುವೊಂದಿಗೆ ಅವರನ್ನೂ ಪ್ರೀತಿಯಿಂದ ಮನೆಗೆ ಬರಮಾಡಿಕೊಳ್ಳಿ. ಮಾವ, ಅತ್ತೆ ಕೂಡ ಸೊಸೆಯನ್ನು ಆಧರಿಸಿ, ಮೊಮ್ಮಕ್ಕಳನ್ನು ಪ್ರೀತಿಸಿ ಎಂದು ಸಲಹೆ ನೀಡಿದರು.

ಬುದ್ಧಿಮಾಂದ್ಯತೆ ಸೇರಿದಂತೆ ವಿವಿಧ ರೀತಿಯ ಸಮಸ್ಯೆಗಳನ್ನು ಹೊಂದಿರುವ 162 ಮಕ್ಕಳನ್ನು ಎಲ್ಲರಂತೆ ಕಲಿಕೆಗೆ ಸಿದ್ಧಗೊಳ್ಳುವ ತರಬೇತಿ ಪಡೆದರು. ಅಂತಿಮ ಹಂತವಾಗಿ ಪೋಷಕರು, ತರಬೇತುದಾರರು ಮತ್ತು ಮಕ್ಕಳ ಸಮಾಗಮ ನಡೆಯಿತು.

ನಿಮ್ಮ ಮಕ್ಕಳು ಎಲ್ಲರಂತೆ ಸಾರ್ವಜನಿಕ ಶಾಲೆಗಳಲ್ಲಿ ಕಲಿಯಲು ಸಮರ್ಥರು ಎಂದು ಘೋಷಿಸಲಾಯಿತು. ಈ ಕ್ಷಣಕ್ಕೆ ಕಾತರರಾದ ಪೋಷಕರು ಮಕ್ಕಳೊಂದಿಗೆ ಸಂಭ್ರಮಿಸಿದರು.

ಚಿಣ್ಣರು ಕೂಡ ಗ್ರ್ಯಾಜುಯೇಷನ್ ಬಟ್ಟೆ ಧರಿಸಿ ವೇದಿಕೆ ಹತ್ತಿ ತರಬೇತಿಯ ಸರ್ಟಿಫಿಕೇಟ್ ಪಡೆದರು. ಗುಂಪುಗೂಡಿ ಕ್ಯಾಮೆರಾಗೆ ಪೋಸ್ ಕೊಟ್ಟು ಹಾಡು ಹೇಳಿ ಸಂಭ್ರಮಿಸಿದರು.

ನನ್ನ ದೇವನೇ ಶ್ರೇಷ್ಠ ಎಂಬ ಮನೋಭಾವ ಮೂರ್ಖತನದ್ದು

ವಿಶೇಷ ಉಪನ್ಯಾಸದಲ್ಲಿ ಡಿವೈನ್ ಪಾರ್ಕ್ ಸದಸ್ಯ ರಾಜೇಶ್ ನಾಯರ್ ಅಭಿಮತ



ಮೈಸೂರು,ಏ.30–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ?' ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾಧ್ಯಾಪಕ ಹಾಗೂ ಡಿವೈನ್ ಪಾರ್ಕ್ ಸದಸ್ಯ ರಾಜೇಶ್ ನಾಯರ್ ಮಾತನಾಡಿ, ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸಬೇಕು ಎಂದರೆ ಮೊದಲು ನಾವು ಕಾಲೇಜು ಜೀವನವನ್ನು ಆನಂದಿಸಬೇಕು. ಎಲ್ಲಾ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಸಿಗುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಕಾಲೇಜು ಜೀವನದಲ್ಲಿ ಎಲ್ಲದರಲ್ಲೂ ಪರಿಪೂರ್ಣವಾಗಿರಬೇಕೆಂಬ ಹಂಬಲ ಇರುತ್ತದೆ. ಅದನ್ನು ಸಾಧಿಸಲು ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಂತ ಅವಶ್ಯಕ.

ಸ್ವಾಮಿ ವಿವೇಕಾನಂದರು, 'ನಂಬಿಕೆ ಇಲ್ಲದವನೇ ನಾಸ್ತಿಕ, ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂದರ್ಭಗಳು ಜೀವನದಲ್ಲಿ ಬಹಳ ಬರುತ್ತವೆ. ಆದರೆ ನಾವು ನಮ್ಮ ಮೇಲೆ ಪೂರ್ಣ ವಿಶ್ವಾಸ ಹಾಗೂ ನಂಬಿಕೆಯನ್ನು ಹೊಂದಿದ್ದರೆ, ಯಾರು ಎಷ್ಟೇ ಟೀಕಿಸಿದರೂ ನಾವು ನಮ್ಮ ಪ್ರಯತ್ನವನ್ನು ಬಿಡುವುದಿಲ್ಲ. ವಿದ್ಯಾರ್ಥಿಯಾಗಿ, ಕಷ್ಟ ಪಟ್ಟು ಓದದೇ, ಇಷ್ಟಪಟ್ಟು ಓದಬೇಕೆಂದು ತಿಳಿಸಿದರು.

'ದೇವರು ಒಬ್ಬನೇ, ನಾಮ ಹಲವು' ಎಂಬ ಮಾತನ್ನು ಉಲ್ಲೇಖಿಸಿ 'ನನ್ನ ದೇವರೊಬ್ಬನೇ ಶ್ರೇಷ್ಠ ಎಂಬುದು ಮೂರ್ಖತನ, ನಮ್ಮ ಒಳಗಡೆ ಇರುವ ಶಕ್ತಿಯೇ ದೇವರು, ಅದನ್ನು ಜಾಗೃತಗೊಳಿಸಿ, ಸರಿಯಾಗಿ ಉಪಯೋಗಿಸುವ ಮೂಲಕ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದು. ನಮ್ಮ ಬುದ್ಧಿಯಲ್ಲಿ ನಕಾರಾತ್ಮಕ ಹಾಗೂ ಸಕಾರಾತ್ಮಕ ಎರಡೂ ಯೋಚನೆಗಳು ಇರುತ್ತವೆ. ಮೊದಲು ಬುದ್ಧಿಯನ್ನು ಶುದ್ಧ ಮಾಡಿ, ಮನಸ್ಸಿನ ಚಂಚಲತೆಯನ್ನು ನಿರ್ವಹಿಸಿ, ನಮ್ಮೊಳಗಿರುವ ಏಕಾಗ್ರತೆಯನ್ನು ಉತ್ತೇಜಿಸುವುದರ ಮೂಲಕ ಮನಸ್ಸಿನ ಪರಿಪೂರ್ಣತೆಯನ್ನು ಆನಂದಿಸಬೇಕು. 'ಲೋಕಾ ಸಮಸ್ತಾ ಸುಖಿನೋ ಭವಂತು' ಎಂಬ ಧ್ಯೇಯದ ಮೂಲಕ ಕೇವಲ ನಮ್ಮ ಹಿತಕ್ಕಲ್ಲದೇ ಲೋಕದ ಹಿತಕ್ಕಾಗಿ ಬಾಳಬೇಕು ಹಾಗೂ ಈ ಭಾವವನ್ನು ವಿದ್ಯಾರ್ಥಿ ಜೀವನದಿಂದಲೇ ಬೆಳೆಸಿಕೊಳ್ಳಬೇಕು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗೀತಾ, ಡಿವೈನ್ ಪಾರ್ಕ್‌ನ ಸದಸ್ಯರಾದ ದಿವಾಕರ ಶೆಟ್ಟಿ, ನಾರಾಯಣ್‌ಸ್ವಾಮಿ, ಉಷಾ ಕೀರ್ತಿ, ಚೇತನ, ಪಿಆರ್‌ಓ ಪೂರ್ಣಿಮಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಜ್ವಲ್ ಪ್ರಕರಣ: ವಿಶೇಷ ಪ್ರಾಸಿಕ್ಯೂಶನ್ ನೇಮಕ



ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಹಲವು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ರಾಜ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರನ್ನು ನೇಮಕ ಮಾಡಲಾಗಿದೆ.

ವಿಚಾರಣಾ ಮತ್ತು ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿನ ವಿಚಾರಣೆಗೆ ಜಗದೀಶ್ ರಾಜ್ಯ ಸರ್ಕಾರದ ಪರ ಹಾಜರಾಗಲಿದ್ದಾರೆ. ಈ ಕುರಿತ ಅಧಿಸೂಚನೆಯನ್ನು ರಾಜ್ಯ ಒಳಾಡಳಿತ ಇಲಾಖೆಯ ಅಧೀನ ಕಾರ್ಯದರ್ಶಿ ಮಂಗಳವಾರ ಹೊರಡಿಸಿದ್ದಾರೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಹೆಚ್.ರುದ್ರಮುನಿ ಅವರ ಮಾರ್ಗದರ್ಶನದಲ್ಲಿ ಎನ್. ಉಪೇಂದ್ರ ಇಂಗ್ಲೀಷ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹೆಚ್‌ಐವಿ ತಡೆಗಟ್ಟುವಲ್ಲಿ ಎಚ್ಚರಿಕಾ ಕ್ರಮ

ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹಿರಿಯ ದಂತ ಆರೋಗ್ಯ ಅಧಿಕಾರಿ ಡಾ.ಅನಿತಾ ವಿವರಣೆ



ಮೈಸೂರು, ಏ. 30– ದೇಶದ ಆಸ್ತಿಯಾಗಿರುವ ಯುವ ಜನತೆ ಎಚ್‌ಐವಿ ಮತ್ತು ಏಡ್ಸ್ ಕುರಿತಾಗಿ ಸೂಕ್ತ ಅರಿವನ್ನು ಹೊಂದುವ ಮೂಲಕ ಹೆಚ್‌ಐವಿ ತಡೆಗಟ್ಟುವಲ್ಲಿ ಎಚ್ಚರಿಕೆ ವಹಿಸಬೇಕು ಎಂದು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹಿರಿಯ ದಂತ ಆರೋಗ್ಯ ಅಧಿಕಾರಿ ಡಾ. ಅನಿತಾ ಕರೆ ನೀಡಿದರು.

ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ರೆಡ್ ಕ್ರಾಸ್ ಹಾಗೂ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಸಹಯೋಗದಲ್ಲಿ ನಡೆದ ಏಡ್ಸ್ ಕುರಿತ ಜಾಗೃತಿ, ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾವಂತ ಯುವ ವಿದ್ಯಾರ್ಥಿಗಳು ಪ್ರಜ್ಞಾವಂತರಾಗಬೇಕು. ಆ ಮೂಲಕ ಹೆಚ್‌ಐವಿ ಕುರಿತಾದ ಸೂಕ್ತ ತಿಳುವಳಿಕೆ ಪಡೆದು ಜನಸಮುದಾಯಕ್ಕೆ ತಲುಪಿಸುವ ಮೂಲಕ ಸಾಮಾಜಿಕ ಹೊಣೆಗಾರಿಕೆ ತೋರಬೇಕು ಎಂದರು.

ಜನರಲ್ಲಿ ಎಚ್‌ಐವಿ ಕುರಿತಾಗಿ ತುಂಬಾ ಮೌಢ್ಯತೆ ಇದೆ. ಒಟ್ಟಿಗೆ ಕುಳಿತು ಊಟ ಮಾಡುವ, ಮಲಗುವ, ಓಡಾಡುವ, ಕೈಕುಲುಕುವ ಮೂಲಕವೂ ಹೆಚ್.ಐ.ವಿ. ಹರಡುತ್ತದೆ ಎಂಬ ನಂಬಿಕೆಗಳಿವೆ. ಇದು ತಪ್ಪು ತಿಳಿವಳಿಕೆ. ಈ ಕುರಿತು ಸೂಕ್ತ ಅರಿವನ್ನು ಯುವ ಸಮುದಾಯ ಮೂಡಿಸಬೇಕು ಎಂದರು.

ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯ ಐಟಿಸಿಟಿ ಆಪ್ತ ಸಮಾಲೋಚಕರಾದ ರಾಜೇಶ್ ಮಾತನಾಡಿ, ಭಾರತದಲ್ಲಿ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ರಾಜಸ್ಥಾನ, ಕರ್ನಾಟಕ ರಾಜ್ಯಗಳಲ್ಲಿ ಹೆಚ್ಚು ಹೆಚ್‌ಐವಿ ಪ್ರಕರಣಗಳು ದಾಖಲಾಗಿವೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲೇ ಸರಿ ಸುಮಾರು 2,100 ಹೆಚ್‌ಐವಿ ಪ್ರಕರಣಗಳಿವೆ. ಇದರಲ್ಲಿ ಶೇಕಡ 40ರಿಂದ 50ರಷ್ಟು ಯುವಕರಿರುವುದು ಆತಂಕಕಾರಿ ಸಂಗತಿ. ಆದ್ದರಿಂದ ಯುವಜನತೆ ಸೂಕ್ತ ತಿಳುವಳಿಕೆ ಹೊಂದಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಬಸವನಗೌಡ, ವಿದ್ಯಾರ್ಥಿಗಳು ತಮ್ಮನ್ನು ತಾವು ಆಸ್ತಿ ಎಂದು ಪರಿಗಣಿಸಬೇಕು. ಉತ್ತಮ ಆರೋಗ್ಯವನ್ನು ಹೊಂದುವ ಮೂಲಕ ಸದೃಢರಾಗಬೇಕು ಜೊತೆಗೆ ಲೈಂಗಿಕ ಶಿಕ್ಷಣ, ಶಿಕ್ಷಣದ ಭಾಗವಾಗಬೇಕು ಎಂದರು. ಚಾಮರಾಜನಗರದ ಬಸವ ರಾಜೇಂದ್ರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಹಲವು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ.ವಿ.ರೇಣುಕಾಬಾಯಿ, ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿ ಡಾ.ಮಹದೇವ ಪ್ರಸಾದ್, ಡಾ.ಡಿ.ಕೆ.ಉಷಾ, ರೆಡ್‌ಕ್ರಾಸ್ ಸಂಚಾಲಕ ಶ್ರೀಧರ್ ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ನಿರ್ದೇಶಕರು ಹಾಗೂ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಉಪಾಧ್ಯಕ್ಷೆ ಎಂ.ಎನ್.ಸೌಮ್ಯ, ನಿರ್ದೇಶಕರಾದ ಎಂ.ಆರ್.ಬಾಲಕೃಷ್ಣ, ವಿಕ್ರಮ ಅಯ್ಯಂಗಾರ್, ನಾಗಶ್ರೀ ಎನ್, ಕೆ.ಎನ್.ಅರುಣ್, ಎಸ್.ರಾಜಮ್ಮ, ಪ್ರಭಾರ ಕಾರ್ಯದರ್ಶಿ ವೀಣಾ ಎನ್ ಹಾಗೂ ಸಿಬ್ಬಂದಿ ವರ್ಗ ಸಂತಾಪ ಸಲ್ಲಿಸಿದರು.



ಆದಿಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಮಾಜಿ ಕೇಂದ್ರ ಸಚಿವರು ಮತ್ತು ಹಾಲಿ ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಅವರ ನಿಧನಕ್ಕೆ ಮಾನಂದವಾಡಿ ರಸ್ತೆಯಲ್ಲಿರುವ ಬಿ.ಬಸವಲಿಂಗಪ್ಪ ಸರ್ಕಲ್‌ನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸಮಿತಿ ಗೌರವ ಅಧ್ಯಕ್ಷ ಹಾಗೂ ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ಅಧ್ಯಕ್ಷ ಕೆ.ಮುರಳಿ, ಉಪಾಧ್ಯಕ್ಷ ಎಂ.ಕುಮಾರಸ್ವಾಮಿ, ಕಾರ್ಯದರ್ಶಿ ತ್ರಿಶೂಲ್, ಮುಖಂಡರಾದ ಅನಂತ್‌ನಾಗ್, ಸದಾನಂದ, ಎಲ್. ದೊರೆಸ್ವಾಮಿ, ಮಂಜುನಾಥ್, ಅನಿಲ್, ಕೋಟೆಹುಂಡಿ ರವಿ, ಪಾರ್ಥಸಾರಥಿ, ಚಂದ್ರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ

ಮೈಸೂರು, ಏ.30–ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಗೌರವ ಸೂಚಿಸಲಾಯಿತು.

ಶ್ರೀನಿವಾಸ ಪ್ರಸಾದ್ ಅವರ ಕುರಿತು ಮಾತನಾಡಿದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ವಿ.ಶ್ರೀನಿವಾಸ ಪ್ರಸಾದ್ ಅವರು ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಸಂಸ್ಥೆಗಳ ಜೊತೆ ಉತ್ತಮ ಒಡನಾಟ ಹೊಂದಿದ್ದರು. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಬಗ್ಗೆಅಪಾರ ಗೌರವ ಹೊಂದಿದ್ದರು. ವಿದ್ಯಾರ್ಥಿದಿಸೆಯಿಂದಲೇ ಓರ್ವ ರಾಜಕಾರಣಿಯಲ್ಲಿ ಇರಬೇಕಾದ ಲಕ್ಷಣ ಹಾಗೂ ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ತುಳಿತಕ್ಕೊಳಗಾದವರ ವಿರುದ್ಧ ದನಿ ಎತ್ತುತ್ತಿದ್ದರು ಎಂದರು.

ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ರಾಜಕಾರಣ ಮಾಡಿದರು. ಐವತ್ತು ವರ್ಷಗಳ ಕಾಲ ರಾಜಕೀಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡವರು. ಆರು ಬಾರಿ ಸಂಸದರಾಗಿ, ಎರಡು ಬಾರಿ ವಿಧಾನ ಸಭಾ ಸದಸ್ಯರಾಗಿ, ಕೇಂದ್ರ ಸರ್ಕಾರದಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರಾಗಿ ಹಾಗೂ ಸಿದ್ದರಾಮಯ್ಯನವರ ಸಂಪುಟದಲ್ಲಿ ಕಂದಾಯ ಮತ್ತು ಮುಜರಾಯಿ ಇಲಾಖೆ ಸಚಿವರಾಗಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ ಅಪರೂಪದ ಮುತ್ಸದ್ದಿ ಸ್ವಾಭಿಮಾನಿ ರಾಜಕಾರಣಿಯಾಗಿದ್ದರು ಎಂದರು.

ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡವರು. ಬುದ್ಧ, ಬಸವ, ಅಂಬೇಡ್ಕರ್ ತತ್ವಗಳಿಗೆ ಬದ್ಧರಾಗಿದ್ದತಂಹ ವ್ಯಕ್ತಿ ಇಂದು ನಮ್ಮ ಜೊತೆ ಇಲ್ಲ ಎಂಬುದು ಬಹಳ ದುಃಖದ ಸಂಗತಿ ಎಂದು ನುಡಿನಮನ ಸಲ್ಲಿಸಿದರು.

ಪ್ರಕಟಣ ವಿಭಾಗದ ನಗರ್ಲೆ ಶಿವಕುಮಾರ ನುಡಿನಮನ ಸಲ್ಲಿಸಿದರು.



ಮೈಸೂರಿನ ಕಂಸಾಳೆ ಮಹದೇವಯ್ಯ ವೃತ್ತದಲ್ಲಿ ಡಾ.ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಮೇಣದ ಬತ್ತಿ ಬೆಳಗಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾಜಿ ಕಾರ್ಪೊರೇಟರ್‌ಗಳಾದ ಸುನಿಲ್, ವಿ.ಮಂಜುನಾಥ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷರಾದ ಬಸವರಾಜ ಬಸಪ್ಪ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಯುವ ಬ್ರಿಗೇಡ್ ಅಧ್ಯಕ್ಷ ಕಂಸಾಳೆ ರವಿ, ರವಿತೇಜ, ನವೀನ್ ಕೆಂಪಿ, ಗೌರಿಶಂಕರನಗರದ ಶಿವು, ಮೈಲಾರಿ, ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.

ಪ್ರಸಾದ್ ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು. ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯದರ್ಶಿ ಎಸ್.ಶಿವಕುಮಾರ ಸ್ವಾಮಿ ಸೇರಿದಂತೆ ವಿಭಾಗಗಳ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಮೈಸೂರು ಮಿತ್ರ ಬುಧವಾರ 1 ಮೇ 2024

ಸ್ಪೇನ್ ಯುವಕನನ್ನು ವಿವಾಹವಾದ ಕೆ.ಆರ್.ಪೇಟೆ ಯುವತಿ

ಈಶಾ ಫೌಂಡೇಶನ್‌ನಲ್ಲಿ ಚಿಗುರಿದ ಪ್ರೀತಿಗೆ ಪೋಷಕರ ಬೆಂಬಲ, ಶಾಸ್ತ್ರೋಕ್ತ ಮದುವೆ

ಕೆಆರ್.ಪೇಟೆ, ಏ.30– ಈಶಾ ಫೌಂಡೇಶನ್‌ನಲ್ಲಿ ಚಿಗುರಿದ ಪ್ರೇಮದಿಂದ ಕೆ.ಆರ್.ಪೇಟೆಯ ಯೋಗ ಶಿಕ್ಷಕಿಯೊಬ್ಬರು ಸ್ಪೇನ್ ದೇಶದ ಯುವಕನನ್ನು ವಿವಾಹವಾಗಿದ್ದಾರೆ.



ಕೆ.ಆರ್.ಪೇಟೆ ಪಟ್ಟಣದ ಶಮಂತ್ ಟೆಕ್ಸ್‌ಟೈಲ್ಸ್ ಮಾಲೀಕರಾದ ರವೀಂದ್ರನಾಥ್ ಅವರ ಪುತ್ರಿ ದೀಕ್ಷಿತಾ ಕೊಯಮತ್ತೂರಿನ ಈಶಾ ಫೌಂಡೇಶನ್‌ನಲ್ಲಿ ಯೋಗ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಗ ಸ್ಪೇನ್ ದೇಶದ ಬಾರ್ಸಿಲೋನ್ ನಗರದ ಯುವಕ ಜಾನ್‌ವೈಡಲ್ ಪರಿಚಯವಾಗಿ, ಪರಿಚಯವು ಪ್ರೇಮಕ್ಕೆ ತಿರುಗಿತು. ಆಗ ಈಶಾ ಫೌಂಡೇಶನ್ ಮುಖ್ಯಸ್ಥರಾದ ಸದ್ಗುರು ಶ್ರೀ ಜಗ್ಗಿ ವಾಸುದೇವ್ ಅವರ ಮೂಲಕ ಎರಡೂ ಕುಟುಂಬಗಳ ಮನವೊಲಿಸಿದ ಪರಿಣಾಮವಾಗಿ ಕೆ.ಆರ್.ಪೇಟೆ ಪಟ್ಟಣದಲ್ಲಿ ಸಂಪ್ರದಾಯ ಬದ್ಧವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವರ ಜಾನ್‌ವೈಡಲ್ ತಂದೆ–ತಾಯಿಗಳು, ಸಹೋದರ, ಸಹೋದರಿ ಸೇರಿದಂತೆ ವಧುವಿನ ತಂದೆ–ತಾಯಿಗಳು, ಬಂಧುಗಳು, ಹಾಗೂ ಸ್ನೇಹಿತರ ಸಮಕ್ಷಮದಲ್ಲಿ ವಿದೇಶಿ ವರನೊಂದಿಗೆ ಕೆ.ಆರ್.ಪೇಟೆಯ ಕನ್ನಡದ ಹುಡುಗಿ ದೀಕ್ಷಿತಾ ಮದುವೆಯಾಗಿ ಪ್ರೀತಿಗೆ ಜಾತಿ, ಧರ್ಮದ ಹಂಗಿಲ್ಲ ಎಂಬುದು, ಈಗ ಪ್ರೀತಿಗೆ ದೇಶದ ಹಂಗಿಲ್ಲ ಎಂಬಂತೆ ಬದಲಾಗಿದೆ.

ಜಾನ್‌ವೈಡಲ್ ತುಂಬಾ ಒಳ್ಳೆಯ ಹುಡುಗ. ನಾನೇ ಹುಡುಕಿದ್ದರೂ ನನ್ನ ಮಗಳಿಗೆ ಇಂತಹ ಒಳ್ಳೆಯ ಸಂಬಂಧವನ್ನು ಹುಡುಕಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲಾ ದೈವೇಚ್ಛೆ, ಮಗಳ ಆಸೆಗೆ ಪ್ರೋತ್ಸಾಹ ನೀಡಿ ಮದುವೆ ಮಾಡಿಕೊಟ್ಟಿದ್ದೇವೆ. ಮಗಳು, ಅಳಿಯ ಇಬ್ಬರೂ ಈಶಾ ಫೌಂಡೇಶನ್‌ನಲ್ಲಿ ಯೋಗ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಸದ್ಗುರುಗಳ ಆಶೀರ್ವಾದವಿದೆ. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡು ಸಂತೋಷದಿಂದ ಜೀವನ ನಡೆಸುತ್ತಾರೆ ಎಂಬ ವಿಶ್ವಾಸವಿದೆ ಎಂದು ವಧುವಿನ ತಂದೆ ರವೀಂದ್ರನಾಥ್ ಹೇಳಿದರು.

ಈಶಾ ಫೌಂಡೇಶನ್‌ಗೆ ಯೋಗ ಕಲಿಯಲು ಬಂದ ಜಾನ್‌ವೈಡಲ್ ಮೇಲೆ ಪ್ರೀತಿಯಾಯಿತು. ನಮ್ಮ ಪ್ರೀತಿಗೆ ಎರಡೂ ಕುಟುಂಬಗಳು ಒಪ್ಪಿಗೆ ನೀಡಿದ್ದು ನಮಗೆ ಸಂತೋಷವಾಗಿದೆ. ಜಾನ್ ಕೂಡಾ ಕನ್ನಡ ಕಲಿಯುತ್ತಿದ್ದಾರೆ. ನಮ್ಮ ಭಾಷೆ ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ನಾನು ಸ್ಪೇನ್ ಭಾಷೆ ಕಲಿತಿದ್ದೇನೆ. ನಮ್ಮಿಬ್ಬರಲ್ಲಿ ಸಾಮರಸ್ಯವಿದೆ, ಪ್ರೀತಿಯಿದೆ, ಇಬ್ಬರೂ ಚೆನ್ನಾಗಿ ಜೀವನ ನಡೆಸಿ ಸಾಧಿಸಿ ತೋರಿಸುತ್ತೇವೆ ಎಂದು ದೀಕ್ಷಿತಾ ಹೇಳಿದರು. ವಿದೇಶಿ ಹುಡುಗನೊಂದಿಗೆ ನಡೆದ ಕನ್ನಡದ ಹುಡುಗಿಯ ಮದುವೆಯ ಸಂಭ್ರಮದಲ್ಲಿ ಸಾವಿರಾರು ಮಂದಿ ಬಂಧುಗಳು, ಸ್ನೇಹಿತರು ಭಾಗವಹಿಸಿ ಶುಭ ಹಾರೈಸಿದ್ದು ವಿಶೇಷವಾಗಿತ್ತು.

ಕುಡಿಯುವ ನೀರಿನ ಸಮಸ್ಯೆಗೆ ತುರ್ತು ಕ್ರಮ ವಹಿಸಿ

ಜಿಲ್ಲಾ ವಿಪತ್ತು ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿ ಸೂಚನೆ



ಜಿಲ್ಲಾ ವಿಪತ್ತು ಪ್ರಾಧಿಕಾರ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಅಧಿಕಾರಿಗಳೊಂದಿಗೆ ಮಾತನಾಡಿದರು.

ಮಂಡ್ಯ, ಏ.30– ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ ಕಡೆ ತುರ್ತಾಗಿ ಕ್ರಮವಹಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ ಸೂಚಿಸಿದರು.

ತಮ್ಮ ಕಚೇರಿಯ ಸಭಾಂಗಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾ ವಿಪತ್ತು ಪ್ರಾಧಿಕಾರ ಸಭೆ ನಡೆಸಿ ಮಾತನಾಡಿದ ಅವರು, ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತಕ್ಕೆ ಸಾಕಷ್ಟು ದೂರುಗಳು ಕೇಳಿ ಬರುತ್ತಿದ್ದು, ಎಲ್ಲಾ ತಹಶೀಲ್ದಾರ್‌ಗಳು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರತಿದಿನ ಸಭೆ ನಡೆಸಿ ತೀವ್ರತರ ಹಾಗೂ ಸಾಮಾನ್ಯ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ ಪಟ್ಟಿ ಮಾಡಿಕೊಂಡು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಬೇಕು. ಆಗ ಮಾತ್ರ ಸಮಸ್ಯೆ ಪರಿಹರಿಸಲು ಸಾಧ್ಯ ಎಂದರು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅನುದಾನದ ಕೊರತೆ ಇಲ್ಲ. ಸಮರ್ಪಕ ಹಾಗೂ ಸಮನ್ವಯವಾಗಿ ಕಾರ್ಯನಿರ್ವಹಿಸಬೇಕು. ಟ್ಯಾಂಕರ್ ಹಾಗೂ ಖಾಸಗಿ ಬೋರ್‌ವೆಲ್‌ಗಳಲ್ಲಿ ನೀರು ವೆಚ್ಚದ ಬಿಲ್ಲುಗಳನ್ನು ವಿಪತ್ತು ನಿರ್ವಹಣೆಯಡಿ ಪಾವತಿಸಲಾಗುವುದು. ಇದಲ್ಲದೇ ಪ್ರತಿ ತಾಲೂಕಿಗೆ ಆರ್‌ಡಿಪಿಆರ್ ಇಲಾಖೆಯಿಂದ ಈ ಹಿಂದೆ 20 ಲಕ್ಷ ಹಾಗೂ 25 ಲಕ್ಷ ಬಿಡುಗಡೆ ಮಾಡಲಾಗಿದೆ. ಈ ಅನುದಾನದಡಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ವರದಿ ಪಡೆದುಕೊಳ್ಳಿ. ಇದಲ್ಲದೇ ಇದರೊಂದಿಗೆ 45 ಲಕ್ಷ ರೂ ಅನುದಾನ ಬಿಡುಗಡೆಯಾಗಿದ್ದು, ಇದಕ್ಕೆ ಯೋಜನೆ ಸಿದ್ಧಪಡಿಸಿ ಎಂದು ಹೇಳಿದರು.

ತಾಲೂಕು ಮಟ್ಟದಲ್ಲಿ ಎಲ್ಲೆಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಅವುಗಳನ್ನು ಟ್ಯಾಂಕರ್ ಮ್ಯಾನೇಜ್ಮೆಂಟ್ ಆಪ್‌ನಲ್ಲಿ ದಾಖಲಿಸಬೇಕು. ಇಲ್ಲವಾದಲ್ಲಿ ಅವರಿಗೆ ಹಣ ಪಾವತಿಸಲು ಸಾಧ್ಯವಾಗುವುದಿಲ್ಲ. ಖಾಸಗಿ ಬೋರ್‌ವೆಲ್‌ಗಳಲ್ಲಿ ನೀರು ಪಡೆಯುತ್ತಿದ್ದರೆ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ನೀಡಿರುವ ಪ್ರತಿಯನ್ನು ಸಲ್ಲಿಸಬೇಕು ಎಂದರು.

ಪ್ರತಿವಾರಕ್ಕೊಮ್ಮೆ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಪಿಡಿಓಗಳ ಸಭೆ ನಡೆಸಿ ಕುಡಿಯುವ ನೀರು ಮೇವಿನ ತೊಂದರೆ ಇರುವ ಗ್ರಾಮಗಳ ವಿವರ ಪಡೆದುಕೊಳ್ಳಬೇಕು. ಜಿಲ್ಲೆಯಲ್ಲಿ ಒಟ್ಟು 120 ಖಾಸಗಿ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದು, ಕೆ.ಆರ್.ಪೇಟೆ– 29, ಮದ್ದೂರು– 17, ಮಳವಳ್ಳಿ– 7, ಮಂಡ್ಯ– 37, ನಾಗಮಂಗಲ– 17, ಪಾಂಡವಪುರ– 8, ಶ್ರೀರಂಗಪಟ್ಟಣ– 5 ಬೋರ್ ವೆಲ್‌ಗಳಿಂದ ನೀರು ಪಡೆಯಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಉಪವಿಭಾಗಾಧಿಕಾರಿ ಮಹೇಶ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷಾರಮಣಿ, ಜಿಪಂ ಉಪಕಾರ್ಯದರ್ಶಿ ಎಂ.ಬಾಬು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಚ್.ಎಸ್. ನಿರ್ಮಲಾ, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಡಾ.ಸುರೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಾಲು ಸ್ವೀಕರಿಸದೇ ಡೇರಿಗೆ ಬೀಗ ಜಡಿದ ಕಾರ್ಯದರ್ಶಿ

ಅರಕೆರೆ ಠಾಣೆ ಎದುರು ಬಳ್ಳೇಕೆರೆ ಹಾಲು ಉತ್ಪಾದಕರ ಧರಣಿ



ಶ್ರೀರಂಗಪಟ್ಟಣ, ಏ.30– ತಾಲೂಕಿನ ಬಳ್ಳೇಕೆರೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಪ್ರಭಾರ ಕಾರ್ಯದರ್ಶಿ ಹಾಲು ಸ್ವೀಕರಿಸದೆ ಡೈರಿಗೆ ಬೀಗ ಹಾಕಿ ಹೋದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಗ್ರಾಮಸ್ಥರು ಅರಕೆರೆ ಪೊಲೀಸ್ ಠಾಣೆ ಎದುರು ತಡರಾತ್ರಿವರೆಗೂ ಪ್ರತಿಭಟನೆ ನಡೆಸಿದರು.

ಪ್ರತಿನಿತ್ಯದಂತೆ ಸೋಮವಾರ ಸಂಜೆ ಡೈರಿಗೆ ಹಾಲು ತೆಗೆದುಕೊಂಡು ಹೋದಾಗ ಪ್ರಭಾರ ಕಾರ್ಯದರ್ಶಿ ಬೀಗ ಹಾಕಿಕೊಂಡು ಹೋಗಿದ್ದರು. ಈ ಬಗ್ಗೆ ಅಲ್ಲಿದ್ದ ಸೂಪರ್‌ವೈಸರ್ ವಿಚಾರಿಸಿದಾಗ ಹಾಲು ತೆಗೆದುಕೊಳ್ಳದಂತೆ ಹೇಳಿ ಹೋಗಿದ್ದಾರೆ ಎಂದು ತಿಳಿಸಿದ್ದು, ಗಂಟೆಗಳ ಕಾಲ ಕಾದ ನಂತರ ಗ್ರಾಮಸ್ಥರು ಅರಕೆರೆ ಪೊಲೀಸ್ ಠಾಣೆಗೆ ತೆರಳಿ ಪ್ರತಿಭಟನೆ ನಡೆಸಿ ಹಾಲು ಸ್ವೀಕರಿಸದೆ ಹಾಲು ಉತ್ಪಾದಕರಿಗೆ ನಷ್ಟ ಮಾಡಿರುವ ಪ್ರಭಾರ ಕಾರ್ಯದರ್ಶಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮನ್ಮುಲ್ ಅಧ್ಯಕ್ಷರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಹಾಲು ಉತ್ಪಾದಕರಿಗೆ ಆಗಿರುವ ನಷ್ಟ ಭರಿಸಿಕೊಡುವಂತೆ ಒತ್ತಾಯಿಸಿದರು. ಪ್ರತಿನಿತ್ಯ ಬೆಳಗ್ಗೆ 650 ಲೀಟರ್, ಸಂಜೆ 670 ಲೀಟರ್ ಹಾಲು ಸಂಗ್ರಹ ಮಾಡಲಾಗುತ್ತಿತ್ತು. ಆದರೆ ಡೈರಿ ಪ್ರಭಾರ ಕಾರ್ಯದರ್ಶಿ ಹಾಲಿಗೆ ನೀರು ಹಾಕುತ್ತಿದ್ದಾರೆ ಎಂಬ ಅನುಮಾನ ಇತ್ತು. ಭಾನುವಾರ ರಾತ್ರಿ ಡೈರಿ ಬಳಿ ಪ್ರಭಾರ ಕಾರ್ಯದರ್ಶಿ ನೀರು ಹಿಡಿದುಕೊಳ್ಳುತ್ತಿದ್ದಾಗ ಗ್ರಾಮಸ್ಥನೊಬ್ಬ ಇದನ್ನು ನೋಡಿ ಏಕೆ ನೀರು ಹಿಡಿದುಕೊಳ್ಳುತ್ತಿದ್ದೀಯಾ, ಹಾಲಿಗೆ ನೀರು ಹಾಕುತ್ತಿದ್ದೀಯಾ ಎಂದು ಪ್ರಶ್ನಿಸಿ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿಕೊಂಡರು.

ಈ ಸಮಯದಲ್ಲಿ ಇಬ್ಬರಿಗೂ ಗಲಾಟೆಯಾಗಿ ಮೊಬೈಲ್ ಕಸಿದು ಗ್ರಾಮಸ್ಥನ ಮೇಲೆ ಹಲ್ಲೆ ಮಾಡಿದ್ದಲ್ಲದೆ, ಕಂಪ್ಯೂಟರ್ ಉಪಕರಣವನ್ನು ಕಾರ್ಯದರ್ಶಿ ಒಡೆದು ಹಾಕಿದ್ದಾರೆ. ಸೋಮವಾರ ಬೆಳಗ್ಗೆ ಪುಸ್ತಕದಲ್ಲಿ ಬರೆದುಕೊಂಡು ಹಾಲು ಸ್ವೀಕಾರ ಮಾಡಿದ್ದು, ಆದರೆ ಸಂಜೆ ಸಮಯದಲ್ಲಿ ಹಾಲು ಸ್ವೀಕಾರ ಮಾಡದೆ ಬೀಗ ಹಾಕಿಕೊಂಡು ಹೋಗಿದ್ದಾರೆ. ಇದರಿಂದ ಹಾಲು ಉತ್ಪಾದಕರಿಗೆ ನಷ್ಟವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.



ಜಿಲ್ಲಾಧಿಕಾರಿ ಡಾ. ಕುಮಾರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಅವರು ಇಂದು ಮಂಡ್ಯ ವಿಶ್ವವಿದ್ಯಾಲಯದಲ್ಲಿ ತೆರೆಯಲಾಗಿರುವ ಸ್ಟ್ರಾಂಗ್ ರೂಂಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ದುದ್ದ ಪಿಎಸಿಎಸ್‌ಗೆ ಜೆಡಿಎಸ್‌ನ ಚೌಡೇಶ್ ಅಧ್ಯಕ್ಷ

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದ ಪುಟ್ಟರಾಜು



ಮಂಡ್ಯ, ಏ.30– ತಾಲೂಕಿನ ದುದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಜೆಡಿಎಸ್ ಮತ್ತು ಬಿಜೆಪಿ ಬೆಂಬಲಿತ ಡಿ.ಬಿ.ಚೌಡೇಶ್ ಅಧ್ಯಕ್ಷರಾಗಿ, ಇಂದ್ರಮ್ಮ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

11 ಮಂದಿ ಸದಸ್ಯ ಬಲವುಳ್ಳ ಸೊಸೈಟಿಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚೌಡೇಶ್ ಹಾಗೂ ಇಂದ್ರಮ್ಮ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆಯ ಅಧಿಕಾರಿ ರವಿ ಅವರು ಇವರ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ಮಂಡ್ಯದ ಬಂದೀಗೌಡ ಬಡಾವಣೆಯ ನಿವಾಸದಲ್ಲಿ ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ನಿರ್ದೇಶಕರನ್ನು ಅಭಿನಂದಿಸಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದುದ್ದ ಹೋಬಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅದೇ ರೀತಿ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ 2 ಲಕ್ಷ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ. ಶೇಕಡಾ 95 ರಷ್ಟು ಬಿಜೆಪಿ ಪಕ್ಷದ ಕಾರ್ಯಕರ್ತರು ಮುಖಂಡರು ಶಿಸ್ತಿನ ಸಿಪಾಯಿಗಳ ರೀತಿ ತಮ್ಮ ಶಕ್ತಿ ಮೀರಿ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ. ಅವರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಕುಮಾರಸ್ವಾಮಿರವರು ಮಾಡಿದ್ದ ಜನಪ್ರಿಯ ಕಾರ್ಯಕ್ರಮಗಳನ್ನು ನೆನೆದು ಪಕ್ಷಾತೀತವಾಗಿ ವಿಶೇಷವಾಗಿ ಮಹಿಳೆಯರು ಆಶೀರ್ವಾದ ಮಾಡಿದ್ದಾರೆ ಎಂದರು.

ಪ್ರಜ್ವಲ್ ರೇವಣ್ಣರವರ ಪೆನ್‌ಡ್ರೈವ್ ಪ್ರಕರಣವನ್ನು ರಾಜ್ಯ ಸರ್ಕಾರ ಎಸ್‌ಐಟಿ ತನಿಖಾ ಸಂಸ್ಥೆಗೆ ನೀಡಿದೆ. ಸತ್ಯಾಸತ್ಯತೆ ಶೀಘ್ರದಲ್ಲೇ ಹೊರ ಬೀಳಲಿದೆ, ನಮ್ಮ ಪಕ್ಷ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಡ್ಡಿಪಡಿಸುವುದಿಲ್ಲ. ಎಸ್‌ಐಟಿ ತನಿಖಾ ಸಂಸ್ಥೆಗೆ ಸಹಕಾರ ನೀಡುತ್ತೇವೆ. ಅದರಂತೆ ಪ್ರಜ್ವಲ್ ರೇವಣ್ಣ ಅವರಿಗೆ ಪಕ್ಷದ ವತಿಯಿಂದ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ಪ್ರಧಾನಿ ಮೊಮ್ಮಗ ಆಗಿದ್ದರು ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇಬೇಕು, ಹೆಣ್ಣು ಮಕ್ಕಳ ವಿಡಿಯೋ ಹರಿಬಿಟ್ಟವರಿಗೂ ಸೂಕ್ತ ತನಿಖೆ ನಡೆಸಿ ಕಾನೂನು ರೀತಿ ಕ್ರಮ ಜರುಗಿಸಬೇಕು.

-ಸಿ.ಎಸ್.ಪುಟ್ಟರಾಜು

ಈ ಸಂದರ್ಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಗುರುಪ್ರಸಾದ್, ಎನ್.ಬಿ.ರವಿ, ಡಿ.ಜೆ. ರಮೇಶ್, ಮಹದೇವಪ್ಪ, ಶಿವಮಾದಪ್ಪ, ಶಶಿಕಲಾ, ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಎ.ಮಲ್ಲೇಶ್, ಗ್ರಾಪಂಅಧ್ಯಕ್ಷ ಶ್ರೇಯಶ್ ಗೌಡ, ಮುಖಂಡರಾದ ಡಿ.ಮಹೇಶ್, ಮಂಜಯ್ಯ, ಲೋಕೇಶ್, ಬಸವಲಿಂಗಪ್ಪ, ಶ್ರೀನಿವಾಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಶ್ಲೀಲ ಚಿತ್ರಕ್ಕೆ ಡಿಕೆಶಿ ಫೋಟೋ ಮಾರ್ಫಿಂಗ್, ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು, ಏ.30–ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರ ಫೋಟೋಗೆ ಬೇರೊಂದು ಅಶ್ಲೀಲ ಚಿತ್ರ ಸೇರಿಸಿ, ವೈರಲ್ ಆಗಿದ್ದು, ಈ ಸಂಬಂಧ ಕೆಪಿಸಿಸಿ ಕಾನೂನು ಘಟಕ ದೂರು ನೀಡಿದೆ. ಅಶ್ಲೀಲ ಚಿತ್ರಕ್ಕೆ ಡಿ.ಕೆ.ಶಿವಕುಮಾರ್ ಫೋಟೋ ಮಾರ್ಫಿಂಗ್ ಮಾಡಲಾಗಿದೆ ಎಂದು ಆರೋಪಿಸಿ ಸಂತೋಷ್, ರಾಜೇಶ್, ಕೇಸರಿ ಸಾಮ್ರಾಟ್ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಗೆ ದೂರು ದಾಖಲಿಸಿದೆ.

ಬಿಜೆಪಿ ಮುಖಂಡರ ಅಶ್ಲೀಲ ಭಾವಚಿತ್ರಕ್ಕೆ ಡಿಕೆ ಶಿವಕುಮಾರ್ ಮುಖ ಜೋಡಣೆ ಮಾಡಲಾಗಿದ್ದು, ಇದೀಗ ಆ ಎಡಿಟ್ ಫೋಟೋವನ್ನು ವೈರಲ್ ಮಾಡಲಾಗಿದೆ. ಫೇಸ್‌ಬುಕ್, ಯೂಟ್ಯೂಬ್, ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಹೀಗಾಗಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೆಪಿಸಿಸಿ ಕಾನೂನು ಘಟಕ ದೂರು ನೀಡಿದೆ. ಈ ದೂರಿನ ಮೇರೆಗೆ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸರು ಸಂತೋಷ್, ರಾಜೇಶ್, ಕೇಸರಿ ಸಾಮ್ರಾಟ್ ವಿರುದ್ಧ FIR ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಈ ಹಿಂದೆಯೇ ಡಿ.ಕೆ.ಶಿವಕುಮಾರ್ ಅವರ ಫೋಟೋ ಜೊತೆ ಅಶ್ಲೀಲ ಚಿತ್ರ ಜೋಡಿಸಿ ವೈರಲ್ ಮಾಡಲಾಗಿತ್ತು ಇದೀಗ ಪ್ರಜ್ವಲ್ ರೇವಣ್ಣ ಅವರ ವಿಡಿಯೋಗಳು ವೈರಲ್ ಆಗುತ್ತಿದ್ದಂತೆಯೇ ಇದೀಗ ಡಿ.ಕೆ. ಶಿವಕುಮಾರ್ ಅವರ ಎಡಿಟೆಡ್ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಸಂಬಂಧ ಜೆಡಿಎಸ್, ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ಆರೋಪ–ಪ್ರತ್ಯಾರೋಪಗಳು ನಡೆದಿವೆ. ಇದರ ಬೆನ್ನಲ್ಲೇ ಇದೀಗ ಅಂತಿಮವಾಗಿ ಕೆಪಿಸಿಸಿ ಕಾನೂನು ಘಟಕ ಫೋಟೋ ಶೇರ್ ಮಾಡಿದ್ದವರ ವಿರುದ್ಧ ದೂರು ದಾಖಲಿಸಿದೆ.



ಮೈಸೂರಿನ ಅಶೋಕಪುರಂ ಎನ್‌ಟಿಎಂ ಶಾಲೆ ಆವರಣದಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಕಾರ್ಮಿಕರಿಗೆ ಗೌರವ ಸಮರ್ಪಣೆ

ಮೈಸೂರು, ಏ.30– ಕಾರ್ಮಿಕರ ದಿನಾಚರಣೆ ಪ್ರಯುಕ್ತ ಮೈಸೂರಿನ ರಾಮಕೃಷ್ಣನಗರದಲ್ಲಿನ ಸುಯೋಗ್ ಆಸ್ಪತ್ರೆ ಹಾಗೂ ಸುಯೋಗ್ ಶಿಕ್ಷಣ ಸಂಸ್ಥೆಗಳ ಸಮೂಹದ ವತಿಯಿಂದ ಬುಧವಾರ ಬೆಳಗ್ಗೆ 11ಕ್ಕೆ ಆಸ್ಪತ್ರೆ ಆವರಣದಲ್ಲಿ ಕಾರ್ಮಿಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲಾ ಕೈಗಾರಿಕಾ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಜಗದೀಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಇಎಸ್‌ಐ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಶಿವಕುಮಾರ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಲೋಕಸಭಾ ಚುನಾವಣೆ ವೇಳೆಯಲ್ಲಿ ಕೇಜ್ರಿವಾಲ್ ಬಂಧನ ಸರಿನಾ?

ಇಡಿಯಿಂದ ಪ್ರತಿಕ್ರಿಯೆ ಕೇಳಿದ ಸುಪ್ರೀಂಕೋರ್ಟ್

ನವದೆಹಲಿ, ಏ.30– ಲೋಕಸಭಾ ಚುನಾವಣೆ ವೇಳೆಯಲ್ಲಿ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರ ಬಂಧನ ಕುರಿತು ಸುಪ್ರೀಂ ಕೋರ್ಟ್ ಮಂಗಳವಾರ ಜಾರಿ ನಿರ್ದೇಶನಾಲಯವನ್ನು ಪ್ರಶ್ನಿಸಿದ್ದು, ಇಡಿಯಿಂದ ಪ್ರತಿಕ್ರಿಯೆ ಕೇಳಿದೆ.

ಬಂಧನದ ಸಮಯ ಕುರಿತು ಪ್ರತಿಯಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್ ವಿ ರಾಜು ಅವರನ್ನು ಕೇಳಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರನ್ನೊಳಗೊಂಡ ನ್ಯಾಯಪೀಠ, ಜೀವನ ಮತ್ತು ಸ್ವಾತಂತ್ರ್ಯವು ಅತ್ಯಂತ ಮಹತ್ವದ್ದಾಗಿದ್ದು, ಅದನ್ನು ನೀವು ಅಲ್ಲಗಳೆಯುವಂತಿಲ್ಲ ಎಂದು ಹೇಳಿದೆ.

ಎಸ್.ವಿ. ರಾಜುಗೆ ಇತರ ಹಲವು ಪ್ರಶ್ನೆಗಳನ್ನು ಕೇಳಿದ ಪೀಠ, ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೇಜ್ರಿವಾಲ್ ಅವರ ಬಂಧನ ಪ್ರಶ್ನಿಸಿ ಸಲ್ಲಿಸಿದ ಅರ್ಜಿಯ ವಿಚಾರಣೆಯ ಮುಂದಿನ ದಿನಾಂಕದಂದು ಉತ್ತರಿಸಲು ತನಿಖಾ ಸಂಸ್ಥೆಗೆ ಸೂಚಿಸಿತು. ಈ ಅರ್ಜಿಯನ್ನು ಬುಧವಾರದಿಂದ ಶುಕ್ರವಾರ ವಿಚಾರಣೆಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಕೇಜ್ರಿವಾಲ್ ಅವರನ್ನು ಮಾರ್ಚ್ 21 ರಂದು ಬಂಧಿಸಿದ ನಂತರ ಪ್ರಸ್ತುತ ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ಸುಪ್ರೀಂಕೋರ್ಟ್ ಏಪ್ರಿಲ್ 15ರಂದು ಇಡಿಗೆ ನೋಟಿಸ್ ಜಾರಿ ಮಾಡಿತು ಮತ್ತು ಕೇಜ್ರಿವಾಲ್ ಅವರ ಮನವಿಗೆ ಪ್ರತಿಕ್ರಿಯೆ ಕೇಳಿತು.



ಎಂಡಿಸಿಸಿ ಬ್ಯಾಂಕ್‌ನ ಮಾಜಿ ಅಧ್ಯಕ್ಷರು, ಕಾಂಗ್ರೆಸ್ ಮುಖಂಡರೂ ಆದ ಎಸ್.ಚಂದ್ರಶೇಖರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿನಂದಿಸಿ, ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಒಕ್ಕಲಿಗರ ಸಂಘದ ನಿರ್ದೇಶಕ ಒಂಟಿಕೊಪ್ಪಲ್ ಗುರುರಾಜ್, ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಅನಂತ ನಾರಾಯಣ, ಮಂಜಣ್ಣ, ಶಿವಕುಮಾರ್, ದೇವರಾಜ್, ಮಹೇಶ್, ಆದರ್ಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಹುಮುಖ ಪ್ರತಿಭೆ ಮಾತ್ರವಲ್ಲ ಸಾಧಕಿ!



ಮೈಸೂರು, ಏ.30(ಎಂಕೆ)– ಸ್ವ ಸಾಮರ್ಥ್ಯ, ಸತತ ಪರಿಶ್ರಮ ಹಾಗೂ ಕಲಿಯುವ ಆಸಕ್ತಿ ಇದ್ದರೆ ಕಲೆಗಳು ಕರಗತವಾಗುತ್ತವೆ ಎಂಬುದಕ್ಕೆ ಮೈಸೂರಿನಲ್ಲಿ ನೆಲೆಸಿರುವ ಬಹುಮುಖ ಪ್ರತಿಭೆ ವಿದುಷಿ ಸ್ವರ್ಣಲತಾ ಶಾಸ್ತ್ರಿ ಸಾಕ್ಷಿಯಾಗಿದ್ದಾರೆ. ಯೋಗ ಸಾಧಕಿ, ಭರತನಾಟ್ಯ ಪ್ರವೀಣೆ, ರೂಪದರ್ಶಿ, ನಟಿಯೂ ಆಗಿರುವ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ, ಅಷ್ಟಾಂಗ ವಿನ್ಯಾಸ ಯೋಗ, ಆಯುರ್ವೇದ ಮತ್ತು ಪೌಷ್ಟಿಕ ಆಹಾರ ಪೋಷಣೆಯಲ್ಲಿಯೂ ಪರಿಣತಿ ಪಡೆದಿದ್ದಾರೆ.

ಮೂಲತಃ ಮಲೆನಾಡಿನ ಶೃಂಗೇರಿ ಇವರ ಹುಟ್ಟೂರಾದರೂ ಬೆಳೆದದ್ದು, ಪಾಂಡವಪುರದ ವಿಶ್ವೇಶ್ವರನಗರದಲ್ಲಿ. ಶ್ರೀರಂಗಪಟ್ಟಣದಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಪ್ರಾರಂಭಿಕ ಹಂತದ ಭರತನಾಟ್ಯ ಹಾಗೂ ಶಾಸ್ತ್ರೀಯ ಸಂಗೀತ ತರಬೇತಿ ಪಡೆದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಹಲವು ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿ, ಮೆಚ್ಚುಗೆ ಪಡೆದಿದ್ದಾರೆ. ಫ್ಯಾಷನ್ ಡಿಸೈನಿಂಗ್ ವಿದ್ಯಾಭ್ಯಾಸ ಮಾಡಿರುವ ಸ್ವರ್ಣಲತಾ, ಫ್ಯಾಷನ್ ಲೋಕದಲ್ಲಿಯೂ ಗಮನಾರ್ಹ ಸಾಧನೆ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯುವ ಚೇತನ ಪ್ರಶಸ್ತಿಗೂ ಭಾಜನರಾಗಿರುವ ಸ್ವರ್ಣಲತಾ, ಶೃಂಗೇರಿ ಶ್ರೀಮಠದ ಸುವರ್ಣ ಮಹೋತ್ಸವದ ತ್ಯಾಗರಾಜರ ಆರಾಧನೆ ಕಾರ್ಯಕ್ರಮ, ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸೇರಿದಂತೆ ರಾಜ್ಯದ ವಿವಿಧೆಡೆ ಹಲವಾರು ಸಾಂಸ್ಕೃತಿಕ ವೇದಿಕೆಯಲ್ಲಿ ಹಾಗೂ ಮಲೇಷಿಯಾದಲ್ಲಿ ಅಂತರರಾಷ್ಟ್ರೀಯ ಮಟ್ಟದ ವೇದಿಕೆಯಲ್ಲೂ ಭರತ ನಾಟ್ಯ ಪ್ರದರ್ಶನ ನೀಡಿ, ತಮ್ಮ ಕೌಶಲ್ಯತೆ ಮೆರೆದಿದ್ದಾರೆ. ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲೂ ಕಾಣಿಸಿಕೊಂಡಿರುವ ಅವರು, 2009ರಲ್ಲಿ ತೆರೆಕಂಡ 'ಆಟೋ' ಕನ್ನಡ ಚಿತ್ರದ ಮೂಲಕ ಚಿತ್ರ ರಸಿಕರ ಮನಗೆದ್ದಿದ್ದರು. ನಂತರ ಹತ್ತು–ಹಲವು ಫ್ಯಾಷನ್ ಶೋಗಳಲ್ಲಿ ಭಾಗವಹಿಸಿ, ತಮ್ಮ ಆಕರ್ಷಕ ಬೆಕ್ಕಿನ ನಡಿಗೆ ಮೂಲಕ ಫ್ಯಾಷನ್ ಪ್ರಿಯರನ್ನು ಆಕರ್ಷಿಸಿದ್ದಾರೆ. ಮೈಸೂರು ಸಂಸ್ಥಾನದ ಲಾಂಛನವಾದ ಗಂಡಬೇರುಂಡ ಚಿನ್ನದ ನೇಯ್ಗೆಯುಳ್ಳ ರೇಷ್ಮೆ ಸೀರೆಯೊಂದಿಗೆ ಪಾರಂಪರಿಕ ವಸ್ತ್ರ ತೊಟ್ಟು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿ ಹಿರಿಮೆಯನ್ನು ಗಳಿಸಿದ್ದಾರೆ. ಹಾಗೆಯೇ ಹಲವಾರು ಸೌಂದರ್ಯವರ್ಧಕ ಪದಾರ್ಥಗಳ ಅಂಬಾಸಿಡರ್ ಆಗಿ ಕಾರ್ಯನಿರ್ವಹಿಸಿರುವ ಸ್ವರ್ಣಲತಾ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಜಾಹೀರಾತುಗಳ ಮೂಲಕ ಜಾಹೀರಾತು ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದಾರೆ.



ಯೋಗ ಶಾಲೆ ಸ್ಥಾಪನೆ: ಭರತನಾಟ್ಯ, ಸಿನಿಮಾ, ಜಾಹೀರಾತು, ಫ್ಯಾಷನ್ ಮಾತ್ರವಲ್ಲದೆ ಯೋಗ ಸಾಧಕಿಯೂ ಆಗಿರುವ ಇವರು, ಮೈಸೂರಿನ ಗದ್ದಿಗೆ ರಸ್ತೆ(ಬೋಗಾದಿ ಹತ್ತಿರ) ಸಮೀಪದಲ್ಲಿರುವ ರೂಪ ನಗರದಲ್ಲಿ ಮುದ್ರಾ ಡ್ಯಾನ್ಸ್ ಮತ್ತು ಯೋಗ ಶಾಲೆ ಸ್ಥಾಪಿಸಿ, ನೂರಾರು ಮಂದಿಗೆ ಯೋಗಾಭ್ಯಾಸ ಹೇಳಿಕೊಡುತ್ತಿದ್ದಾರೆ. 2021ರಲ್ಲಿ ಮೈಸೂರು ಅಷ್ಟಾಂಗ ಯೋಗ ಶಾಲೆಯಿಂದ ಯೋಗ ಶಿಕ್ಷಕಿಯಾಗಿ ತರಬೇತಿ ಪಡೆದಿರುವ ಅವರು, ಅಷ್ಟಾಂಗ ವಿನ್ಯಾಸ ಯೋಗದ ಪ್ರವೀಣೆಯೂ ಆಗಿದ್ದಾರೆ.

ಮಾರ್ಗದರ್ಶನ: ಕೌಶಲ್ಯ ಭಾರತ್ ಅಡಿಯಲ್ಲಿ ಇಂಡಿಯಾ ಆರೋಗ್ಯಂ ಇನ್‌ಸ್ಟಿಟ್ಯೂಟ್‌ನಿಂದ 'ಆಯುರ್ವೇದ ಆಹಾರ ಮತ್ತು ಪೋಷಣೆ' ಕುರಿತು ತರಬೇತಿ ಪಡೆದಿರುವ ಸ್ವರ್ಣಲತಾ, ಆರೋಗ್ಯ ವೃದ್ಧಿ, ಪೌಷ್ಟಿಕ ಆಹಾರ ಸೇವನೆ, ವ್ಯಾಯಾಮ ಸೇರಿದಂತೆ ಉತ್ತಮ ಜೀವನ ಶೈಲಿ ರೂಢಿಸಿಕೊಳ್ಳುವ ಕುರಿತು ನೂರಾರು ಮಂದಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ.

ಉಚಿತ ತರಬೇತಿ: ಬಡ ಕುಟುಂಬ ಹಾಗೂ ವಿಶೇಷಚೇತನ ಮಕ್ಕಳಿಗೆ ಉಚಿತವಾಗಿ ಭರತನಾಟ್ಯ ತರಬೇತಿ ನೀಡುತ್ತಿರುವ ಸ್ವರ್ಣಲತಾ, ಸಾಮಾಜಿಕ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಹಿರಿಯ ನಾಗರಿಕರ ಆಹಾರ ಕ್ರಮದ ಕುರಿತು ಅರಿವು ಮೂಡಿಸುತ್ತಾ ಅವರ ಜೀವನ ಶೈಲಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ.

ಗುರುಗಳ ಮಾರ್ಗದರ್ಶನ, ಕಲಿಯುವ ಉತ್ಸಾಹ...

ಓದಿನ ಜೊತೆ ಜೊತೆಗೆ ಚಿಕ್ಕಂದಿನಿಂದಲೂ ಭರತನಾಟ್ಯ, ಸಂಗೀತ ಅಭ್ಯಾಸ ಮಾಡುತ್ತಿದ್ದೆ. ಭರತನಾಟ್ಯದಲ್ಲಿ ವಿದ್ವತ್ ಪಡೆದ ಬಳಿಕ ಫ್ಯಾಷನ್ ಶೋಗೆ ಅವಕಾಶ ದೊರೆಯಿತು. ನಂತರ ಸಿನಿಮಾದಲ್ಲಿ ಅವಕಾಶ ದೊರೆತ ಬಳಿಕ ಹಲವು ಸೀರೆ, ಸೌಂದರ್ಯವರ್ಧಕಗಳ ಜಾಹೀರಾತುಗಳಲ್ಲಿ ಭಾಗವಹಿಸಿದ್ದೇನೆ. ವಿದುಷಿ ವಿದ್ಯಾ ರವಿಶಂಕರ್, ಡಾ.ಶೀಲಾ ಶ್ರೀಧರ್, ವಿದುಷಿ ನೇತ್ರಾ ಅವರ ಮಾರ್ಗ ದರ್ಶನ ಭರತನಾಟ್ಯ, ಸಂಗೀತ, ನೃತ್ಯ ಅಭ್ಯಾಸ ಹಾಗೂ ಸಂದೀಪ್ ಶಿವಶಂಕರ್, ಪೂರ್ಣಿಮಾ ಸಂದೀಪ್ ಅವರ ಮಾರ್ಗದರ್ಶನದಲ್ಲಿ ಯೋಗ ತರಬೇತಿ, ಡಾ.ರಮೇಶ್ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಅಷ್ಟಾಂಗ ಯೋಗ ವಿನ್ಯಾಸ ತರಬೇತಿ ಪಡೆದಿದ್ದೇನೆ. ನನ್ನೆಲ್ಲಾ ಗುರುಗಳ ಮಾರ್ಗದರ್ಶನ ಹಾಗೂ ಕಲಿಯುವ ಉತ್ಸಾಹದಿಂದ ಇದೆಲ್ಲವೂ ಸಾಧ್ಯವಾಯಿತು. ಪಂಜಾಬ್ ವಿವಿಯಿಂದ ಆಯುರ್ವೇದ ಮತ್ತು ಪೋಷಕಾಂಶ ಕುರಿತ ತರಬೇತಿಯನ್ನು ಪಡೆದಿದ್ದು, ಸರ್ಟಿಫಿಕೆಟ್ ಜೊತೆಗೆ ಪಡೆದ ಜ್ಞಾನ, ಅನುಭವ ಮುಖ್ಯವಾಗುತ್ತದೆ. ಕಲಿತಿರುವುದನ್ನು ಹೇಳಿಕೊಡುವುದು ಮುಖ್ಯ ವಾಗಿದೆ. ಈ ನಿಟ್ಟಿನಲ್ಲಿ ಮುದ್ರಾ ಡ್ಯಾನ್ಸ್ ಮತ್ತು ಯೋಗ ಶಾಲೆ ನಡೆಸುತ್ತಿದ್ದೇನೆ.



– ವಿದುಷಿ ಸ್ವರ್ಣಲತಾ ಶಾಸ್ತ್ರಿ, ಬಹುಮುಖ ಪ್ರತಿಭೆ



ಸಕಲ ಸರ್ಕಾರಿ ಗೌರವದೊಂದಿಗೆ ಸಂಸದ ಶ್ರೀನಿವಾಸ ಪ್ರಸಾದ್ ಅಂತ್ಯಕ್ರಿಯೆ







ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಮಂಗಳವಾರ ಶ್ರೀನಿವಾಸ ಪ್ರಸಾದ್ ಅವರ ಅಂತ್ಯ ಸಂಸ್ಕಾರದ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿಟ್ಟು ಸರ್ಕಾರದ ಪರವಾಗಿ ಗೌರವ ಸಲ್ಲಿಸಿದರು(ಎಡಚಿತ್ರ). ಈ ವೇಳೆ ಪೊಲೀಸರು 21 ಸುತ್ತು ಗುಂಡು ಹಾರಿಸಿ, ಗೌರವ ವಂದನೆ (ಬಲಚಿತ್ರ) ಸಲ್ಲಿಸಲಾಯಿತು.

ಒಂದನೇ ಪುಟದಿಂದ

ಸರ್ಕಾರದ ವತಿಯಿಂದ ಸಲ್ಲಿಸಬೇಕಾದ ಗೌರವ ವಂದನೆ ಪ್ರಕ್ರಿಯೆ ಮುಗಿದ ನಂತರ ಅಂತ್ಯ ಸಂಸ್ಕಾರಕ್ಕಾಗಿ ಬೌದ್ಧ ಧರ್ಮದ ವಿಧಿ ವಿಧಾನದಂತೆ ಭಂತೇಜಿಗಳ ಪ್ರಾರ್ಥನಾ ಕಾರ್ಯ ಆರಂಭವಾಯಿತು.

ಬೆಂಗಳೂರಿನ ಮಹಾಬೋಧಿ ಸೊಸೈಟಿ ಮುಖ್ಯಸ್ಥರಾದ ಪೂಜ್ಯ ಆನಂದ ಭಂತೇಜಿ ಹಾಗೂ ಮನೋರಖ್ಖಿತ ಭಂತೇಜಿ ಅವರ ಮಾರ್ಗದರ್ಶನದಲ್ಲಿ ಬೌದ್ಧ ಧರ್ಮ ದಂತೆ ಅಂತ್ಯ ಸಂಸ್ಕಾರದ ವಿಧಿ ವಿಧಾನ ಕಾರ್ಯಗಳಿಗೆ ಚಾಲನೆ ನೀಡಲಾಯಿತು.

ಅಂತ್ಯ ಸಂಸ್ಕಾರದ ಸ್ಥಳದ ಬಳಿಯ ವೇದಿಕೆಯಲ್ಲಿ ಗೌತಮ ಬುದ್ಧನ ಪ್ರತಿಮೆ ಪ್ರತಿಷ್ಠಾಪಿಸಲಾಗಿತ್ತು. 15 ಕ್ಕೂ ಹೆಚ್ಚು ಬೌದ್ಧ ಬಿಕ್ಕುಗಳು ವೇದಿಕೆಯಲ್ಲಿ ಆಸೀನರಾದರು.

ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರದ ಬಳಿ ಪ್ರಾರ್ಥನೆ ಆರಂಭವಾಯಿತು. ಈ ವೇಳೆ ಬುದ್ಧ ವಂದನೆ, ಧಮ್ಮ ವಂದನೆ ಹಾಗೂ ಸಂಘ ವಂದನೆ ಸಲ್ಲಿಸಲಾಯಿತು. ತರುವಾಯ ಆನಂದ ಭಂತೇಜಿ, ಮನೋರಖ್ಖಿತ ಭಂತೇಜಿ ಸೇರಿದಂತೆ ಇತರೆ ಭಂತೇಜಿಗಳು ದೀಪ, ಧೂಪ ಹಾಗೂ ಪುಷ್ಪ ಪೂಜೆ ನೆರವೇರಿಸಿದರು.

ಈ ವೇಳೆ ನೆರೆದಿದ್ದ ಜನರಿಗೆ ತಿಸರಣ ಮತ್ತು ಪಂಚಶೀಲ ಬೋಧಿಸಲಾಯಿತು. ನಂತರ ರತನ ಸೂತ್ರ ಪಠಣ ಮಾಡಿ, ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ್ದ ಜನರೊಡನೆ ಧ್ಯಾನ ಪಠಣ ಮಾಡಲಾಯಿತು.

ಈ ಸಂದರ್ಭದಲ್ಲಿ ಅನಿಚ್ಚಾ ವತ ಸಂಖಾರ, ಉಪ್ಪಾದ ವಯ ಧಮ್ಮಿನೋ, ಉಪ್ಪಜ್ಜಿತ್ವಾ ನಿರುಜ್ಝನ್ತಿ, ತೇಜಸಂ ಉಪಸಮೋ ಸುಖೋ ಎಂದು ಮೂರು ಬಾರಿ ಪಠಿಸಲಾಯಿತು. ಪ್ರಾರ್ಥನಾ ಹಾಗೂ ಪಠಣ ಮುಗಿದ ನಂತರ ಅಂತ್ಯ ಸಂಸ್ಕಾರದ ಸ್ಥಳದಲ್ಲಿ ನೀರು ಚಿಮುಕಿಸುವ ತಿರೋಕುಡ್ಡ ಸೂತ್ರವನ್ನು ಭಂತೇಜಿಗಳು ಪಠಿಸಿದರು. ಈ ವೇಳೆ ಕುಟುಂಬಸ್ಥರು ಭಂತೇಜಿಗಳಿಗೆ ವಸ್ತ್ರದಾನ ಹಾಗೂ ಹಣ್ಣುಗಳನ್ನು ಅರ್ಪಿಸಿದರು. ಅಂತಿಮವಾಗಿ ಅಂತ್ಯಸಂಸ್ಕಾರದ ಸ್ಥಳದಲ್ಲಿ ಪವಿತ್ರ ಜಲ ಪ್ರೋಕ್ಷಣೆ ಮಾಡಿ, ಪುಣ್ಯನುಮೋದನೆ ಮಾಡಲಾಯಿತು. ಕಡೆಯದಾಗಿ ಕುಟುಂಬಸ್ಥರು ಅಂತಿಮ ದರ್ಶನ ಪಡೆದು, ವಿದಾಯ ಹೇಳಿದರು. ಈ ಸಂದರ್ಭದಲ್ಲಿ ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ, ಪುತ್ರಿಯರಾದ ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್ ಹಾಗೂ ಪೂನಂ ಪ್ರಸಾದ್ ರೋಧಿಸಿದರು. ಆ ವೇಳೆ ಶೋಕದ ವಾತಾವರಣ ಮನೆ ಮಾಡಿತು.



ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಮಂಗಳವಾರ ಶ್ರೀನಿವಾಸ ಪ್ರಸಾದ್ ಅವರ ಅಂತ್ಯಸಂಸ್ಕಾರಕ್ಕೂ ಮುನ್ನ ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ ಹಾಗೂ ಪುತ್ರಿಯರು ಅಂತಿಮ ದರ್ಶನ ಪಡೆಯುವ ವೇಳೆ ರೋಧಿಸಿದರು.

ನಂತರ ಶ್ರೀನಿವಾಸ ಪ್ರಸಾದ್ ಅವರ ಪಾರ್ಥಿವ ಶರೀರವನ್ನು ಅಂತ್ಯ ಸಂಸ್ಕಾರಕ್ಕೆ ಗುಂಡಿಯೊಳಗೆ ಇಳಿಸಲಾಯಿತು. ಈ ವೇಳೆ ಭಂತೇಜಿಗಳು ಸೂತ್ರಗಳನ್ನು ಪಠಿಸಿದರು. ಅಂತಿಮವಾಗಿ ಸಂಸ್ಕಾರ ನೆರವೇರಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಟಿ.ಎಸ್.ಶ್ರೀವತ್ಸ, ಎ.ಆರ್.ಕೃಷ್ಣಮೂರ್ತಿ ಸೇರಿದಂತೆ ಸಾವಿರಾರು ಜನರು ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದರು.

ದಲಿತ ಸೂರ್ಯ ಎಂಬ ಹೆಸರಿನಿಂದ ದೀನ ದಲಿತರ ಪರ ದನಿ ಎತ್ತಿ, ಸ್ವಾಭಿಮಾನದ 50 ವರ್ಷಗಳ ಆದರ್ಶ ರಾಜಕಾರಣ ಮಾಡಿದ ಶ್ರೀನಿವಾಸ ಪ್ರಸಾದ್ ಇನ್ನು ನೆನಪು ಮಾತ್ರ. ಆದರೆ ಶ್ರೀನಿವಾಸ ಪ್ರಸಾದ್ ಅವರ ಗಟ್ಟಿತನದ ತತ್ವಾದರ್ಶ, ನೇರ, ನಿಷ್ಠೂರತೆ, ತಾಳ್ಮೆ, ಎಂದೆಂದಿಗೂ ಪ್ರಸ್ತುತ.

ಶ್ರೀನಿವಾಸ ಪ್ರಸಾದ್ ದಿಟ್ಟತನ ನೆನೆದು ಕಣ್ಣೀರಿಟ್ಟ ಸಂಸದ ಪ್ರತಾಪ್ ಸಿಂಹ



ಮೈಸೂರಿನ ಅಶೋಕಪುರಂನ ಎನ್‌ಟಿಎಂ ಸರ್ಕಾರಿ ಶಾಲೆಯಲ್ಲಿ ಮಂಗಳವಾರ ಸಂಸದ ಪ್ರತಾಪ್ ಸಿಂಹ ಅವರು ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದು, ಕಂಬನಿ ಮಿಡಿದರು.

ಮೈಸೂರು, ಏ.30(ಬಿಎಲ್‌ಯು)– ಸಂಸದ ಶ್ರೀನಿವಾಸ ಪ್ರಸಾದ್ ಅವರ ಅಗಲಿಕೆ ಬಗ್ಗೆ ಮಾತನಾಡುವ ವೇಳೆ ಸಂಸದ ಪ್ರತಾಪ್ ಸಿಂಹ ಗದ್ಗದಿತರಾಗಿ ಕಣ್ಣೀರಿಟ್ಟ ಪ್ರಸಂಗ ಇಂದು ನಡೆಯಿತು.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಸಂಸದನಾಗಿ ಕೆಲಸ ಮಾಡುವ ವೇಳೆ ಶ್ರೀನಿವಾಸಪ್ರಸಾದ್ ಎಂದೂ ನನ್ನ ಬಗ್ಗೆ ಬಹಿರಂಗವಾಗಿ ಟೀಕೆ ಮಾಡಲಿಲ್ಲ ಎಂದು ಪ್ರತಾಪ್ ಸಿಂಹ ಭಾವುಕರಾದರು.

ರಾಜಕಾರಣದಲ್ಲಿ ದ್ವೇಷ ಹಾಗೂ ಅಸೂಯೆ ಇಲ್ಲದ ಏಕಮೇವ ವ್ಯಕ್ತಿತ್ವದ ಅಪರೂಪದ ರಾಜಕಾರಣಿ ಶ್ರೀನಿವಾಸ ಪ್ರಸಾದ್ ಆಗಿದ್ದರು. ನನ್ನಲ್ಲಿ ಏನಾದರೂ ತಪ್ಪಿದ್ದರೆ ನಾಲ್ಕು ಗೋಡೆ ಮಧ್ಯೆ ಕರೆದು ಕಿವಿಮಾತು ಹೇಳುತ್ತಿದ್ದರೆ ಹೊರತು ಎಂದೂ ಬಹಿರಂಗವಾಗಿ ಟೀಕೆ ಮಾಡುತ್ತಿರಲಿಲ್ಲ ಎಂದರು. ರಾಜಕಾರಣದಲ್ಲಿ ಒಳ್ಳೆಯದು ಹಾಗೂ ಕೆಟ್ಟದ್ದನ್ನು ಸೂಕ್ಷ್ಮವಾಗಿ ಗಮನಿಸಿ ನಿಷ್ಪಕ್ಷಪಾತವಾಗಿ ಮಾತನಾಡುತ್ತಿದ್ದರು. ಬೇರೆ ಪಕ್ಷದವರು ಎಂಬ ಭೇದ ಭಾವವಿಲ್ಲದೆ ಎಲ್ಲರನ್ನು ಪ್ರೀತಿ, ವಿಶ್ವಾಸದಿಂದ ನೋಡುತ್ತಿದ್ದರು ಎಂದು ಹೇಳಿದರು. ಮೈಸೂರಿನಲ್ಲಿ ಒಳ್ಳೆಯ ರಾಜಕಾರಣಿಗಳಿಗೆ ಕಾಲವಿಲ್ಲವೇನೊ ಅನ್ನಿಸುತ್ತಿದೆ. ಧ್ರುವನಾರಾಯಣ್ ನಂತರ ಶ್ರೀನಿವಾಸ ಪ್ರಸಾದ್ ನಮ್ಮನ್ನು ಅಗಲಿದ್ದಾರೆ. ಸಜ್ಜನ ರಾಜಕಾರಣಿಗಳು ಬೇಗ ಹೋಗುತ್ತಿರುವುದು ಮನಸ್ಸಿಗೆ ತುಂಬಾ ದುಃಖವಾಗುತ್ತಿದೆ ಎಂದು ಪ್ರತಾಪ್ ಸಿಂಹ ಮತ್ತೆ ಗದ್ಗದಿತರಾದರು.



ಮೈಸೂರಿನ ಅಶೋಕಪುರಂನ ಎನ್ ಟಿಎಂ ಸರ್ಕಾರಿ ಶಾಲೆಯಲ್ಲಿ ಮಂಗಳವಾರ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಸಂಸದ ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದರು.

ಶ್ರೀನಿವಾಸ ಪ್ರಸಾದ್ ಸ್ವಾಭಿಮಾನದಿಂದ ಬದುಕಿದ ಅಪರೂಪದ ರಾಜಕಾರಣಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುಣಗಾನ

ಮೈಸೂರು, ಏ.30(ಬಿಎಲ್‌ಯು)– ಸಂಸದ ಶ್ರೀನಿವಾಸ ಪ್ರಸಾದ್ ಸ್ವಾಭಿಮಾನದಿಂದ ಬದುಕಿದ ಅಪರೂಪದ ರಾಜಕಾರಣಿಯಾಗಿದ್ದರು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭಿಪ್ರಾಯಪಟ್ಟರು. ಮೈಸೂರಿನ ಅಶೋಕಪುರಂನ ಎನ್‌ಟಿಎಂ ಶಾಲೆಯಲ್ಲಿ ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಧೈರ್ಯದಿಂದ ಮುನ್ನುಗ್ಗಿ, ಸಮಾಜಕ್ಕಾಗಿ ಹೋರಾಟ ಮಾಡಿದ ಪ್ರಾಮಾಣಿಕ ರಾಜಕಾರಣಿ ಎಂದರು.

ಬಾಬಾ ಸಾಹೇಬ್ ಅಂಬೇಡ್ಕರ್ ತತ್ವಾದರ್ಶದಲ್ಲಿ ನಂಬಿಕೆ ಇಟ್ಟು ಸ್ವಾಭಿಮಾನದಿಂದ ಬದುಕಿದ ಅಪರೂಪದ ರಾಜಕಾರಣಿಯಾಗಿದ್ದರು. ಅನಾರೋಗ್ಯದ ಕಾರಣ ಶ್ರೀನಿವಾಸ ಪ್ರಸಾದ್ ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆ ನನಗೆ ತೀವ್ರ ಬೇಸರ ತಂದಿದೆ ಎಂದು ಹೇಳಿದರು.

ಶ್ರೀನಿವಾಸ ಪ್ರಸಾದ್ ಕುಟುಂಬಕ್ಕೆ ಅವರ ಅಗಲಿಕೆ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ನೀಡಲಿ ಎಂದು ಕೇಳಿಕೊಳ್ಳುವೆ ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು. ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದ ನಂತರ ಮಲ್ಲಿಕಾರ್ಜುನ ಖರ್ಗೆ ಪ್ರಸಾದ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.



ಮೈಸೂರಿನ ಅಶೋಕಪುಂನ ಎನ್‌ಟಿಎಂ ಸರ್ಕಾರಿ ಶಾಲೆಯಲ್ಲಿ ಮಂಗಳವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಂಸದ ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದು ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ದತ್ತು ಸ್ವೀಕಾರದ ವೇಳೆ ಸಹಕಾರ ನೀಡಿದ್ದರು: ಯದುವೀರ್

ಮೈಸೂರು, ಏ.30(ಬಿಎಲ್‌ಯು)– ನನ್ನ ದತ್ತು ಸ್ವೀಕಾರದ ಸಮಯದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಶ್ರೀನಿವಾಸ ಪ್ರಸಾದ್ ನನಗೆ ಸಹಕಾರ ನೀಡಿದ್ದರು ಎಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದಾಗ ನನಗೆ ಪ್ರೋತ್ಸಾಹ ನೀಡಿದ್ದರು. ಮೈಸೂರು ಮಾತ್ರವಲ್ಲದೆ ಚಾಮರಾಜನಗರ ಜಿಲ್ಲೆಯಲ್ಲಿ ಕೂಡ ಶ್ರೀನಿವಾಸ ಪ್ರಸಾದ್ ಪ್ರಭಾವಿ ನಾಯಕರಾಗಿದ್ದರು. ಈ ಭಾಗದಲ್ಲಿ ಅಪಾರ ಅಭಿಮಾನಿ ಬಳಗ ಹೊಂದಿದ್ದರು. ಶ್ರೀನಿವಾಸ ಪ್ರಸಾದ್ ಅಗಲಿಕೆಯಿಂದ ಸಮಾಜಕ್ಕೆ ಅಪಾರ ನಷ್ಟವಾಗಿದೆ ಎಂದು ಹೇಳಿದರು. ಶ್ರೀನಿವಾಸಪ್ರಸಾದ್ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಯದುವೀರ್ ಹೇಳಿದರು.



ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಟ್ರಸ್ಟ್ ಆವರಣದಲ್ಲಿ ಮಂಗಳವಾರ ಶ್ರೀನಿವಾಸ ಪ್ರಸಾದ್ ಅವರ ಅಂತ್ಯ ಸಂಸ್ಕಾರ ಮುನ್ನ ಬೌದ್ಧ ಧರ್ಮದ ವಿಧಿ ವಿಧಾನದಂತೆ ಪ್ರಾರ್ಥನೆ ಸಲ್ಲಿಸಲಾಯಿತು.

ಕಿರಿಯ ರಾಜಕಾರಣಿ ಬೆಳೆಸುವ ಆದರ್ಶ ಗುಣ ಹೊಂದಿದ್ದರು: ಡಾ.ಸಿ.ಎನ್.ಮಂಜುನಾಥ್

ಮೈಸೂರು, ಏ.30(ಬಿಎಲ್‌ಯು)– ಸಂಸದ ಶ್ರೀನಿವಾಸ ಪ್ರಸಾದ್ ಕಿರಿಯ ರಾಜಕಾರಣಿಗಳನ್ನು ಬೆಳೆಸುವ ವಿಶಿಷ್ಟ ಗುಣ ಹೊಂದಿದ್ದರು ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಶ್ರೀನಿವಾಸ ಪ್ರಸಾದ್ ಹಾಗೂ ನನ್ನ ಪರಿಚಯ 20 ವರ್ಷಕ್ಕೂ ಮೀರಿದೆ. ಪ್ರಸ್ತುತ ರಾಜಕಾರಣಕ್ಕೆ ಶ್ರೀನಿವಾಸ ಪ್ರಸಾದ್ ಆದರ್ಶರಾಗಿದ್ದರು. ವ್ಯಕ್ತಿಗಳು ಬಂದು ಹೋಗುತ್ತಾರೆ, ಆದರೆ ವ್ಯಕ್ತಿತ್ವ ಮಾತ್ರ ಮರೆಯಾಗದೆ ಹಾಗೆ ಗಟ್ಟಿಯಾಗಿ ಉಳಿಯುತ್ತದೆ. ಅದಕ್ಕೆ ಶ್ರೀನಿವಾಸ ಪ್ರಸಾದ್ ಸ್ಪಷ್ಟ ನಿದರ್ಶನ ಎಂದರು.

ಶ್ರೀನಿವಾಸ ಪ್ರಸಾದ್ ಎಂದೂ ಕೆಟ್ಟ ಪದ ಬಳಸುತ್ತಿರಲಿಲ್ಲ. ನಾಲಿಗೆ ಮೇಲೆ ನಿಯಂತ್ರಣ ಹೊಂದಿದ್ದ ಶ್ರೀನಿವಾಸ ಪ್ರಸಾದ್ ಯಾರ ಬಗ್ಗೆಯೂ ಟೀಕೆ ಮಾಡುತ್ತಿರಲಿಲ್ಲ ಎಂದರು. ಇಂತಹ ಅಪ ರೂಪದ ರಾಜಕಾರಣಿ ಅಗಲಿರುವುದು ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೇಳುವೆ ಎಂದು ಡಾ. ಮಂಜುನಾಥ್ ಹೇಳಿದರು.



ಮೈಸೂರಿನ ಅಶೋಕಪುರಂನ ಎನ್ ಟಿಎಂ ಸರ್ಕಾರಿ ಶಾಲೆಯಲ್ಲಿ ಮಂಗಳವಾರ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್, ಶ್ರೀನಿವಾಸ ಪ್ರಸಾದ್ ಅವರ ಅಂತಿಮ ದರ್ಶನ ಪಡೆದರು.

ಟಿಕೆಟ್ ಕಾಯ್ದಿರಿಸಿದ ರೈಲು ಬೋಗಿಗಳಲ್ಲಿ ಪ್ರಯಾಣಿಕರ ದಟ್ಟಣೆ: ವಿಶೇಷ ತಂಡ ರಚನೆ

ಬೆಂಗಳೂರು: ರೈಲುಗಳಲ್ಲಿ ಕಾಯ್ದಿರಿಸಿದ ಬೋಗಿಗಳಲ್ಲಿ ಪ್ರಯಾ ಣಿಕರ ದಟ್ಟಣೆ ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರೈಲ್ವೆ ಇಲಾಖೆ ಮತ್ತು ಬೆಂಗಳೂರು ನಗರದ ಪ್ರಮುಖ ನಿಲ್ದಾಣಗಳಲ್ಲಿನ ವಾಸ್ತವ ಪರಿಸ್ಥಿತಿಗಳ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಇತ್ತೀಚೆಗೆ ವ್ಯಕ್ತವಾಗಿರುವ ಪ್ರತಿಕ್ರಿಯೆಗಳಿಂದ ಎಚ್ಚೆತ್ತು ವಿಶೇಷ ತಂಡ ರಚಿಸಿದೆ.

ದೂರದ ಊರುಗಳಿಗೆ ಪ್ರಯಾಣ ಮಾಡುವ ರೈಲುಗಳಲ್ಲಿ ಭಾರೀ ಜನ ಸಂದಣಿಯನ್ನು ನಿರ್ವಹಿ ಸಲು ವಿಶೇಷ ತಂಡಗಳನ್ನು ರಚಿಸಲು ರೈಲ್ವೆ ಇಲಾಖೆಯನ್ನು ಈ ಘಟನೆ ಪ್ರೇರೇಪಿಸಿದೆ. ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಸರ್.ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಯಶವಂತಪುರ ಮತ್ತು ಯಲಹಂಕ ರೈಲು ನಿಲ್ದಾಣಗಳಲ್ಲಿ ಇಂತಹ ತಂಡಗಳು ಕಾರ್ಯನಿರ್ವಹಿಸುತ್ತಿವೆ. ಸಾಮಾನ್ಯವಾಗಿ ಬೇಸಿಗೆ ರಜೆಯಲ್ಲಿ ರೈಲುಗಳಲ್ಲಿ ಪ್ರಯಾಣಿಕರ ಒತ್ತಡ ಹೆಚ್ಚಾಗಿರುತ್ತದೆ. ಈ ವರ್ಷ ಸಾರ್ವತ್ರಿಕ ಚುನಾವಣೆ ಮತ್ತು ಬೆಂಗಳೂರಿನಲ್ಲಿ ವಲಸಿಗರು ಮತದಾನ ಮಾಡಲು ಹೆಚ್ಚಾಗಿ ಪ್ರಯಾಣಿಸುತ್ತಿರುವುದರಿಂದ ಹಾಗೂ ಅನೇಕ ಭಾಗಗಳಲ್ಲಿ ಮದುವೆ ಮತ್ತು ಇನ್ನಿತರ ಶುಭ ಸಮಾರಂಭಗಳು ಇರುವುದರಿಂದ ಜನಸಂದಣಿ ಹೆಚ್ಚಾಗಿದೆ.



ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್ TNIE ಜೊತೆ ಮಾತನಾಡಿ, ರೈಲುಗಳಲ್ಲಿ ಟಿಕೆಟ್ ಕಾಯ್ದಿರಿಸಿದ ಬೋಗಿಗಳಲ್ಲಿ ಒತ್ತಡ ನಿಭಾಯಿಸಲು ವಾಣಿಜ್ಯ ವಿಭಾಗದ ಸಿಬ್ಬಂದಿ ಮತ್ತು ರೈಲ್ವೆ ರಕ್ಷಣಾ ಪಡೆ ಪೊಲೀಸರನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಿದ್ದೇವೆ. ಪ್ರಯಾಣಿಕರ ಒತ್ತಡದಲ್ಲಿ ದೂರದ ಊರುಗಳಿಗೆ ಸಂಚರಿಸುವ ರೈಲುಗಳನ್ನು ಗುರುತಿಸಲಾಗಿದೆ. ಕಾಯ್ದಿರಿಸಿದ ಕೋಚ್‌ಗಳಲ್ಲಿ ಕಾಯ್ದಿರಿಸದ ಪ್ರಯಾಣಿಕರನ್ನು ಗುರುತಿಸಿ ಸಾಮಾನ್ಯ ಬೋಗಿಗಳಿಗೆ ಕಳುಹಿಸುವುದನ್ನು ನೋಡಿಕೊಳ್ಳುವುದು ತಂಡಗಳ ಪ್ರಮುಖ ಕೆಲಸವಾಗಿದೆ ಎಂದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ, ಆಡಳಿತ ವಿಭಾಗದ ಪರೀಕ್ಷಿತ್ ಮೋಹನ್ ಪುರಿಯಾ, ಟಿಕೆಟ್ ತಪಾಸಣೆಯ ಸಮಯದಲ್ಲಿ ತಂಡದ ಸದಸ್ಯರು ಟಿಟಿಇ ಜೊತೆಯಲ್ಲಿ, ಕಾಯ್ದಿರಿಸಿದ ಬೋಗಿಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸುವ ಪ್ರಯಾಣಿಕರನ್ನು ಗುರುತಿಸಬಹುದು. ಬಿಹಾರ ಮತ್ತು ಉತ್ತರಪ್ರದೇಶ ಕಡೆಗೆ ಹೋಗುವ ರೈಲುಗಳು ಸಾಮಾನ್ಯವಾಗಿ ಪ್ರಯಾಣಿಕರಿಂದ ತುಂಬಿತುಳುಕು ತ್ತವೆ. ಕಾಯ್ದಿರಿಸದ ಕೋಚ್ ಗರಿಷ್ಠ 200 ಪ್ರಯಾಣಿಕರನ್ನು ಹಿಡಿದಿಟ್ಟುಕೊಳ್ಳಬಹುದು. ಆದರೆ ನಾವು ಹೆಚ್ಚಿನ ಸಂಖ್ಯೆಯ ತೆರೆದ ಟಿಕೆಟ್‌ಗಳನ್ನು ಖರೀದಿಸುತ್ತೇವೆ ಎಂದರು.

ಖಾಸಗಿ ವಾಹಿನಿ ವಿರುದ್ಧ ಎಸ್‌ಪಿಗೆ ಮನವಿ ಸಲ್ಲಿಕೆ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಮಡಿಕೇರಿ ಟೂ ವ್ಹೀಲರ್ಸ್ ಮೆಕ್ಯಾನಿಕ್‌ಗಳು ಮನವಿ ಸಲ್ಲಿಸಿದರು.

ಮಡಿಕೇರಿ, ಏ.30– ರಿಯಾಲಿಟಿ ಶೋ ಒಂದರಲ್ಲಿ ಮೆಕ್ಯಾನಿಕ್‌ಗಳ ಕುರಿತು ಅವಹೇಳನ ಮಾಡಿರುವ ಆರೋಪದಡಿ ಖಾಸಗಿ ದೃಶ್ಯವಾಹಿನಿ, ಕಾರ್ಯಕ್ರಮದ ಆಯೋಜಕರು, ತೀರ್ಪುಗಾರರು ಹಾಗೂ ನಿರೂಪಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮಡಿಕೇರಿ ಟೂ ವ್ಹೀಲರ್ಸ್ ಮೆಕ್ಯಾನಿಕ್‌ಗಳು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಮನವಿ ಸಲ್ಲಿಸಿದರು.

ಖಾಸಗಿ ದೃಶ್ಯ ವಾಹಿನಿಯೊಂದರಲ್ಲಿ ಪ್ರಸಾರವಾದ ರಿಯಾಲಿಟಿ ಶೋನಲ್ಲಿ ಮೆಕ್ಯಾನಿಕ್‌ಗಳ ಕುರಿತು ಕೀಳು ಮಟ್ಟದ ಸಂಭಾಷಣೆ ಬಳಕೆ ಮಾಡಲಾಗಿದೆ. ಯುವ ಪ್ರತಿಭೆಯೊಬ್ಬಳ ಮೂಲಕ ಸಂಭಾಷಣೆ ಹೇಳಿಸಲಾಗಿದ್ದು, ಇದು ಇಡೀ ಮೆಕ್ಯಾನಿಕ್ ವೃತ್ತಿಯ ಸಮುದಾಯಕ್ಕೆ ನೋವನ್ನುಂಟು ಮಾಡಿದೆ. 'ಮೆಕ್ಯಾನಿಕ್‌ಗಳನ್ನು ಪ್ರೇಮಿಸಿ ವಿವಾಹವಾದರೆ ಜೀವನದುದ್ದಕ್ಕೂ ಗ್ರೀಸ್ ತಿನ್ನಬೇಕಾಗುತ್ತದೆ' ಎಂದು ಸಂಭಾಷಣೆ ಹೇಳುವ ಮೂಲಕ ಮೆಕ್ಯಾನಿಕ್‌ಗಳನ್ನು ಕೀಳಾಗಿ ಕಾಣಲಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಅವಹೇಳನಕಾರಿ ಸಂಭಾಷಣೆಗೆ ಕಾರ್ಯಕ್ರಮದ ನಿರೂಪಕರು ಹಾಗೂ ತೀರ್ಪುಗಾರರು ಚಪ್ಪಾಳೆ ತಟ್ಟಿ ಹುರಿದುಂಬಿಸಿ ಪ್ರಚೋದನೆ ನೀಡಿದ್ದಾರೆ ಎಂದು ಮನವಿಯಲ್ಲಿ ಆರೋಪಿಸಿದರು. ಇದೇ ವೇಳೆ ಮೆಕ್ಯಾನಿಕ್‌ಗಳಾದ ಹೆಚ್.ಎಸ್.ಮಣಿ ದೇವರಾಜ್, ಬಿ.ಯು.ಅನಂತ್, ಎಸ್.ಬಿ.ಕಿರಣ್, ಚಂದ್ರು, ಬಿ.ಎಸ್.ಗಣೇಶ್ ಹಾಗೂ ಪಿ.ಎಂ.ಉಮ್ಮರ್ ಉಪಸ್ಥಿತರಿದ್ದರು.

ಮಹಿಳಾ ಮತದಾರರೇ ನಿರ್ಣಾಯಕ

● ಕೊಡಗು ಜಿಲ್ಲೆಯಲ್ಲಿ ಕುತೂಹಲಕಾರಿ ಮತದಾನ ● ಅಭ್ಯರ್ಥಿಯ ಗೆಲುವಿನ ನಿರ್ಧಾರದ ನಿರ್ಣಯ



ಮಡಿಕೇರಿ, ಏ.30–ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಹಕ್ಕು ಚಲಾಯಿಸುವ ಮೂಲಕ ಗೆಲುವಿನ ಅಭ್ಯರ್ಥಿಯನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದ್ದಾರೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಮತದಾನವನ್ನು ಅವಲೋಕಿಸಿದಾಗ ಮಹಿಳಾ ಮತದಾರರೆ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿರುವುದು ಕುತೂಹಲಕಾರಿಯಾಗಿದೆ. ಮಡಿಕೇರಿ ಕ್ಷೇತ್ರದಲ್ಲಿ ಒಟ್ಟು 2,38,733 ಮತದಾರರಿದ್ದು, ಇದರಲ್ಲಿ 1,16,144 ಪುರುಷ ಮತದಾರರಲ್ಲಿ 88,196 ಮಂದಿ ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ. 1,22,581 ಮಹಿಳಾ ಮತದಾರರ ಪೈಕಿ 91,841 ಮಂದಿ ಮತದಾನ ಮಾಡಿದ್ದಾರೆ.

ವಿರಾಜಪೇಟೆ ಕ್ಷೇತ್ರದಲ್ಲಿ ಒಟ್ಟು 2,32,033 ಮತದಾರರಲ್ಲಿ 1,14,425 ಪುರುಷ ಮತದಾರರಿದ್ದು, ಇವರಲ್ಲಿ 84,733 ಮಂದಿ ಮಾತ್ರ ಮತದಾನ ಮಾಡಿದ್ದಾರೆ. ಒಟ್ಟು 1,17,601 ಮಹಿಳಾ ಮತದಾರರಲ್ಲಿ 86,698 ಮಂದಿ ಹಕ್ಕನ್ನು ಚಲಾಯಿಸಿದ್ದಾರೆ. ಹೀಗೆ ಎರಡು ಕ್ಷೇತ್ರಗಳ ಮತ ಚಲಾವಣೆಯಲ್ಲಿ ಮಹಿಳೆಯರೆ ಮುಂದಿದ್ದು, ಅವರೇ ವಿಜೇತ ಅಭ್ಯರ್ಥಿಯನ್ನು ನಿರ್ಧರಿಸುವಲ್ಲಿ ನಿರ್ಣಾಯಕವಾಗಲಿದ್ದಾರೆ.

ಕ್ಷೇತ್ರದಲ್ಲಿ ಕುತೂಹಲಕಾರಿ ಮತ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ 8 ವಿಧಾನ ಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ಇದರಲ್ಲಿ ಪುರುಷರು ಮತ್ತು ಮಹಿಳೆಯರ ಮತದಾನ ಕುತೂಹಲಕಾರಿಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ 80,424 ಪುರುಷರು, 78,860 ಮಹಿಳೆಯರು ಮತದಾನ ಮಾಡಿದ್ದರೆ, ಹುಣಸೂರಿನಲ್ಲಿ 97,086 ಪುರುಷರು, 95,827 ಮಹಿಳೆಯರು, ಚಾಮುಂಡೇಶ್ವರಿಯಲ್ಲಿ 1,27,725 ಪುರುಷರು, 1,28,255 ಮಹಿಳೆಯರು, ಕೃಷ್ಣರಾಜದಲ್ಲಿ 77,630 ಪುರುಷರು, 79,549 ಮಹಿಳೆಯರು, ಚಾಮರಾಜದಲ್ಲಿ 72,558 ಪುರುಷರು, 79,330 ಮಹಿಳೆಯರು ಹಾಗೂ ನರಸಿಂಹರಾಜ ಕ್ಷೇತ್ರದಲ್ಲಿ 99,258 ಪುರುಷರು, 1,04,568 ಮಹಿಳೆಯರು ಹಕ್ಕು ಚಲಾಯಿಸಿದ್ದಾರೆ. ಪಿರಿಯಾಪಟ್ಟಣ ಮತ್ತು ಹುಣಸೂರು ಕ್ಷೇತ್ರಗಳಲ್ಲಿ ಮಾತ್ರ ಪುರುಷರು ಮಹಿಳೆಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮತಚಲಾಯಿಸಿದ್ದಾರೆ. ಉಳಿದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳಾ ಮತದಾರರ ಸಂಖ್ಯೆ ಹೆಚ್ಚಿರುವುದು ವಿಶೇಷವಾಗಿದೆ.

ಮತಗಟ್ಟೆಯಿಂದ ದೂರ ಉಳಿದವರು: ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ 58,696 ಮಂದಿ ಮತ ಚಲಾಯಿಸದೇ ದೂರ ಉಳಿದಿದ್ದು, ವಿರಾಜಪೇಟೆ ಕ್ಷೇತ್ರದಲ್ಲಿ ಇದರ ಪ್ರಮಾಣ 60,602 ಆಗಿದೆ. ಒಟ್ಟಾಗಿ ಕೊಡಗಿನಲ್ಲಿ 1,19,298 ಮಂದಿ ಮತಗಟ್ಟೆಯ ಕಡೆಗೆ ಮುಖವನ್ನೇ ಮಾಡಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸರಿ ಸುಮಾರು ಇಷ್ಟೇ ಪ್ರಮಾಣದ ಮತದಾರರು ಚುನಾವಣೆಯಿಂದ ದೂರ ಉಳಿದಿರುವುದು ಚುನಾವಣಾ ಆಯೋಗದ ಪ್ರಯತ್ನಗಳಿಗೆ ತಣ್ಣೀರು ಎರಚಿದ್ದಾರೆ.

ಏತಕ್ಕೆ ಮತ ಚಲಾಯಿಸಿಲ್ಲ

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಲಕ್ಷಕ್ಕೂ ಹೆಚ್ಚಿನ ಮತದಾರರು ಚುನಾವಣೆಯಿಂದ ದೂರ ಉಳಿದಿದ್ದಾರೆ. ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿದರೆ, ಒಟ್ಟು ರಾಜಕೀಯ ವ್ಯವಸ್ಥೆಯ ಬಗ್ಗೆ ತಿರಸ್ಕಾರ ಭಾವನೆ, ಯಾರು ಗೆದ್ದರು ತಮ್ಮ ಸ್ಥಿತಿ-ಗತಿಗಳಲ್ಲಿ ಬದಲಾವಣೆ ಆಗಲಾರದು ಎನ್ನುವ ಋಣಾತ್ಮಕ ಚಿಂತನೆಯಿಂದ ಒಂದು ವರ್ಗ ಮತದಾನದಿಂದ ದೂರ ಉಳಿದಿರಬಹುದು ಎಂದು ಅಂದಾಜಿಸಲಾಗಿದೆ.

ಸಮಾಜದ 'ಕೆನೆ ಪದರ'ದಲ್ಲಿರುವ ಒಂದು ಸಣ್ಣ ವರ್ಗ ಯಾವುದೇ ಚುನಾವಣೆಯಲ್ಲೂ ಮತಗಟ್ಟೆಗಳ ಕಡೆ ಮುಖ ಹಾಕುವುದಿಲ್ಲ. ಈ ಎರಡು ವರ್ಗದವರ ಮನ ಪರಿವರ್ತನೆ ಆದಾಗ ಮಾತ್ರವೇ ಬಹುತೇಕ ಮತಗಳು ಚಲಾವಣೆಯಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಉಳಿದಂತೆ ಜಿಲ್ಲೆಯಲ್ಲಿ ಮತದಾನದ ಹಕ್ಕನ್ನು ಹೊಂದಿದ್ದರು ಹೊರ ಜಿಲ್ಲೆ, ರಾಜ್ಯಗಳಲ್ಲಿ ಕೆಲಸದ ಮೇಲೆ ನೆಲೆಸಿರುವವರಲ್ಲಿ ಕೆಲವರು ಮತದಾನದ ಮಹತ್ವ ಅರಿತು ಮತದಾನ ಮಾಡುತ್ತಾರಾದರು, ಬಹುಪಾಲು ಮಂದಿ ಮತದಾನಕ್ಕೆಂದು ಬಾರದೆ ಮತದಾನ ಹೆಚ್ಚಳ ಮಾಡಿಯೇ ತೀರಬೇಕೆನ್ನುವ ಅಧಿಕಾರಿಗಳ ಪ್ರಯತ್ನಕ್ಕೆ ತಣ್ಣೀರು ಎರೆಚುತ್ತಾರೆ ಎನ್ನುವುದು ಕೂಡ ವಾಸ್ತವ ಸತ್ಯವಾಗಿದೆ.

ಸ್ವೀಪ್ ಪ್ರಯತ್ನ ಸಾಗಬೇಕಿದೆ: ಇವೆಲ್ಲದರ ನಡುವೆ ಅಸಹಾಯಕವಾದ, ಮತದಾನದ ಇಚ್ಛೆ ಇದ್ದರು ಮಾಡಲಾಗದ ಒಂದು ವರ್ಗವಿದೆ. 70 ವರ್ಷ ಮೇಲ್ಪಟ್ಟ, ಅನಾರೋಗ್ಯದಿಂದ ಬಳಲುತ್ತಿರುವ, ಅವರ ನೆರವಿಗೆ ಯಾರು ಇಲ್ಲದಿರುವ ಮತದಾರರು ಜಿಲ್ಲೆಯಲ್ಲಿದ್ದಾರೆ. ಇವರಿಗೆ ಏಕಾಂಗಿಯಾಗಿ ಮತಗಟ್ಟೆಗೆ ಬರಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆ ಮನೆಯಲ್ಲೆ ಮತದಾನ ಎನ್ನುವ ವಿಶೇಷ ಪ್ರಯತ್ನವನ್ನು ಸ್ವೀಪ್ ಸಮಿತಿ ಮಾಡಿದ್ದು, ಇದರಲ್ಲಿ 85 ವರ್ಷ ಮೇಲ್ಪಟ್ಟವರಿಗೆ ಇದರ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಈ ವಯೋಮಿತಿಯ ನಿರ್ಬಂಧವನ್ನು ಸಡಿಲಿಸಿ, ನಿಜಕ್ಕೂ ಮತಗಟ್ಟೆಗೆ ಬರಲು ಸಾಧ್ಯವಾಗದಿರುವವರನ್ನು ಗುರುತಿಸಿ ಮತದಾನಕ್ಕೆ ಅವಕಾಶ ಕಲ್ಪಿಸುವ ಪ್ರಯತ್ನ ಮುಂದಿನ ದಿನಗಳಲ್ಲಿ ನಡೆಸುವುದು ಒಳಿತು ಎನ್ನುವ ಅಭಿಪ್ರಾಯ ಕೇಳಿ ಬರುತ್ತಿದೆ.

ಎಲೈಟ್ ಸ್ಕ್ವಾಡ್-2, ಪ್ಯಾಂಥರ್ಸ್ ತಂಡಕ್ಕೆ ಮೊದಲ ಸ್ಥಾನ



ಕೊಡಗು ಗೌಡ ಪ್ರೀಮಿಯರ್ ಲೀಗ್ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್‌ಶಿಪ್ ಪಡೆದ ಎಲೈಟ್ ಕ್ರಿಕೆಟ್ ಕ್ಲಬ್ ಸ್ಕ್ವಾಡ್-2 ತಂಡ.



ಕೊಡಗು ಗೌಡ ಮಹಿಳಾ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೊದಲ ಸ್ಥಾನ ಪಡೆದ ಪ್ಯಾಂಥರ್ಸ್ ಕ್ಲಬ್ ಕೊಡಗು ತಂಡ.

ಮಡಿಕೇರಿ, ಏ.30–ಕೊಡಗು ಗೌಡ ಯುವ ವೇದಿಕೆ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಗೌಡ ಪ್ರೀಮಿಯರ್ ಲೀಗ್ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಎಲೈಟ್ ಕ್ರಿಕೆಟ್ ಕ್ಲಬ್ ಸ್ಕ್ವಾಡ್-2 ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ಎಲೈಟ್ ಕ್ಲಬ್ ತಂಡ ರನ್ನರ್ಸ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ಮಹಿಳಾ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ಯಾಂಥರ್ಸ್ ಕ್ಲಬ್ ಕೊಡಗು ತಂಡ ಮೊದಲ ಸ್ಥಾನ ಪಡೆದರೆ, ಬ್ಲ್ಯಾಕ್ ಪ್ಯಾಂಥರ್ಸ್ ತಂಡ ದ್ವಿತೀಯ ಸ್ಥಾನಗಳಿಸಿತು.

ಪುರುಷರ ವಿಭಾಗದ 2ನೇ ಎಲಿಮಿನೇಟರ್ ಪಂದ್ಯದಲ್ಲಿ ಎಲೈಟ್ ಕ್ರಿಕೆಟ್ ಕ್ಲಬ್ ತಂಡ ಕೂರ್ಗ್ ವಾರಿಯರ್ಸ್ ತಂಡದ ವಿರುದ್ಧ 7 ವಿಕೆಟ್‌ಗಳ ಜಯ ಸಾಧಿಸಿ ಫೈನಲ್ ಪ್ರವೇಶಿಸಿತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ನಿಗದಿತ 10 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 116 ರನ್ ಗಳಿಸಿತು. ತಂಡದ ಅನಿಲ್ ಕುಡೆಕಲ್ 2 ಎಸೆತಗಳಲ್ಲಿ 4 ಬೌಂಡರಿ, 6 ಸಿಕ್ಸರ್ ಒಳಗೊಂಡು 66 ರನ್ ಗಳಿಸಿದರು.

ಎಲೈಟ್ ಪರವಾಗಿ ಕಾರ್ತಿಕ್, ಶರತ್ ಚೊಕ್ಕಾಡಿ, ದಿನೇಂದ್ರ ಅಣ್ಣಚಿರ, ನಿತಿನ್ ಕುಮಾರ್ ತಲಾ ಒಂದು ವಿಕೆಟ್ ಪಡೆದರು. ಗುರಿ ಬೆನ್ನಟ್ಟಿದ ಎಲೈಟ್ ತಂಡ 9 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ತಂಡದ ಪರ ಲೋಕೇಶ್ 28 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಒಳಗೊಂಡು ಅಜೇಯ 67 ರನ್ ಬಾರಿಸಿದರು. ಕೂರ್ಗ್ ವಾರಿಯರ್ಸ್ ಪರ ಅನಿಲ್ ಕುಡೆಕಲ್ ಕುಜಲ್ ಕಾರ್ಯಪ್ಪ ತಲಾ ಒಂದು ವಿಕೆಟ್ ಪಡೆದರು.

ಪುರುಷರ ಫೈನಲ್ ಪಂದ್ಯ ಎಲೈಟ್ ಕ್ರಿಕೆಟ್ ಕ್ಲಬ್ ಹಾಗೂ ಎಲೈಟ್ ಕ್ರಿಕೆಟ್ ಸ್ಕ್ವಾಡ್-2 ನಡುವೆ ನಡೆಯಿತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಎಲೈಟ್ ಸ್ಕ್ವಾಡ್-2 ನಿಗದಿತ 10 ಓವರ್‌ಗಳಲ್ಲಿ 83 ರನ್‌ಗಳಿಸಿತು. ತಂಡದ ಪರ ಮನ್ವಿತ್ ಕಲ್ಲುಗದ್ದೆ 8 ಎಸೆತಗಳಲ್ಲಿ 19 ರನ್ ಗಳಿಸಿದರು. ಆಕರ್ಷ್ 18 ರನ್ ಬಾರಿಸಿದರು. ಎಲೈಟ್ ಪರ ಧಿನೇಂದ್ರ ಅಣ್ಣಚಿರ ಮತ್ತು ಕಾರ್ತಿಕ್ ತಲಾ ಎರಡು ವಿಕೆಟ್ ಪಡೆದರು. ಲೋಕೇಶ್, ನಿತಿನ್, ಶರತ್, ಚೊಕ್ಕಾಡಿ ತಲಾ ಒಂದು ವಿಕೆಟ್ ಪಡೆದರು. ಇದರ ಗುರಿ ಬೆನ್ನಟ್ಟಿದ ಎಲೈಟ್ 10 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 73 ರನ್‌ಗಳಿಸಿ ಸೋಲನುಭವಿಸಿತು.

ತಂಡದ ಪರ ಹೊಸೂರ್ ಹಿತಕೃತ್ ಅಶೋಕ್ 25 ರನ್ ಬಾರಿಸಿದರು. ಸ್ಕ್ವಾಡ್-2 ಪರ ಮನ್ವಿತ್ ಕಲ್ಲುಗದ್ದೆ, ನಯನ್ ಚೆರಿಯಮನೆ ತಲಾ 2 ವಿಕೆಟ್, ಎಡಿಕೇರಿ ನೂತನ್ 1 ವಿಕೆಟ್ ಪಡೆದರು. ಮಹಿಳೆಯರ ಮೊದಲ ಪಂದ್ಯದಲ್ಲಿ ದಿ ಎಲೈಟ್ಸ್ ವಿಮೆನ್ ಬೆಂಗಳೂರು ತಂಡಕ್ಕೆ ಮರಗೋಡು ರಿಕ್ರಿಯೇಷನ್ ಕ್ಲಬ್ ವಿರುದ್ಧ 9 ವಿಕೆಟ್‌ಗಳ ಜಯ ಲಭಿಸಿತು.

ಗೂಡ್ಲೂರು ಕಾವೇರಿ ಟೀಂಗೆ ಚೇರಳ ಗೌಡ ಸಮಾಜದ ವಿರುದ್ಧ 8 ವಿಕೆಟ್‌ಗಳ ಗೆಲುವು ಸಿಕ್ಕಿತು. ಬ್ಲಾಸಂಬೆಲ್ಸ್ ತಂಡಕ್ಕೆ ವೈಡ್ಸ್ ಮಾಸ್ಟರ್ಸ್ ವಿರುದ್ಧ 2 ರನ್‌ಗಳ ಗೆಲುವು ಲಭಿಸಿತು. ಬ್ಲ್ಯಾಕ್ ಪ್ಯಾಂಥರ್ಸ್ ತಂಡಕ್ಕೆ ಚೇರಳ ಗೌಡ ಸಮಾಜದ ವಿರುದ್ಧ 8 ವಿಕೆಟ್‌ಗಳ ಜಯ ಸಿಕ್ಕಿತು. ಮೊದಲ ಸೆಮಿ ಫೈನಲ್ಸ್‌ನಲ್ಲಿ ಬ್ಲ್ಯಾಕ್ ಪ್ಯಾಂಥರ್ಸ್ ತಂಡ ದಿ ಎಲೈಟ್ಸ್ ವಿಮೆನ್ ಬೆಂಗಳೂರು ತಂಡದ ವಿರುದ್ಧ 8 ವಿಕೆಟ್‌ಗಳ ಗೆಲುವು ದಾಖಲಿಸಿತು.

ಕೊಡಗಿನ ಬೊಳ್ಳಂಡ ಉನ್ನತಿಗೆ ಕಂಚು



ಮಡಿಕೇರಿ, ಏ.30–ದುಬೈನಲ್ಲಿ ನಡೆದ ಅಂಡರ್-20 ಜೂನಿಯರ್ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಕೊಡಗಿನ ಯುವತಿ ಬೊಳ್ಳಂಡ ಉನ್ನತಿ ಅಯ್ಯಪ್ಪ 100 ಮೀ. ಹರ್ಡಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

13.66 ಸೆಕೆಂಡ್‌ನಲ್ಲಿ ಉನ್ನತಿ ಗುರಿ ಸಾಧಿಸಿ ಪದಕ ಪಡೆದುಕೊಂಡಿದ್ದಾರೆ. ಉನ್ನತಿ ಅವರ ತಂದೆ ರಾಷ್ಟ್ರೀಯ ಅಥ್ಲೆಟಿಕ್ ಕೋಚ್ ಬೊಳ್ಳಂಡ ಅಯ್ಯಪ್ಪ ಅವರು 1994ರ ಜೂನಿಯರ್ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ 4x400 ಮೀ. ರಿಲೇಯಲ್ಲಿ ಬೆಳ್ಳಿ ಪದಕ ಪಡೆದಿದ್ದರು. ತಾಯಿ ಮಾಜಿ ಒಲಂಪಿಯನ್ ಪ್ರಮೀಳಾ ಅಯ್ಯಪ್ಪ 1996ರಲ್ಲಿ ಹೆಪ್ಟಥ್ಲಾನ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ಗಳಿಸಿ ಸಾಧನೆ ಮಾಡಿದ್ದರು. ಇದೀಗ ಪುತ್ರಿ ಉನ್ನತಿ ಅಯ್ಯಪ್ಪ ಕೂಡ ಇದೇ ಜೂನಿಯರ್ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ 100 ಮೀ. ಹರ್ಡಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ. ಪೋಷಕರೊಂದಿಗೆ ಇದೀಗ ಪುತ್ರಿಯೂ ಭಾರತಕ್ಕೆ ಪದಕ ತಂದ ಕೀರ್ತಿ ಈ ಕುಟುಂಬದ್ದಾಗಿದೆ.

ವಿವಿಧ ಸಂಘ-ಸಂಸ್ಥೆಗಳಿಂದ ಶ್ರದ್ಧಾಂಜಲಿ



ಚಾಮರಾಜೇಶ್ವರ ಉದ್ಯಾನದ ಮುಂಭಾಗದಲ್ಲಿ ವಿ.ಶ್ರೀನಿವಾಸಪ್ರಸಾದ್‌ಗೆ ವಿವಿಧ ಸಂಘ-ಸಂಸ್ಥೆ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಾಮರಾಜನಗರ, ಏ.30–ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ವಿವಿಧ ಸಂಘ-ಸಂಸ್ಥೆಗಳಿಂದ ನಗರದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗ, ರಂಗವಾಹಿನಿ, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟ ಹಾಗೂ ದಲಿತ ಸಂಘರ್ಷ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿ, ಸರಳ, ಸಜ್ಜನಿಕೆ ರಾಜಕಾರಣಿಯಾಗಿದ್ದ ವಿ.ಶ್ರೀನಿವಾಸಪ್ರಸಾದ್ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಹೆಚ್ಚು ಕಾಲ ರಾಜಕೀಯ ಸೇವೆ ಸಲ್ಲಿಸಿದ್ದಾರೆ. ಜಿಲ್ಲೆಗೆ ಅವರದೆ ಆದ ಕೊಡುಗೆಗಳನ್ನು ನೀಡಿದ್ದಾರೆ. ತಮ್ಮನ್ನು ಸಂಸದರಾಗಿ ಆಯ್ಕೆ ಮಾಡಿದ ಮತದಾರರು ಹೆಮ್ಮೆ ಪಡುವ ರೀತಿ ಕೆಲಸ ಮಾಡಿದ್ದೇನೆ ಎಂದು ಅವರು ನಿರಂತರವಾಗಿ ಹೇಳುತ್ತಿದ್ದರು ಎಂದು ಸ್ಮರಿಸಿದರು.

ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ದಸಂಸ ಜಿಲ್ಲಾ ಸಂಯೋಜಕ ಕೆ.ಎಂ.ನಾಗರಾಜು, ಮುಖಂಡರಾದ ಆಲೂರು ಮಲ್ಲು, ಬಸವನಪುರ ರಾಜಶೇಖರ್, ಶ್ರೀನಿವಾಸ ಗೌಡ, ಲಕ್ಷ್ಮೀನರಸಿಂಹ ಮಾತನಾಡಿದರು.

ದಲಿತ ಹಿರಿಯ ಮುಖಂಡರಾದ ಎಂ.ಎಸ್. ಮಾದಯ್ಯ, ನಗರಸಭಾ ಸದಸ್ಯೆ ಕುಮುದಾ ಕೇಶವಮೂರ್ತಿ, ಡಿಎಸ್‌ಎಸ್ ಸಂಚಾಲಕ ಸಿ.ಎಂ.ಶಿವಣ್ಣ, ಆಲೂರು ನಾಗೇಂದ್ರ, ನಾಗಬಸವಣ್ಣ, ರಾಮಸಮುದ್ರ ಬಂಗಾರು, ನಾಗರಾಜು, ಪಣ್ಯದಹುಂಡಿ ರಾಜು, ಗಣೇಶ್ ಪ್ರಸಾದ್, ಶಿವರಾಜ್, ರಮೇಶ್, ಮಹದೇವಸ್ವಾಮಿ, ಸಿದ್ದಶೆಟ್ಟಿ ಸೇರಿದಂತೆ ಇನ್ನಿತರರು ಹಾಜರಿದ್ದರು.

34 ದಿನದಲ್ಲಿ 3.04 ಕೋಟಿ ರೂ. ಸಂಗ್ರಹ

ಮಹದೇಶ್ವರಬೆಟ್ಟದ ಹುಂಡಿ ಎಣಿಕೆಯಲ್ಲಿ ಸಿಕ್ಕ 115 ಗ್ರಾಂ ಚಿನ್ನ



ಹನೂರು, ಏ.30– ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆಮಹದೇಶ್ವರಬೆಟ್ಟದಲ್ಲಿ ಸೋಮವಾರ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, 34 ದಿನಗಳ ಅವಧಿಯಲ್ಲಿ 3.04 ಕೋಟಿ ರೂ. ಸಂಗ್ರಹವಾಗಿದೆ.

ಮಹದೇಶ್ವರಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸೋಮವಾರ ಬೆಳಗ್ಗೆ 8 ಗಂಟೆಗೆ ಸಾಲೂರು ಬೃಹನ್ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ದೇವಸ್ಥಾನದ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ಪ್ರಾರಂಭವಾಗಿ, ತಡ ರಾತ್ರಿ 11.30ಕ್ಕೆ ಮುಕ್ತಾಯವಾಯಿತು.

ಯುಗಾದಿ ಜಾತ್ರಾ ಮಹೋತ್ಸವ, ಸರ್ಕಾರಿ ರಜಾ ದಿನಗಳು ಹಾಗೂ ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಉಚಿತ ಪ್ರಯಾಣದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಮಹದೇಶ್ವರಬೆಟ್ಟಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು, ಹರಕೆಯ ರೂಪದಲ್ಲಿ ಹಣ, ಚಿನ್ನ ಹಾಗೂ ಬೆಳ್ಳಿ ಪದಾರ್ಥಗಳನ್ನು ಹುಂಡಿಗೆ ಹಾಕಿದ್ದರು.

ಹುಂಡಿಗಳ ಎಣಿಕೆಯಲ್ಲಿ ಈ ಬಾರಿ 3,04,57,246 ರೂ., 115 ಗ್ರಾಂ ಚಿನ್ನ ಮತ್ತು 2 ಕೆಜಿ 964 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ ಅಲ್ಲದೇ, ಸಿಂಗಾಪುರ, ಅಮೆರಿಕದ 27 ವಿದೇಶಿ ನೋಟುಗಳು ಹಾಗೂ ಚಲಾವಣೆಯಲ್ಲಿಲ್ಲದ 2000 ರೂ. ಮುಖಬೆಲೆಯ 22 ನೋಟುಗಳು ಎಣಿಕೆಯಲ್ಲಿ ಸಿಕ್ಕಿವೆ. ಇ-ಹುಂಡಿಯಲ್ಲಿ 3,53,441 ರೂ. ಕೂಡ ಸಂಗ್ರಹವಾಗಿದೆ ಎಂದು ಶ್ರೀ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಮಾಹಿತಿ ನೀಡಿದರು.



ಗುಂಡ್ಲುಪೇಟೆಯ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಕಚೇರಿಯಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೇದಿಕೆಯ ಜಿಲ್ಲಾ ಅಧ್ಯಕ್ಷ ಆರ್.ಮೋಹನ್, ಮಂಜು ಗೌಡ, ಸೌಭಾಗ್ಯ, ಸುರೇಶ್, ಮಹೇಂದ್ರ, ಗಂಗಾಧರಪ್ಪ, ರಿಯಾಜ್ ಪಾಷಾ ಇದ್ದರು.

ಗಡಿ ಜಿಲ್ಲೆಯಲ್ಲಿ ದಿನೇ ದಿನೇ ಉಷ್ಣಾಂಶ ಏರಿಕೆ

● 36-39 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು ● ಮಕ್ಕಳಲ್ಲಿ ವಿಷಮಶೀತ ಜ್ವರ ಹೆಚ್ಚು



ಚಾ.ನಗರದಲ್ಲಿ ಬಿಸಿಲಿನ ತೀವ್ರತೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜನರು ಎಳನೀರು ಸೇವನೆಗೆ ಮುಂದಾಗಿರುವುದು.

-: ವೈದ್ಯರ ಪ್ರಮುಖ ಸಲಹೆ :-

- ದ್ರವ ರೂಪದ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು.
- ಕಾಯಿಸಿ ಆರಿಸಿದ ಶುದ್ಧ ನೀರನ್ನು ಕುಡಿಯಬೇಕು.
- ಆಹಾರ ಸೇವಿಸುವ ಮೊದಲು ಕೈಗಳನ್ನು ತೊಳೆಯಬೇಕು.
- ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು.
- ಹತ್ತಿ ಬಟ್ಟೆಯನ್ನು ಧರಿಸಬೇಕು.

ಚಾಮರಾಜನಗರ, ಏ.30–ಜಿಲ್ಲೆಯಲ್ಲಿ ಈ ಬಾರಿ ಹಿಂದೆಂದೂ ಕಂಡಿರದಂತಹ ಭೀಕರ ಬರಗಾಲ ಆವರಿಸಿದ್ದು, ಗಡಿ ಜಿಲ್ಲೆಯಲ್ಲಿ ಪ್ರಸಕ್ತ 36 ರಿಂದ 39 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿದೆ.

ಹೆಚ್ಚಿದ ತಾಪಮಾನದಿಂದಾಗಿ ಮಕ್ಕಳು ಸೇರಿ ವಿವಿಧ ವಯೋಮಾನದವರಿಗೆ ಜ್ವರ ಸಂಬಂಧಿತ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು, ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಬಿಸಿಲ ಧಗೆ ದಿನದಿಂದ ದಿನಕ್ಕೆ ಏರತೊಡಗಿದೆ. ಗರಿಷ್ಠ ತಾಪಮಾನ 38 ಡಿಗ್ರಿ ಸೆಲ್ಸಿಯಸ್ ತಲುಪಿದರೆ, ಕನಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಏಪ್ರಿಲ್‌ನ ಬಹುತೇಕ ದಿನಗಳು ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು ಎಂದು ವರದಿಯಾಗಿದೆ. ನಿರೀಕ್ಷಿತ ಮಳೆ ಬಾರದಿದ್ದರಿಂದ ದಿನದ ಬಹುತೇಕ ಅವಧಿ ಉಷ್ಣ ವಾತಾವರಣದಿಂದ ಕೂಡಿದ್ದು, ಜಿಲ್ಲೆಯ ಕೆಲವೆಡೆ ಬಿಸಿ ಗಾಳಿ ಕಾಣಿಸಿಕೊಳ್ಳುತ್ತಿದೆ.

ಬೇಸಿಗೆ ರಜೆ ಕಾರಣ ಹೊರಾಂಗಣ ಆಟಗಳಿಗೆ ಮೊರೆಹೋಗುತ್ತಿರುವ ಮಕ್ಕಳಲ್ಲಿ ಜ್ವರ ಸಂಬಂಧಿತ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದೆ. ಕಲುಷಿತ ನೀರು, ಅಸುರಕ್ಷಿತ ಆಹಾರ ಸೇವನೆಯಿಂದ ಉದರಬೇನೆ, ವಿಷಮಶೀತ ಜ್ವರ ಕಾಣಿಸಿಕೊಳ್ಳುತ್ತಿದೆ.

ಆಸ್ಪತ್ರೆ ಭೇಟಿ ಹೆಚ್ಚಳ: ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಸಿಮ್ಸ್ ಸೇರಿದಂತೆ ಖಾಸಗಿ ಆಸ್ಪತ್ರೆ, ತಾಲೂಕು ಕೇಂದ್ರಗಳ ಸಾರ್ವಜನಿಕ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರ ರೋಗಿಗಳಲ್ಲಿ ಶೇ.10ರಷ್ಟು ಹಾಗೂ ಅದಕ್ಕಿಂತ ಅಧಿಕ ರೋಗಿಗಳು ಜ್ವರ, ಅತಿಸಾರ, ಬೆವರು ಗುಳ್ಳೆಯಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ. ಬೇಸಿಗೆಯಲ್ಲಿ ನೀರಿನಿಂದಲೇ ಹೆಚ್ಚು ರೋಗಗಳು ಹರಡುತ್ತವೆ. ಹೀಗಾಗಿ ಶುದ್ಧ ನೀರು ಕುಡಿಯುವುದು ಬಹಳ ಮುಖ್ಯ. ರಸ್ತೆಬದಿಯಲ್ಲಿ ತೆರೆದಿಟ್ಟ ಆಹಾರ ಪದಾರ್ಥ ಹಾಗೂ ಕತ್ತರಿಸಿದ ಹಣ್ಣುಗಳನ್ನು ತಿನ್ನುವುದರಿಂದ ರೋಗಾಣುಗಳು ಹರಡಿ, ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳುತ್ತದೆ ಎಂದು ವೈದ್ಯರೊಬ್ಬರು ಎಚ್ಚರಿಸಿದ್ದಾರೆ. ಈ ಅವಧಿಯಲ್ಲಿ ನೀರು ಹಾಗೂ ಆಹಾರ ಸೇವಿಸುವಾಗ ಜಾಗ್ರತೆ ವಹಿಸಬೇಕು. ಕಲುಷಿತ ನೀರು ಹಾಗೂ ಆಹಾರ ಸೇವನೆಯಿಂದ ಮಕ್ಕಳಲ್ಲಿ ವಾಂತಿ, ಭೇದಿ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ವೈದ್ಯರಾದ ರೋಹಿತ್ ಮಾಹಿತಿ ನೀಡಿದ್ದಾರೆ.

ತಂಪು ಪಾನೀಯ ಮೊರೆ: ನಗರದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತೀವ್ರತೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜನರು ಎಳನೀರು, ತಂಪುಪಾನೀಯಗಳಿಗೆ ಹೆಚ್ಚು ಅವಲಂಬಿತರಾಗಿದ್ದಾರೆ.

ನಗರದ ಬಿ.ರಾಚಯ್ಯ ಜೋಡಿರಸ್ತೆ, ನ್ಯಾಯಾಲಯದ ರಸ್ತೆ, ಸಾರ್ವಜನಿಕ ಆಸ್ಪತ್ರೆ ಮುಂಭಾಗ, ಬಸ್ ನಿಲ್ದಾಣ, ಸಂತೇಮರಹಳ್ಳಿ ವೃತ್ತ, ಗುಂಡ್ಲುಪೇಟೆ ವೃತ್ತ ಸೇರಿದಂತೆ ಜನಸಂದಣಿ ಪ್ರದೇಶಗಳಲ್ಲಿ ಎಳನೀರು, ಕರ್ಬೂಜಾ, ಕಲ್ಲಂಗಡಿ ಹಣ್ಣಿನ ಮಾರಾಟ ಜೋರಾಗಿದೆ. ಅಲ್ಲದೇ ಹಣ್ಣಿನ ಜ್ಯೂಸ್‌ಗಳಿಗೂ ಹೆಚ್ಚಿನ ಬೇಡಿಕೆ ಉಂಟಾಗಿದೆ.

ಕಾಲು ಜಾರಿ ಬಿದ್ದು ಯುವಕ ಸಾವು



ಕೊಳ್ಳೇಗಾಲ, ಏ.30–ಬಹಿರ್ದೆಸೆಗೆ ತೆರಳಿದ್ದ ಯುವಕ ಕಾಲು ಜಾರಿ ನೀರಿಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲೂಕಿನ ಚಿಲಕವಾಡಿ ಬಳಿಯ ಕಲ್ಲಿನ ಕ್ವಾರೆಯಲ್ಲಿ ಸೋಮವಾರ ನಡೆದಿದೆ. ತಾಲೂಕಿನ ಕುಂತೂರು ಗ್ರಾಮದ ಕೆಂಪರಾಜು ಎಂಬುವರ ಪುತ್ರ ಪ್ರಸನ್ನ ಕುಮಾರ್(22) ಮೃತ ಯುವಕ. ಈತ ಕುಂತೂರು ಸಕ್ಕರೆ ಕಾರ್ಖಾನೆಯಲ್ಲಿ ಕೂಲಿ ಮಾಡುತ್ತಿದ್ದು, ಸೋಮವಾರ ಸಂಜೆ ಚಿಲಕವಾಡಿ ಶಂಭುಲಿಂಗೇಶ್ವರ ಬೆಟ್ಟದ ಎದುರಿನ ಕಂಬಡಕಟ್ಟೆ ಕಲ್ಲಿನ ಕ್ವಾರೆಯ ಬಳಿ ಬಹಿರ್ದೆಸೆಗೆ ತೆರಳಿದಾಗ ಕಾಲು ಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದಾನೆ.

ಈತ ರಾತ್ರಿಯಾದರೂ ಮನೆಗೆ ಬಾರದಿರುವುದರಿಂದ ಕುಟುಂಬಸ್ಥರು ಹುಡುಕಾಟ ನಡೆಸಿದಾಗ ಕ್ವಾರೆ ನೀರಿನಲ್ಲಿ ಶವ ಪತ್ತೆಯಾಗಿದೆ. ಮಾಂಬಳ್ಳಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವೈಭವದ ವೈದ್ಯನಾಥೇಶ್ವರ ವಾರ್ಷಿಕೋತ್ಸವ



ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದಲ್ಲಿ ವೈದ್ಯನಾಥೇಶ್ವರ ಉತ್ಸವ ಮೂರ್ತಿಯನ್ನು ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ಯಳಂದೂರು, ಏ.30–ತಾಲೂಕಿನ ಮಾಂಬಳ್ಳಿ ಗ್ರಾಮದ ಇತಿಹಾಸ ಪ್ರಸಿದ್ಧ ಮನೋನ್ಮಣಿ ಸಹಿತ ಶ್ರೀ ವೈದ್ಯನಾಥೇಶ್ವರ ವಾರ್ಷಿಕೋತ್ಸವ ವೈಭವದಿಂದ ನಡೆಯಿತು.

ವೈದ್ಯನಾಥೇಶ್ವರ ಸೇವಾ ಸಮಿತಿ ವತಿಯಿಂದ ಪ್ರಧಾನ ಗಣಪತಿ ಪೂಜೆ, ಶುದ್ಧ ಪುಣ್ಯ, ಕಳಸ ಪೂಜೆ, ಗಣಪತಿ ಹೋಮ, ಪಾರ್ವತಿ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆದವು. ದೇಗುಲವನ್ನು ತಳಿರು-ತೋರಣ, ಹಸಿರು ಚಪ್ಪರ, ವಿವಿಧ ಹೂವು ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಗಾರುಡಿ ಗೊಂಬೆ, ಚಂಡೆಮದ್ದಾಳೆ, ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ, ದೇವರಪಟದ ಕುಣಿತ, ನಂದಿಕಂಬ, ನಾದಸ್ವರ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಮಾಂಬಳ್ಳಿ ಹಾಗೂ ಅಗರ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವರ ಉತ್ಸವ ಮೂರ್ತಿಯನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಯಿತು. ರಸ್ತೆಬದಿಯಲ್ಲಿ ದೇವರಿಗೆ ಭಕ್ತರು ಪೂಜೆ ಸಲ್ಲಿಸಿದರು. ಇದೇ ವೇಳೆ ಸೇವಾ ಸಮಿತಿಯ ಧರ್ಮದರ್ಶಿ ಎಂ.ಎಸ್.ಶಿವಪ್ಪ ಮತ್ತಿತರರು ಇದ್ದರು.

ಒಂದನೇ ಪುಟದಿಂದ

ಮಾಜಿ ಸಿಎಂ ಕುಮಾರಸ್ವಾಮಿ ಆಗ್ರಹ

ಸಿಡಿ ಮತ್ತು ಪೆನ್‌ಡ್ರೈವ್ ಬಿಡುಗಡೆ ಸಂದರ್ಭದಲ್ಲಿ ಸಂತ್ರಸ್ತ ಹೆಣ್ಣು ಮಕ್ಕಳ ಮುಖವನ್ನಾದರೂ ಮುಚ್ಚಬೇಕಿತ್ತು, ಇದನ್ನೂ ಮಾಡದೆ ಸಾರ್ವಜನಿಕವಾಗಿ ಆ ಹೆಣ್ಣು ಮಕ್ಕಳ ಭವಿಷ್ಯ ಹಾಳು ಮಾಡಿದ್ದಾರೆ. ಇದರಿಂದ ಯಾವುದೇ ಹೆಣ್ಣು ಮಕ್ಕಳು ಆತ್ಮಹತ್ಯೆಗೆ ಶರಣಾದರೆ ಸರ್ಕಾರವೇ ನೇರ ಹೊಣೆ ಹೊರಬೇಕಾಗುತ್ತದೆ ಎಂದರು.

ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ, ರಾಜ್ಯದಲ್ಲಿ ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಹಿನ್ನಡೆ ತರುವ ಹಾಗೂ ಪ್ರಧಾನಿ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಲು, ಕಾಂಗ್ರೆಸ್ ಮತ್ತು ಡಿ.ಕೆ.ಶಿವಕುಮಾರ್ ಮಾಡಿರುವ ಕುತಂತ್ರ ಎಂದು ಕಿಡಿಕಾರಿದರು.

ಹಾಸನದ ವಕೀಲ ದೇವರಾಜೇಗೌಡ ಅವರು, ಪ್ರಜ್ವಲ್ ವಿರುದ್ಧ ಕಾನೂನು ಸಮರ ನಡೆಸುತ್ತಿದ್ದಾರೆ. ಅವರು ನಮ್ಮ ಪರ ಇಲ್ಲ. ಇಂತಹವರೇ, ಶಿವಕುಮಾರ್ ಸಹೋದರರಿಗೆ ಈ ಪೆನ್‌ಡ್ರೈವ್ ಎರಡು ತಿಂಗಳ ಹಿಂದೆಯೇ ತಲುಪಿತ್ತು ಎಂದು ಹೇಳಿಕೆ ನೀಡಿದ್ದಾರೆ. ರೇವಣ್ಣ ಅವರ ಕಾರು ಚಾಲಕ ಕಾರ್ತಿಕ್ ಎರಡು ತಿಂಗಳ ಹಿಂದೆ ನನ್ನ ಬಳಿ ಬಂದು ಪೆನ್‌ಡ್ರೈವ್‌ನಲ್ಲಿರುವ ನೀಲಿ ಚಿತ್ರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡದಂತೆ ಪ್ರಜ್ವಲ್ ತಡೆಯಾಜ್ಞೆ ತಂದಿದ್ದಾನೆ. ಇದನ್ನು ತೆರವುಗೊಳಿಸುವಂತೆ ಕೋರಿದ್ದರು. ನಾನು ಪೆನ್‌ಡ್ರೈವ್ ತೆಗೆದುಕೊಂಡು ಎಲ್ಲವನ್ನೂ ವೀಕ್ಷಿಸಿದಾಗ ಭಯಾನಕ ದೃಶ್ಯಗಳಿದ್ದವು. ಇದನ್ನು ಯಾರ್‍ಯಾರಿಗೆ ಕೊಟ್ಟಿದ್ದೀಯಾ ಎಂದು ಕೇಳಿದ್ದೆ, ಆಗ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಸೇರಿ ಕೆಲವು ಕಾಂಗ್ರೆಸ್ಸಿಗರಿಗೆ ನೀಡಿದ್ದೇನೆ ಎಂದು ಕಾರ್ತಿಕ್ ಹೇಳಿದ್ದ ಎಂದು ರಾಜೇಗೌಡರೇ ಬಹಿರಂಗಪಡಿಸಿದ್ದಾರೆ.

ಅವರು ಹೇಳಿರುವಂತೆಯೇ ಈ ಪೆನ್‌ಡ್ರೈವ್‌ಗಳು ಮತ್ತು ಸಿಡಿಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ, ಈ ಮಹಾನ್ ನಾಯಕರು ಚುನಾವಣೆ ಸಂದರ್ಭದಲ್ಲಿ ಬಳಕೆ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ನಮ್ಮ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಹೊರಟಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ಎಸ್‌ಐಟಿ ತನಿಖೆಯಾಗಿ ಸತ್ಯಾಸತ್ಯತೆ ಹೊರಬರಲಿ, ಆದರೆ ಪೆನ್‌ಡ್ರೈವ್ ಮತ್ತು ಸಿಡಿಗಳನ್ನು ಸಾರ್ವಜನಿಕವಾಗಿ ಹಂಚುವ ಮೂಲಕ ಸಂತ್ರಸ್ತೆಯರ ಕುಟುಂಬವನ್ನು ಬೀದಿಗೆ ತಂದಿದ್ದಾರೆ. ಇದು ಸಹ ಒಂದು ದೊಡ್ಡ ಅಪರಾಧ. ಹೆಣ್ಣು ಮಕ್ಕಳಿಗೆ ಸರ್ಕಾರ ಗೌರವ ಕೊಡುವುದೇ ಆದರೆ, ಶಿವಕುಮಾರ್ ಅವರನ್ನು ವಜಾ ಮಾಡಿ, ಇದನ್ನು ಬಹಿರಂಗ ಪಡಿಸಿದ ಪ್ರಕರಣವನ್ನೂ ತನಿಖೆ ನಡೆಸಲಿ ಎಂದು ಒತ್ತಾಯಿಸಿದರು. ರೇವಣ್ಣ ಕಾರು ಚಾಲಕ ಕಾರ್ತಿಕ್, ಏತಕ್ಕೆ ಕೆಲಸ ಬಿಟ್ಟು ಹೋದ, ಅವನು ಏನು ಮಾಡಿದ್ದ ಎಂಬುದೂ ಬಹಿರಂಗಗೊಳ್ಳಬೇಕು. ಅದನ್ನೂ ತನಿಖಾ ವ್ಯಾಪ್ತಿಗೆ ತನ್ನಿ ಎಂದರು. ಹೆಣ್ಣು ಮಕ್ಕಳ ಮಾನ ಹೋಗಿದೆ ಎಂದು ನಮ್ಮ ಮನೆ ಮುಂದೆ ಧರಣಿ ಕೂರಬೇಡಿ. ನಿಮ್ಮ ಶಿವಕುಮಾರ್ ಮನೆ ಮುಂದೆ ಧರಣಿ ಮಾಡಿ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಕುಮಾರಸ್ವಾಮಿ ಸಲಹೆ ನೀಡಿದರು.

ಪ್ರಜ್ವಲ್ ರೇವಣ್ಣ ಜೆಡಿಎಸ್‌ನಿಂದ ಅಮಾನತು

ಮುಖಂಡತ್ವಕ್ಕೆ ಸಾಕಷ್ಟು ಧಕ್ಕೆ ಉಂಟಾಗಿದೆ. ರಾಜ್ಯದಲ್ಲಿ ಪ್ರಸ್ತುತ ಕಾಂಗ್ರೆಸ್ ಸರ್ಕಾರ, ಮಹಿಳೆಯರ ಮೇಲೆ ಎಸಗಿದೆ ಎಂದು ಹೇಳಲಾಗಿರುವ ಚಿತ್ರಗಳು ಮತ್ತು ವಿಡಿಯೋಗಳ ಬಗ್ಗೆ ತನಿಖೆ ನಡೆಸಲು ಒಂದು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದೆ.

ತನಿಖಾ ಸಂಸ್ಥೆ ಈಗಾಗಲೇ ತನ್ನ ಕಾರ್ಯವನ್ನು ಆರಂಭಿಸಿರುವುದರಿಂದ ತನಿಖೆಗೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಎದುರಾಗಬಾರದೆಂಬ ಉದ್ದೇಶದಿಂದ ಇಂತಹ ಕ್ರಮ ಕೈಗೊಂಡಿದ್ದೇವೆ. ಪಕ್ಷದ ಸಂವಿಧಾನ ಮತ್ತು ನಿಯಮಗಳ ಅಡಿಯಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾದ ಪ್ರಜ್ವಲ್ ರೇವಣ್ಣ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ. ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಅನುಮೋದನೆ ಪಡೆದು ಪಕ್ಷ ತಮ್ಮ ಸಂಸದನ ಮೇಲೆ ಕಠಿಣ ಕ್ರಮ ಕೈಗೊಂಡಿದೆ. ಪ್ರಜ್ವಲ್ ರೇವಣ್ಣ ಹಾಸನ ಲೋಕಸಭಾ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಮರು ಆಯ್ಕೆ ಬಯಸಿ ಚುನಾವಣಾ ಕಣದಲ್ಲಿದ್ದಾರೆ. ಈ ಕ್ಷೇತ್ರಕ್ಕೆ ಏಪ್ರಿಲ್ 26ರಂದು ಮತದಾನ ನಡೆದಿದ್ದು, ಮತದಾನಕ್ಕೂ 48 ಗಂಟೆಗಳ ಮುನ್ನ ಇಡೀ ಕ್ಷೇತ್ರದಲ್ಲಿ ಸಂಸದರ ವಿರುದ್ಧದ ಅಶ್ಲೀಲ ಪೆನ್‌ಡ್ರೈವ್ ಬಹಿರಂಗಗೊಂಡಿತ್ತು. ಪೆನ್‌ಡ್ರೈವ್ ಬಗ್ಗೆ ಕ್ಷೇತ್ರದಲ್ಲಷ್ಟೇ ಅಲ್ಲದೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಚರ್ಚೆ ನಡೆಯುತ್ತಿದ್ದಂತೆ ಮಹಿಳಾ ಆಯೋಗ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆದೇಶ ಮಾಡಿ ಪ್ರಕರಣದ ತನಿಖೆಗೆ ಎಸ್‌ಐಟಿ ನೇಮಕ ಮಾಡಿ ಆದೇಶ ಹೊರಡಿಸಿದ್ದರು.

ಚಿನ್ನಾಭರಣ, ನಗದು ಕಳವು

ಸ್ಕೂಟರ್ ನೋಂದಣಿಯಾಗಿರುವ ಹೆಸರಿನ ವ್ಯಕ್ತಿಯನ್ನು ಸಂಪರ್ಕಿಸಿದಾಗ ತಮ್ಮ ಸ್ಕೂಟರ್ ಅನ್ನು ಏ.2 ರಂದು ಬೆಂಗಳೂರಿನ ಸ್ನೇಹಿತ ತೆಗೆದುಕೊಂಡು ಹೋಗಿ ಮಧ್ಯಾಹ್ನ ತಂದು ಕೊಟ್ಟ ಎಂದು ತಿಳಿಸಿದ್ದಾರೆ. ಆತ ನೀಡಿದ ಮೊಬೈಲ್ ಸಂಖ್ಯೆಯ ಟವರ್ ಲೊಕೇಷನ್ ಜಾಡು ಹಿಡಿದ ಪೊಲೀಸರು, ತುಮಕೂರು ಮತ್ತಿತರೆಡೆ ಶೋಧ ನಡೆಸಿದರಾದರೂ ಖದೀಮ ಪತ್ತೆಯಾಗಿರಲಿಲ್ಲ. ಪೊಲೀಸರು ತನ್ನ ಬೆನ್ನತ್ತಿದ್ದಾರೆ ಎಂಬುದು ಖಚಿತವಾಗುತ್ತಿದ್ದಂತೆ ಆರೋಪಿ ಸೈಯದ್ ಭಾನುವಾರ ಬೆಳಗ್ಗೆ ಬೆಂಗಳೂರಿನ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ 350 ಗ್ರಾಂ ಚಿನ್ನಾಭರಣ ಸಮೇತ ಶರಣಾಗಿದ್ದಾನೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ವಿಚಾರಣೆ ನಡೆಸಿ ಆತನನ್ನು ಸೋಮವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೆಚ್ಚಿನ ತನಿಖೆಗಾಗಿ ಸೈಯದ್‌ನನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಉಳಿಕೆ ಚಿನ್ನಾಭರಣ ಮತ್ತು 2 ಲಕ್ಷ ರೂ. ಹಣ ಇನ್ನಷ್ಟೇ ವಶಪಡಿಸಿಕೊಳ್ಳಬೇಕಿದೆ. ಇತ್ತ, ಮೈಸೂರಿನ ವಿವಿ ಪುರಂ ಠಾಣೆ ಪೊಲೀಸರೂ, ಆರೋಪಿಯನ್ನು ತಮ್ಮ ವಶಕ್ಕೆ ಪಡೆದು ವಿಚಾರಣೆ ನಡೆಸಲು ನಿರ್ಧರಿಸಿದ್ದಾರೆ. ಮನೆಗಳಿಗೆ ಹೋಗಿ ಬಾಗಿಲು ತಟ್ಟುವುದು, ಬಾಗಿಲು ತೆರೆದರೆ ಯಾವುದಾದರೊಂದು ನೆಪ ಹೇಳಿ ಹಿಂದಿರುಗುವುದು. ಒಂದು ವೇಳೆ ಬಾಗಿಲು ತೆರೆಯದಿದ್ದರೆ ಅಂತಹ ಮನೆಯ ಬಾಗಿಲು ಮುರಿದು ಚಿನ್ನಾಭರಣ ಮತ್ತು ನಗದು ಕಳವು ಮಾಡುವುದು ಸೈಯದ್ ಚಾಳಿ ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆಯೂ ಹಲವು ಮನೆಗಳಿಗೆ ಕನ್ನ ಹಾಕಿ ಸಿಕ್ಕಿಬಿದ್ದು, ಜೈಲು ಸೇರಿ ಜಾಮೀನಿನ ಮೇಲೆ ಹೊರ ಬಂದು ಮತ್ತೆ ಅದೇ ಕೃತ್ಯವೆಸಗುತ್ತಿದ್ದ ಎಂಬುದು ಪೊಲೀಸರಿಗೆ ತಿಳಿದುಬಂದಿದೆ.

ಸುಲಿಗೆಕೋರರ ಸೆರೆ

ಪಶ್ಚಿಮ ಭಾಗದ ರೈಲು ದ್ವಾರಕ್ಕೆ (ಸಿಎಫ್‌ಟಿಆರ್‌ಐ ಕಡೆ) ಬರುವಂತೆ ಹೇಳಿದ್ದರಿಂದ ತನ್ನ ಹುಂಡೈ ಐ–10 ಕಾರಿನಲ್ಲಿ (ಕೆಎ 51–ಪಿ 6075) ದಾಸಪ್ಪ ಸರ್ಕಲ್ ಮೂಲಕ ಕೆಆರ್‌ಎಸ್ ರಸ್ತೆಯಲ್ಲಿ ಬಂದು, ಸಿಎಫ್‌ಟಿಆರ್‌ಐ ಗೇಟ್ ಎದುರು ಬಲಕ್ಕೆ ತಿರುಗುವ ಬದಲು, ಮುಂದೆ ಸಾಗಿದ್ದು, ಕೊನೆಗೆ ಅರಿವಿಗೆ ಬಂದು ಮುಂದೆ ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ಯು–ಟರ್ನ್ ತೆಗೆದುಕೊಳ್ಳುತ್ತಿದ್ದ. ಅದೇ ವೇಳೆ ದಾಸಪ್ಪ ಸರ್ಕಲ್ ಕಡೆಯಿಂದ ಸುಜುಕಿ ಆಕ್ಸೆಸ್ (ಕೆಎ 55–ಕೆ 8324) ಸ್ಕೂಟರ್‌ನಲ್ಲಿ ಬಂದ ಸುಮಾರು 20ರಿಂದ 23 ವರ್ಷದ ಮೂವರು ಯುವಕರು, ಕಾರನ್ನು ತಡೆದು ನಿಲ್ಲಿಸಿ, ಅತೀ ವೇಗ ಮತ್ತು ರ್‍ಯಾಶ್ ಅಂಡ್ ನೆಗ್ಲಿಜೆನ್ಸ್ ಚಾಲನೆ ಮಾಡಿ ತಮ್ಮ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದೀಯೆ ಎಂದು ಚಿರಾಗ್ ಜೈನ್‌ಗೆ ಧಮಕಿ ಹಾಕಿದ್ದಾರೆ.

ಆತನ ಕಾರಿನಿಂದ ಕೆಳಗಿಳಿಸಿ, ಮುಂದಿನ ಎಡಭಾಗದಲ್ಲಿ ಕೂರಿಸಿಕೊಂಡು ಓರ್ವ ಕಾರು ಚಾಲನೆ ಮಾಡಿಕೊಂಡು ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಹುಣಸೂರು ರಸ್ತೆ ಮಾರ್ಗವಾಗಿ ವಿಜಯನಗರ 4ನೇ ಹಂತದ ಯಶಸ್ವಿ ಕಲ್ಯಾಣ ಮಂಟಪದ ಹಿಂಭಾಗ ಮುಕ್ತಿಧಾಮ ಬಳಿ ಕಾರು ತಂದು ನಿಲ್ಲಿಸಿದ್ದಾರೆ.

ಉಳಿದ ಇಬ್ಬರು ಸ್ಕೂಟರ್‌ನಲ್ಲಿ ಹಿಂಬಾಲಿಸಿ ಬಂದು, ಮೂವರೂ ಸೇರಿ ಬೆದರಿಸಿ ನನ್ನ ಮೈ ಮೇಲಿದ್ದ 30 ಗ್ರಾಂ ಮತ್ತು 8 ಗ್ರಾಂ ಚಿನ್ನದ ಸರ, 2000 ರೂ. ಹಣ ಕಿತ್ತುಕೊಂಡರಲ್ಲದೇ, ನನ್ನ ಬಳಿ ಇದ್ದ ಫೋನ್ ತೆಗೆದುಕೊಂಡು ಪಾಸ್‌ವರ್ಡ್ ಪಡೆದು ಫೋನ್‌ಪೇ ಮೂಲಕ 80 ಸಾವಿರ ರೂ. ಹಣವನ್ನು ಅವರ ಅಕೌಂಟ್‌ಗೆ ಟ್ರಾನ್ಸ್‌ಫರ್ ಮಾಡಿಕೊಂಡರು ಎಂದು ಚಿರಾಗ್ ಜೈನ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾನೆ. ನನ್ನ ಬಳಿ ಇನ್ನೇನೂ ಉಳಿದಿಲ್ಲ ಎಂದು ತಿಳಿದಾಗ ಮುಂಜಾನೆ ಸುಮಾರು 5.30 ಗಂಟೆಗೆ ಕಾರಿನ ಕೀ ಕೊಟ್ಟು ನನ್ನ ಮೊಬೈಲ್‌ನೊಂದಿಗೆ ಆ ಮೂವರೂ ಅಲ್ಲಿಂದ ಸ್ಕೂಟರ್‌ನಲ್ಲಿ ಪರಾರಿಯಾದರು ಎಂದು ಆತ ತಿಳಿಸಿದ್ದಾನೆ. ಕಡೆಗೆ ನಾನು ಅಲ್ಲಿಂದ ಹುಣಸೂರು ರಸ್ತೆಗೆ ಬಂದು ಹಿನಕಲ್ ಬಳಿ ಸಿಕ್ಕ ಜನರನ್ನು ಕೇಳಿಕೊಂಡು ಅವರ ಮೊಬೈಲ್‌ನಿಂದ ನಮ್ಮ ತಂದೆಗೆ ಫೋನ್ ಮಾಡಿ ವಿಷಯ ತಿಳಿಸಿದೆ ಎಂದು ಚಿರಾಗ್ ಪೊಲೀಸರಿಗೆ ತಿಳಿಸಿದ್ದಾನೆ.

ಅಷ್ಟರಲ್ಲಿ ಮಗ ರೈಲ್ವೇ ಸ್ಟೇಷನ್‌ಗೆ ಬಾರದೆ, ಫೋನ್ ಸಂಪರ್ಕಕ್ಕೂ ಸಿಗದ ಕಾರಣ ಗಾಬರಿಗೊಂಡ ತಂದೆ ರಮೇಶ್‌ಚಂದ್, ದೇವರಾಜ ಠಾಣೆಗೆ ತೆರಳಿ ವಿಷಯ ತಿಳಿಸಿದ್ದರು. ಕಡೆಗೆ ಕೃತ್ಯ ನಡೆದಿರುವುದು ವಿವಿ ಪುರಂ ಠಾಣಾ ಸರಹದ್ದು ಎಂಬುದು ತಿಳಿದ ಹಿನ್ನೆಲೆಯಲ್ಲಿ ಅವರು ಅಲ್ಲಿಗೆ ಹೋಗಿ ದೂರು ನೀಡಿದರು.

ಪ್ರಕರಣ ದಾಖಲಿಸಿಕೊಂಡ ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೆ.ಕೆ. ಮೋಹನ್, ಪ್ರಭುರಾಜ್ ಅವರೊಂದಿಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಇಂದು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹಣ, ಆಭರಣ ದೋಚಿದ ಯುವಕರು ಗೋವಾಗೆ ಪ್ರವಾಸ ಕೈಗೊಂಡಿದ್ದು, ಆಗಲೇ ಬಸ್ಸಿನಲ್ಲಿ ಹರಿಹರ ತಲುಪಿದ್ದರು. ಸಿಸಿ ಕ್ಯಾಮರಾ ಫುಟೇಜ್ ಸುಳಿವಿನ ಜಾಡು ಹಿಡಿದ ಪೊಲೀಸರು, ಆಭರಣ, ಭಾಗಶಃ ಹಣವನ್ನು ಆರೋಪಿಗಳಿಂದ ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಎಸ್. ಜಾಹ್ನವಿ ಅವರ ಮಾರ್ಗದರ್ಶನದಲ್ಲಿ ಎನ್‌ಆರ್ ಉಪ ವಿಭಾಗದ ಎಸಿಪಿ ಸುಧಾಕರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೆ.ಕೆ. ಮೋಹನ್, ಪ್ರಭುರಾಜ್, ಸಿಬ್ಬಂದಿಗಳಾದ ಪ್ರಸನ್ನ, ಈರಣ್ಣ, ಉಮೇಶ, ರವಿಗೌಡ, ಲಿಂಗರಾಜಪ್ಪ, ಅನಿಲ್, ರಮೇಶ್ ಹಾಗೂ ಇತರರು ಪಾಲ್ಗೊಂಡಿದ್ದರು.

ಬಿರು ಬಿಸಿಲು; ಮಾವು ಬೆಳೆಗಾರರಲ್ಲಿ ಆತಂಕ

ಮೈಸೂರು, ಏ.30(ಎಸ್‌ಬಿಡಿ)– ಬಿರು ಬಿಸಿಲಿನಿಂದ ಉಷ್ಣಾಂಶ ತೀವ್ರವಾಗುತ್ತಿದ್ದು ಜಿಲ್ಲೆಯ ಮಾವು ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿದೆ.

ಜಿಲ್ಲೆಯಲ್ಲಿ 3 ಸಾವಿರ ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಮಾವು ಬೆಳೆಯಿದೆ. ಮಳೆ ಕೊರತೆಯಿಂದ ಈ ಬಾರಿ ಇಳುವರಿ ಕುಂಠಿತವಾಗಿದ್ದು, ಮುಂದಿನ ಫಸಲಿಗೂ ಪೆಟ್ಟು ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಸದ್ಯ ಶೇ.60ಕ್ಕಿಂತ ಹೆಚ್ಚು ಮರಗಳು ಹೂವು ಬಿಟ್ಟಿದ್ದು, ಅಲ್ಲಲ್ಲಿ ಸಣ್ಣ ಗಾತ್ರದ ಕಾಯಿಗಳೂ ಕಾಣ ಸಿಗುತ್ತಿವೆ. ಮಳೆ ಕೈಕೊಟ್ಟಿದ್ದರೂ ರೈತನಿಗೆ ಉತ್ತಮ ಫಲ ನೀಡಲು ಮರಗಳು ಸಿದ್ಧವಾಗಿದ್ದರೂ ಅದಕ್ಕೆ ವಾತಾವರಣ ಪೂರಕವಾಗಿಲ್ಲ. ಈ ಬಾರಿ ದಾಖಲೆ ಉಷ್ಣಾಂಶವಿರುವುದರಿಂದ ಮಾವಿನ ತೋಟಗಳಲ್ಲಿ ಹೂವು ಉದುರಿ, ಇಳುವರಿ ಕಡಿಮೆಯಾಗುವ ಸಾಧ್ಯತೆ ಇದೆ.

ಮೈಸೂರು, ಹೆಚ್.ಡಿ.ಕೋಟೆ, ನಂಜನಗೂಡು, ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು ತಾಲೂಕಿನ ವಿವಿಧೆಡೆ ಮಾವು ಬೆಳೆಯಿದೆ. ಉಳಿದ ತಾಲೂಕುಗಳಲ್ಲೂ ಮಾವಿನ ತೋಟಗಳಿವೆ. ರಸಪುರಿ, ಸೇಂದೂರ, ಬಾದಾಮಿ, ತೋತಾಪುರಿ,



ಮಲಗೋಬಾ, ದಶೇರಿ, ಮಲ್ಲಿಕಾ, ಸಕ್ಕರಗುತ್ತಿ ಇನ್ನಿತರ ತಳಿಗಳನ್ನು ಬೆಳೆಯಲಾಗುತ್ತಿದೆ. ತೋಟಗಾರಿಕೆ ಇಲಾಖೆ ಅಧಿಕಾರಿಗಳ ಮಾಹಿತಿ ಅನ್ವಯ ಜಿಲ್ಲೆಯಲ್ಲಿ ಸುಮಾರು 3 ಸಾವಿರ ಹೆಕ್ಟೇರ್‌ನಲ್ಲಿ ಮಾವು ಇದೆ. ಈ ಬಾರಿ ಕೀಟಬಾಧೆ ಇಲ್ಲವಾದರೂ ಹೆಚ್ಚು ಉಷ್ಣಾಂಶದಿಂದ ಜೇನು ನೊಣಗಳ ಹಾರಾಟ ಕಡಿಮೆಯಾಗಿದೆ. ಇದರಿಂದ ಹೂಗಳ ನಡುವಿನ ಪರಾಗ ಸ್ಪರ್ಶ ಪ್ರಕ್ರಿಯೆ ವ್ಯತ್ಯಯವಾಗಿ ಉತ್ಪಾದನೆ ಪ್ರಮಾಣದ ಮೇಲೆ ಪರಿಣಾಮ ಬೀರಬಹುದು ಎನ್ನಲಾಗಿದೆ.

ಅಂತರ್ಜಲ ಆಸರೆ: ಬಹುತೇಕ ರೈತರು ತೋಟಗಾರಿಕೆಗೆ ಕೊಳವೆ ಬಾವಿ(ಬೋರ್‌ವೆಲ್) ನೆಚ್ಚಿಕೊಂಡಿದ್ದಾರೆ. ಮಳೆ ಕೊರತೆ, ಅಧಿಕ ಉಷ್ಣಾಂಶ, ವಿದ್ಯುತ್ ವ್ಯತ್ಯಯದಿಂದ ಬೆಳೆಗೆ ಸಮರ್ಪಕವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಅಂತರ್ಜಲ ಮಟ್ಟವೂ ಕುಸಿಯುತ್ತಿರುವುದರಿಂದ ರೈತರ ಆತಂಕ ಹೆಚ್ಚಾಗಿದೆ. ಬೋರ್‌ವೆಲ್‌ನಿಂದ ಹೆಚ್ಚು ನೀರು ಲಭ್ಯವಾಗುವ ಕಡೆ ವಾರಕ್ಕೊಮ್ಮೆ ಮರಗಳಿಗೆ ನೀರುಣಿಸುತ್ತಿದ್ದಾರೆ. ಕೆಲವೆಡೆ ಟ್ಯಾಂಕರ್ ಮೂಲಕ ನೀರು ಹಾಕಿ ಮರಗಳನ್ನು ರಕ್ಷಿಸಲು ಹರಸಾಹಸ ನಡೆಸಿದ್ದಾರೆ. ಆದರೆ ಎಷ್ಟೇ ಪ್ರಯತ್ನಪಟ್ಟರೂ ಭವಿಷ್ಯದ ಫಸಲಿಗೆ ಅಗತ್ಯವಾದಷ್ಟು ತೇವಾಂಶ ಕಲ್ಪಿಸಿಕೊಡುವುದು ಅಸಾಧ್ಯವಾಗಿದೆ. ಹಿಂದೆ ಅತಿವೃಷ್ಟಿಯಿಂದ ಬೆಳೆ ಕಳೆದುಕೊಂಡಿದ್ದ ರೈತರು ಈ ಬಾರಿ ಬರದ ಬೇಗೆಯಲ್ಲಿ ಬೇಯುತ್ತಿದ್ದಾರೆ. ಮಾವು ಬೆಳೆಗಾರರೊಂದಿಗೆ ವ್ಯಾಪಾರಿಗಳೂ ಭೀತಿಯಲ್ಲಿದ್ದಾರೆ.

ಆರ್ಥಿಕ ಮೂಲಕ್ಕೆ ಪೆಟ್ಟು: ಮಾವು ನೆಚ್ಚಿದ ರೈತರಿಗೆ ನಷ್ಟವಾಗಿರುವುದು ಕಡಿಮೆ. ಈ ಹಿನ್ನೆಲೆಯಲ್ಲಿ ಅನುಕೂಲತೆಗಳಿರುವ ರೈತರು ಮಾವಿನ ತೋಟ ಮಾಡಿದ್ದಾರೆ. ಇದು ಪ್ರಮುಖ ವಾಣಿಜ್ಯ ಬೆಳೆಯಾಗಿ ರೈತರಿಗೆ ಆರ್ಥಿಕ ಶಕ್ತಿ ತುಂಬಿದೆ. ಹಿಂದಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ 35–40 ಸಾವಿರ ಟನ್ ಮಾವಿನ ಹಣ್ಣು ಉತ್ಪಾದನೆಯಾಗಿತ್ತು. ಆದರೆ ಈ ಬಾರಿ 5–10 ಟನ್ ಕಡಿಮೆಯಾಗುವ ಸಾಧ್ಯತೆ ಇದೆ.

ಸದ್ಯಕ್ಕೆ ಗಂಭೀರ ಪರಿಣಾಮವಾಗಿಲ್ಲ....

ಈ ಬಾರಿಯೂ ಮಾವಿನ ಹೂವು ಚೆನ್ನಾಗಿ ಕಟ್ಟಿದೆ. ಹೆಚ್ಚು ಉಷ್ಣಾಂಶದಿಂದ ಸದ್ಯಕ್ಕೆ ಸಮಸ್ಯೆಯಾಗಿಲ್ಲ. ಆದರೆ ಹವಾಮಾನ ವೈಪರೀತ್ಯದಿಂದಾಗುವ ಪರಿಣಾಮವನ್ನು ಊಹಿಸುವುದು ಕಷ್ಟ. ಸದ್ಯದ ಪರಿಸ್ಥಿತಿಯಲ್ಲಿ ಫಸಲು ಮಾರುಕಟ್ಟೆಗೆ ಬರುವುದು ತಡವಾಗಬಹುದು. ಜಿಲ್ಲೆಯಲ್ಲಿ ಸುಮಾರು 3 ಸಾವಿರ ಹೆಕ್ಟೇರ್‌ನಲ್ಲಿ ಮಾವು ಬೆಳೆಯಿದ್ದು, ರಸಪುರಿ, ತೋತಾಪುರಿ, ಬಾದಾಮಿ, ಮಲ್ಲಿಕಾ, ದಶೇರಿ, ಮಲ್ಲಿಕಾ, ಮಲಗೋವಾ ಹಣ್ಣುಗಳು ಹಂತಹಂತವಾಗಿ ಮಾರುಕಟ್ಟೆಗೆ ಬರುತ್ತವೆ. ಜಿಲ್ಲೆಯ ಪ್ರಮುಖ ತೋಟಗಾರಿಕೆ ಬೆಳೆಗಳಾದ ಬಾಳೆ ಮತ್ತು ತೆಂಗು ಬೋರ್‌ವೆಲ್ ಆಧಾರಿತವಾಗಿರುವುದರಿಂದ ಸದ್ಯಕ್ಕೆ ಹೆಚ್ಚು ವ್ಯತ್ಯಯವಾಗಿಲ್ಲ.

-ಮಂಜುನಾಥ್, ಉಪನಿರ್ದೇಶಕರು ತೋಟಗಾರಿಕೆ ಇಲಾಖೆ

ಹಣಕಾಸಿನ ಹಿನ್ನೆಲೆ ಆಧರಿಸಿ ಕ್ಷೇತ್ರ ಆಯ್ಕೆ ಮಾಡಿಕೊಳ್ಳಿ

ವಿದ್ಯಾರ್ಥಿಗಳಿಗೆ ರಾಮಕೃಷ್ಣಾಶ್ರಮದ ಸ್ವಾಮಿ ಮಹಾಮೇದಾನಂದ ಮಹಾರಾಜ್ ಸಲಹೆ

ಮೈಸೂರು, ಏ.30(ಎಸ್‌ಪಿಎನ್)– ದೇಶದಲ್ಲಿ ತಂತ್ರಜ್ಞಾನ ಮುಂದುವರೆದಂತೆ ಅಧ್ಯಯನ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಯಾಗಿದೆ. ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ತಮಗಿಷ್ಟದ ವಿಷಯ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮೈಸೂರು ರಾಮಕೃಷ್ಣಾಶ್ರಮದ ಸ್ವಾಮಿ ಮಹಾಮೇದಾನಂದ ಮಹಾರಾಜ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರು ವಿಶ್ವೇಶ್ವರನಗರದ ಶ್ರೀ ವಾಸವಿ ಪ್ರಾರ್ಥನಾ ಮಂದಿರದಲ್ಲಿ ವಾಸವಿ ಸೇವಾ ಸಮಿತಿ ಹಾಗೂ ಶ್ರೀ ವಾಸವಿ ಟ್ರಸ್ಟ್ ಸಹಯೋಗದೊಂದಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ, ವೃತ್ತಿ ಜೀವನ ಆಯ್ದುಕೊಳ್ಳುವುದಕ್ಕಾಗಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇಪ್ಪತ್ತು ವರ್ಷಗಳ ಹಿಂದೆ ಪಿಯುಸಿ ನಂತರ ಮುಂದೇನು ಎಂದರೆ, ಬಿಎಸ್ಸಿ, ಬಿ.ಎ, ಡಿಪ್ಲೊಮಾ, ಇಂಜಿನಿಯರಿಂಗ್, ಎಂಬಿಬಿಎಸ್ ಎಂದು ಸುಲಭವಾಗಿ ಹೇಳುತ್ತಿದ್ದೆವು. ಇದೀಗ ವಿವಿಧ ಉದ್ಯಮಗಳಲ್ಲಿ ಹೊಸಹೊಸ ಆವಿಷ್ಕಾರ ಗಳಾಗುತ್ತಿರುವುದರಿಂದ ಅಧ್ಯಯನ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಯಾಗುತ್ತಿದೆ. ಇಂಜಿನಿಯರಿಂಗ್ ಆಯ್ಕೆ ಮಾಡಿಕೊಳ್ಳುತ್ತೇವೆ ಎಂದರೆ, ಅದರಲ್ಲಿ 30ರಿಂದ 40 ವಿಷಯಗಳಿವೆ. ವೈದ್ಯಕೀಯ ಕ್ಷೇತ್ರದಲ್ಲಿ ಅಧ್ಯಯನ ಮಾಡಿದರೆ, ಅದರಲ್ಲೂ ಸಣ್ಣಸಣ್ಣ ವಿಷಯಗಳಿಗೂ ಸ್ನಾತಕೋತ್ತರ ಪದವಿ ಅಧ್ಯಯನ ನಡೆಸಬೇಕಾಗುತ್ತದೆ ಎಂದು ತಿಳಿಸಿದರು.

ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನದ ಜ್ಞಾನ ವಿಸ್ತಾರವಾದಂತೆ, ಅಧ್ಯಯನ ಕ್ಷೇತ್ರದಲ್ಲೂ ವಿಷಯಗಳು ವಿಂಗಡಣೆಯಾಗುತ್ತಿವೆ. ಹಾಗಾಗಿ ಪಿಯುಸಿ ತೇರ್ಗಡೆಗೊಂಡ ವಿದ್ಯಾರ್ಥಿಗಳು, ತಮ್ಮ ಬೌದ್ಧಿಕ ಸಾಮರ್ಥ್ಯ ಹಾಗೂ ಕುಟುಂಬದ ಹಣಕಾಸಿನ ಇತಿಮಿತಿಯನ್ನು ಪರಿಗಣಿಸಿ ಅಧ್ಯಯನ ಕ್ಷೇತ್ರವನ್ನು ಆರಿಸಿಕೊಳ್ಳುವಂತೆ ಸಲಹೆ ನೀಡಿದರು.

ಸಾಮಾಜಿಕ ಮೌಲ್ಯ ಅಳವಡಿಸಿಕೊಳ್ಳಿ: ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಮುಂದಿನ ಶಿಕ್ಷಣ ಆಯ್ಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಹಾಗೂ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವ ಜೊತೆಜೊತೆಗೆ ಸಾಮಾಜಿಕ ಮೌಲ್ಯ, ಸಮಾಜ ಸ್ಥಿತಿ–ಗತಿಗಳ ಬಗ್ಗೆ ಅರಿತುಕೊಂಡು ಕರ್ತವ್ಯ ನಿರ್ವಹಿಸುವಂತೆ ಸಲಹೆ ನೀಡಿದರು. ಇದರ ಜೊತೆಗೆ ಯುವಕರು ವೃತ್ತಿ ಜೀವನ ಆರಂಭಿಸುವಾಗ ಯಾವುದೇ ರೀತಿಯ ಭ್ರಷ್ಟಾಚಾರ ಮಾಡುವುದಿಲ್ಲ ಎಂದು ಸಂಕಲ್ಪ ಮಾಡಿಕೊಂಡು ಕೆಲಸ ನಿರ್ವಹಿಸಬೇಕು ಎಂದು ಸಲಹೆ ನೀಡಿದರಲ್ಲದೆ, ಭ್ರಷ್ಟಾಚಾರ ಎಂದರೆ, ಬೇರೆಯವರಿಗೆ ಅನುಕೂಲ ಮಾಡಿಕೊಡಲು ಲಂಚ ಸ್ವೀಕರಿಸಿದರೆ ಮಾತ್ರ ಭ್ರಷ್ಟಾಚಾರವಲ್ಲ. ಸರಿಯಾದ ಸಮಯಕ್ಕೆ ಜನ ಸಾಮಾನ್ಯರ ಕೆಲಸ ಮಾಡಿಕೊಡದಿದ್ದರೂ ಭ್ರಷ್ಟಾಚಾರಕ್ಕೆ ಸಮ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಸಂಪನ್ಮೂಲ ವ್ಯಕ್ತಿಗಳಾದ ಡಾ.ಎಂ.ಎಸ್.ಸಂಜಯ್, ಸಿವಿಲ್ ಇಂಜಿನಿಯರ್ ಡಾ.ಆರ್.ಮಂಜುನಾಥ್, ಐಸಿಎಸ್‌ಐ ಮೈಸೂರು ವಿಭಾಗದ ಮಾಜಿ ಛೇರ್ಮನ್ ಡಿ.ಎನ್.ಫಣಿದತ್ತ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ, ವೃತ್ತಿ ಜೀವನ ಆಯ್ದುಕೊಳ್ಳುವುದಕ್ಕಾಗಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮವನ್ನು ಮೈಸೂರು ರಾಮಕೃಷ್ಣಾಶ್ರಮದ ಸ್ವಾಮಿ ಮಹಾಮೇದಾನಂದ ಮಹಾರಾಜ್ ಉದ್ಘಾಟಿಸಿದರು.

ವಿಎಓ, ಪಿಡಿಓ ಪರೀಕ್ಷಾರ್ಥಿಗಳಿಗೆ ಉಚಿತ ತರಬೇತಿ

ಮೈಸೂರು, ಏ.30– ಮೈಸೂರಿನ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಗ್ರಾಮ ಆಡಳಿತ ಅಧಿಕಾರಿ(ವಿಎಓ) ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಓ) ಪರೀಕ್ಷಾರ್ಥಿಗಳಿಗೆ ಉಚಿತ ತರಬೇತಿ ಆಯೋಜಿಸಲಾಗಿದೆ.

ನಗರದ ಲಕ್ಷ್ಮೀಪುರಂ ಸರ್ಕಾರಿ ಪ್ರೌಢ ಶಾಲೆ ಹಾಗೂ ಪ.ಪೂ.ಕಾಲೇಜು ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ 45 ದಿನ ತರಬೇತಿ ನೀಡಲಿದ್ದು, ಆಸಕ್ತರು ಮೇ 8ರೊಳಗೆ ಸಂಜೆ 5.30ರಿಂದ ರಾತ್ರಿ 7.30ರೊಳಗೆ ನೇರವಾಗಿ ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸಂಯೋಜಕರಾದ ಸಿ.ಕೆ.ಕಿರಣ್ ಕೌಶಿಕ್(9972830857) ಅಥವಾ ಕೆ.ವೈ.ನಾಗೇಂದ್ರ(82967 88251) ಅವರನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ (9448117455) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತ 'ಸೂಪರ್ ಪವರ್' ಆಗುವತ್ತ ಹೆಜ್ಜೆ ಇಡುತ್ತಿದೆ; ನಾವು 'ಭಿಕ್ಷೆ' ಬೇಡುತ್ತಿದ್ದೇವೆ:

ಪಾಕ್ ನಾಯಕನ ಬೇಸರದ ಮಾತು

ಇಸ್ಲಾಮಾಬಾದ್, ಏ.30– ಸೂಪರ್ ಪವರ್ ಆಗಲು ಭಾರತ ಕನಸು ಕಾಣುತ್ತಿರುವ ಹೊತ್ತಲ್ಲಿ ಪಾಕಿಸ್ತಾನವು ದಿವಾಳಿತನದಿಂದ ತಪ್ಪಿಸಿಕೊಳ್ಳಲು ಭಿಕ್ಷೆ ಬೇಡುತ್ತಿದೆ ಎಂದು ಪಾಕಿಸ್ತಾನದ ಪ್ರಮುಖ ಬಲಪಂಥೀಯ ಇಸ್ಲಾಮಿಕ್ ನಾಯಕ ಮೌಲಾನಾ ಫಜ್ಲುರ್ ರೆಹಮಾನ್ ಬೇಸರ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಾತನಾಡಿದ ಅವರು, ಭಾರತ ಮತ್ತು ನಮ್ಮನ್ನು ಹೋಲಿಸಿ ನೋಡಿ. ಎರಡೂ ದೇಶಗಳಿಗೆ ಸ್ವಾತಂತ್ರ್ಯ ಸಿಕ್ಕಿದ್ದು ಒಂದೇ ದಿನ. ಆದರೆ ಇಂದು ಅವರು (ಭಾರತ) ಸೂಪರ್ ಪವರ್ ಆಗುವ ಕನಸು ಕಾಣುತ್ತಿದ್ದಾರೆ. ನಾವು ದಿವಾಳಿತನವನ್ನು ತಪ್ಪಿಸಲು ಭಿಕ್ಷೆ ಬೇಡುತ್ತಿದ್ದೇವೆ ಎಂದಿದ್ದಾರೆ.

ನಿರ್ಧಾರಗಳನ್ನು ಬೇರೆಯವರು ಮಾಡುತ್ತಾರೆ. ಆದರೆ ಸಮಸ್ಯೆಗಳಿಗೆ ರಾಜಕಾರಣಿಗಳೇ ಕಾರಣ. ನಾವು ಇಸ್ಲಾಂ ಹೆಸರಿನಲ್ಲಿ ದೇಶವನ್ನು ಪಡೆದುಕೊಂಡಿದ್ದೇವೆ. ಆದರೆ ಇಂದು ಜಾತ್ಯತೀತ ರಾಜ್ಯವಾಗಿದೆ. 1973ರಿಂದ ಸಿಐಐನ ಒಂದೇ ಒಂದು ಶಿಫಾರಸ್ಸೂ ಜಾರಿಗೆ ತಂದಿಲ್ಲ. ನಾವು ಇಸ್ಲಾಮಿಕ್ ದೇಶವಾಗುವುದು ಹೇಗೆ ಎಂದು ಪ್ರಶ್ನಿಸಿದ್ದಾರೆ.

ರಾಷ್ಟ್ರೀಯತೆ ವಿಚಾರದಲ್ಲಿ ಯುವ ಜನರಿಗೆ ಪ್ರೇರಕಶಕ್ತಿಯಾಗಿದ್ದ ಯಲ್ಲಪ್ಪ

ಹಿರಿಯ ವಕೀಲ ಓ.ಶ್ಯಾಮ ಭಟ್ ಸಂತಾಪ

ಮೈಸೂರು,ಏ.30(ಪಿಎಂ)– ಅಬಕಾರಿ ಇಲಾಖೆ ನಿವೃತ್ತ ಉಪ ಆಯುಕ್ತ ಹಾಗೂ ಸರಸ್ವತಿಪುರಂ ನಿವಾಸಿ ಯಲ್ಲಪ್ಪ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಮೈಸೂರಿನ ಹಿರಿಯ ವಕೀಲ ಓ.ಶ್ಯಾಮ ಭಟ್, ರಾಷ್ಟ್ರೀಯತೆ ವಿಚಾರದಲ್ಲಿ ಯುವ ಜನರಿಗೆ ಅವರು ಪ್ರೇರಕ ಶಕ್ತಿಯಾಗಿದ್ದರು ಎಂದು ಸ್ಮರಿಸಿದ್ದಾರೆ.

ಯಲ್ಲಪ್ಪನವರು ಮೈಸೂರಿನಲ್ಲಿ ಸಮಾಜ ಸೇವೆಗೆ ಹೆಸರಾಗಿದ್ದರು. ಅವರು ಅತ್ಯಂತ ಸರಳ ಜೀವನ ನಡೆಸಿದವರು. ನಾನು 1987ರಲ್ಲಿ ಅವರ ಸಂಪರ್ಕಕ್ಕೆ ಬಂದೆ. ಅವರು 80–90ರ ದಶಕಗಳಲ್ಲಿ ರಾಷ್ಟ್ರೀಯತೆಗೆ ಸಂಬಂಧಿಸಿದ ವಿಷಯಗಳಲ್ಲಿ ಅನೇಕ ಯುವ ಜನರಿಗೆ ಪ್ರೇರಕಶಕ್ತಿಯಾಗಿದ್ದರು. ರಾಷ್ಟ್ರೀಯ ಹಿತಾಸಕ್ತಿಯ ಪ್ರತಿಯೊಂದೂ ಅವರಿಗೆ ಪ್ರಿಯವಾದ ವಿಚಾರವಾಗಿತ್ತು. ಇದೇ ವೇಳೆಗೆ ಅಯೋಧ್ಯೆ ಚಳವಳಿ ಆರಂಭಗೊಂಡಿತ್ತು. ಈ ಚಳವಳಿಯಲ್ಲಿ ನಮ್ಮಂತಹವರನ್ನು ಸಕ್ರಿಯವಾಗಿ ಅವರು ಬೆಂಬಲಿಸಿದ್ದರು. ಜೊತೆಗೆ ಚಳವಳಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಲವು ಸಾಮಗ್ರಿಗಳನ್ನು ಒದಗಿಸಿದರು. ಅಲ್ಲದೆ, ಇದಕ್ಕಾಗಿ ಕೆಲಸಗಾರರನ್ನು ಒದಗಿಸಿದ್ದೂ ಮಾತ್ರವಲ್ಲದೆ, ವೆಚ್ಚವನ್ನೂ ಭರಿಸಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರ ಭಕ್ತರಾಗಿದ್ದ ಅವರು, ರಾಮಕೃಷ್ಣ ಆಶ್ರಮಕ್ಕೆ ದೊಡ್ಡ ದಾನಿಯೂ ಆಗಿದ್ದರು. ಎಲ್ಲಕ್ಕಿಂತಲೂ ಮಿಗಿಲಾಗಿ ಅವರು ಯಾವುದನ್ನೂ ಕುರುಡಾಗಿ ಅನುಸರಿಸುವ ವ್ಯಕ್ತಿಯಾಗಿರಲಿಲ್ಲ. ಎಲ್ಲಿಯೇ ತಪ್ಪಾದರೂ ಕಟುವಾಗಿ ಟೀಕಿಸುತ್ತಿದ್ದರು. ರಾಮಕೃಷ್ಣ ಆಶ್ರಮವು ಅಲ್ಪಸಂಖ್ಯಾತ ಸ್ಥಾನಮಾನಕ್ಕಾಗಿ ತಾವು ಹಿಂದೂಗಳಲ್ಲವೆಂದು ಪ್ರತಿಪಾದಿಸಿದಾಗ, ಯಲ್ಲಪ್ಪನವರು ರಾಮಕೃಷ್ಣ ಆಶ್ರಮದ ಎಲ್ಲಾ ಸ್ವಾಮೀಜಿಗಳನ್ನು ಬಹಿರಂಗವಾಗಿಯೇ ಟೀಕಿಸಿದ್ದರು. ಅವರ ಅಂತಹ ದಿಟ್ಟತನ ನನ್ನನ್ನು ಆಕರ್ಷಿಸಿತು. ಅದೇ ರೀತಿಯಲ್ಲಿ ಮುಕ್ತ ಹೇಳಿಕೆ ನೀಡುವುದು ನನಗೂ ರೂಢಿಗತವಾಯಿತು. ಯಲ್ಲಪ್ಪನವರು ಶ್ರೀ ರಾಮಕೃಷ್ಣ ಪರಮಹಂಸ, ಶಾರದಾದೇವಿ, ಸ್ವಾಮಿ ವಿವೇಕಾನಂದರ ಬಗ್ಗೆ ಅಪಾರ ಶ್ರದ್ಧಾಭಕ್ತಿ ಹೊಂದಿದ್ದರು. ಜೊತೆಗೆ ಮಾತಾ ಅಮೃತಾನಂದಮಯಿ ಅವರನ್ನು ಶಾರದಾದೇವಿಯ ಪುನರ್ಜನ್ಮ ಎಂಬುದರಲ್ಲಿ ನಂಬಿಕೆ ಹೊಂದಿದ್ದರು. ಮಾತ್ರವಲ್ಲದೆ, ಮೊದಲಿನಿಂದಲೂ ಅಮ್ಮನವರ ಎಲ್ಲಾ ಕಾರ್ಯಕ್ರಮಗಳಿಗೆ ಉದಾರ ದಾನಿಯಾಗಿದ್ದರು.



ಯಲ್ಲಪ್ಪ

ಯಲ್ಲಪ್ಪನವರು ಇತರ ಆಶ್ರಮಗಳು ಹಾಗೂ ವಿಶ್ವ ಹಿಂದೂ ಪರಿಷತ್ತಿಗೆ ಬೆಂಬಲ ನೀಡುತ್ತಿದ್ದರು. ರಾಮಕೃಷ್ಣನಗರ, ವಿವೇಕಾನಂದನಗರ, ಶಾರದಾದೇವಿನಗರ ಮೊದಲಾದ ಬಡಾವಣೆಗಳಿಗೆ ನಾಮಕರಣ ಮಾಡುವಲ್ಲಿ ಯಲ್ಲಪ್ಪ ಮಹತ್ವದ ಪಾತ್ರ ವಹಿಸಿದ್ದಾರೆ. ಆ ಸಮಯದಲ್ಲಿ ಡಿ.ಮಾದೇಗೌಡರು 'ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್'ನ (ಪ್ರಸ್ತುತದ ಮುಡಾ) ಅಧ್ಯಕ್ಷರಾಗಿದ್ದರು. ಶೈಕ್ಷಣಿಕ ಉದ್ದೇಶಕ್ಕಾಗಿ ಯಲ್ಲಪ್ಪನವರು ಕೊಡುಗೆ ನೀಡಲು ಸದಾ ಮುಂದಿದ್ದರು. ಅದಕ್ಕಾಗಿಯೇ ಸುರಭಿ ಟ್ರಸ್ಟ್ ಹೆಸರಿನಲ್ಲಿ 3 ಎಕರೆ ಜಮೀನು ಖರೀದಿಸಿದ್ದರು. ಈಗ ಇದನ್ನು ರಾಷ್ಟ್ರೋತ್ಥಾನ ಪರಿಷತ್ತಿಗೆ ದೇಣಿಗೆ ನೀಡಿದ್ದು, ಮಂಡಕಳ್ಳಿ ವಿಮಾನ ನಿಲ್ದಾಣದ ಸಮೀಪದಲ್ಲಿರುವ ಈ ಜಮೀನಿನಲ್ಲಿ ಪ್ರಸ್ತುತ ಹೊಸ ರಾಷ್ಟ್ರೋತ್ಥಾನ ಶಾಲೆ ನಿರ್ಮಾಣಗೊಂಡಿದೆ. ಯಲ್ಲಪ್ಪನವರ ಅಪಾರ ಸೇವೆ ಮತ್ತು ಪ್ರೇರಣೆಗೆ ನನ್ನ ವಿನಮ್ರ ಪ್ರಣಾಮಗಳು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಅಮೇಥಿಯಲ್ಲಿ ರಾಹುಲ್‌ಗಾಂಧಿ, ರಾಯ್‌ಬರೇಲಿಯಲ್ಲಿ ಪ್ರಿಯಾಂಕಾ ಗಾಂಧಿ ಸ್ಪರ್ಧೆ

ಮೈಸೂರು,ಏ.30(ಪಿಎಂ)– ಮೂರನೇ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ದಿನ ಗಣನೆ ಆರಂಭಗೊಂಡಿದ್ದು, ಉತ್ತರ ಪ್ರದೇಶದ ಅಮೇಥಿ ಹಾಗೂ ರಾಯ್‌ಬರೇಲಿ ಕ್ಷೇತ್ರಗಳಿಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ರಾಯ್‌ಬರೇಲಿ ಕ್ಷೇತ್ರಕ್ಕೆ ಪ್ರಿಯಾಂಕಾ ಗಾಂಧಿ ವದ್ರಾ ಹಾಗೂ ಅಮೇಥಿ ಕ್ಷೇತ್ರಕ್ಕೆ ರಾಹುಲ್ ಗಾಂಧಿ ಅವರನ್ನು ಆಯ್ಕೆ ಮಾಡಲಾಗಿದ್ದು, ಈ ಸಂಬಂಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅಧಿಕೃತವಾಗಿ ಪ್ರಕಟಿಸಿದ್ದಾರೆ. ತಿಳಿಸಿದೆ. ಕಾಂಗ್ರೆಸ್‌ನ ಭದ್ರ ಕೋಟೆ ಎಂದೇ ಪರಿಗಣಿಸಿದ್ದ ಉತ್ತರ ಪ್ರದೇಶ ಅಮೇಥಿ ಲೋಕಸಭಾ ಕ್ಷೇತ್ರದಲ್ಲಿ ಸತತ ಗೆಲುಗಳನ್ನೇ ಕಂಡಿದ್ದ ರಾಹುಲ್ ಗಾಂಧಿ ಅವರಿಗೆ ಬಿಜೆಪಿಯ ಸ್ಮೃತಿ ಇರಾನಿ ಕಳೆದ ಚುನಾವಣೆಯಲ್ಲಿ ಸೋಲಿನ ಕಹಿ ನೀಡಿದ್ದರು. ಅಮೇಥಿ ಕ್ಷೇತ್ರ ಬಿಜೆಪಿ ಅಭ್ಯರ್ಥಿಯಾಗಿ ಸ್ಮೃತಿ ಇರಾನಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಈಗಾಗಲೇ ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಮರುಆಯ್ಕೆ ಬಯಸಿ ರಾಹುಲ್ ಗಾಂಧಿ ಕಣಕ್ಕಿಳಿದಿದ್ದಾರೆ. ಇದೇ ಪ್ರಥಮ ಬಾರಿಗೆ ಪ್ರಿಯಾಂಕಾ ಗಾಂಧಿ ಚುನಾವಣಾ ರಾಜಕೀಯಕ್ಕೆ ಧುಮುಕುತ್ತಿದ್ದಾರೆ. ಇದುವರೆಗೆ ರಾಯ್‌ಬರೇಲಿ ಕ್ಷೇತ್ರದಿಂದ ಅವರ ತಾಯಿ ಸೋನಿಯಾ ಗಾಂಧಿ ಆಯ್ಕೆಯಾಗುತ್ತಾ ಬಂದಿದ್ದರು. ಈಗ ಅವರು ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ನೇಹಾ ಹತ್ಯೆ ಕೇಸ್: 14 ದಿನ ನ್ಯಾಯಾಂಗ ಬಂಧನಕ್ಕೆ ಫಯಾಜ್

ಹುಬ್ಬಳ್ಳಿ, ಏ.30– ನೇಹಾ ಹಿರೇಮಠ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಫಯಾಜ್ ವಿಚಾರಣೆಯನ್ನು ಸಿಐಡಿ ಮುಗಿಸಿದ್ದು ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ.

ಪ್ರಕರಣದ ಕುರಿತು ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಒಂದನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದ ಅನುಮತಿ ಮೇರೆಗೆ ಆರು ದಿನ ವಶಕ್ಕೆ ಪಡೆದಿದ್ದರು. 6 ದಿನಗಳ ವಿಚಾರಣೆ ಬಳಿಕ ಇಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಸಿಐಡಿ ತನಿಖೆ ವೇಗವಾಗಿ ನಡೆಯುತ್ತಿದ್ದು ಸೋಮವಾರ ಸಿಐಡಿ ಡಿಜಿಪಿ ಹುಬ್ಬಳ್ಳಿಗೆ ಆಗಮಿಸಿ ತನಿಖೆ ವರದಿ ಗಮನಿಸಿದ್ದರು.



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿದ್ದ ಸಂತ ಶ್ರೀ ಅಂತರ್ಮನ ಆಚಾರ್ಯ 108 ಮುನಿಶ್ರೀ ಪ್ರಸನ್ನ ಸಾಗರ್ ಜೀ ಮಹಾರಾಜ್ ಅವರನ್ನು ಗಣಪತಿ ಸಚ್ಚಿದಾನಂದ ಶ್ರೀಗಳು ಸ್ವಾಗತಿಸಿದರು. ಈ ವೇಳೆ ಆಚಾರ್ಯರ ಶಿಷ್ಯ ವೃಂದ, ಆಶ್ರಮದ ಪ್ರಸಾದ್, ಹಿರಿಯ ವಕೀಲರೂ ಆದ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಪಾದಕ ಹೆಚ್.ಎನ್.ವೆಂಕಟೇಶ್, ಹಿರಿಯ ವಕೀಲ ಹಾಗೂ ಉದ್ಯಮಿ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಅವರ ಪತ್ನಿ ಶ್ರೀಮತಿ ಜಯಪದ್ಮ ಹೆಗ್ಡೆ, ಸೊಸೆ ಮೊನಿಷಾ ಹೆಗ್ಡೆ, ಪುತ್ರ ಅಭಿಷೇಕ ಹೆಗ್ಡೆ, ಮಾಜಿ ಶಾಸಕ ದಿವಂಗತ ವಾಸು ಪುತ್ರ ರಿತೇಶ್ ಗೌಡ ಮತ್ತಿತರರಿದ್ದರು.

ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ 557 ಹಜ್ ಯಾತ್ರಾರ್ಥಿಗಳಿಗೆ ಲಸಿಕೆ



ಮೈಸೂರು,ಏ.30(ಪಿಎಂ)– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಹಜ್ ಸಮಿತಿ ಜಂಟಿ ಆಶ್ರಯದಲ್ಲಿ ಮಂಗಳವಾರ 2024ನೇ ಸಾಲಿನಲ್ಲಿ ಹಜ್ ಯಾತ್ರೆಗೆ ತೆರಳುವ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಒಟ್ಟು 557 ಯಾತ್ರಾರ್ಥಿಗಳಿಗೆ ಲಸಿಕೆ ನೀಡಲಾಯಿತು.

ಮೈಸೂರಿನ ಉದಯಗಿರಿಯ ಆರ್‌ಕೆ ಪ್ಯಾಲೇಸ್‌ನಲ್ಲಿ ಹಮ್ಮಿಕೊಂಡಿದ್ದ ಶಿಬಿರದಲ್ಲಿ ಮೈಸೂರು ಜಿಲ್ಲೆಯ 428, ಕೊಡಗು ಜಿಲ್ಲೆಯ 73 ಮತ್ತು ಚಾಮರಾಜನಗರ ಜಿಲ್ಲೆ 56 ಯಾತ್ರಾರ್ಥಿಗಳು ಸೇರಿದಂತೆ ಒಟ್ಟು 557 ಯಾತ್ರಾರ್ಥಿಗಳಿಗೆ ಲಸಿಕೆ ನೀಡಲಾಯಿತು.

ಯಾತ್ರೆಯ ಫಲಾನುಭವಿಯೊಬ್ಬರಿಗೆ ಲಸಿಕೆ ನೀಡುವ ಮೂಲಕ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಶಿಬಿರಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹಜ್ ಯಾತ್ರಾರ್ಥಿಗಳಿಗೆ ಯಾವುದೇ ರೀತಿಯ ಸೋಂಕು ತಗುಲದೇ ಇರಲೆಂಬ ಕಾರಣಕ್ಕೆ ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ನೀಡಲಾಗಿದೆ. ಸಾಮಾನ್ಯವಾಗಿ ಬೇರೆ ರಾಜ್ಯಗಳಿಗೆ ತೆರಳಿದಾಗ ಆ ಭಾಗದಲ್ಲಿ ಪ್ರಬಲವಾಗಿರುವ ಹಾನಿಕಾರಕ ಬ್ಯಾಕ್ಟೀರಿಯಾ, ವೈರಸ್, ಸೊಳ್ಳೆ, ನೀರು, ಗಾಳಿ ಮೂಲಕ ರೋಗಾಣು ಮನುಷ್ಯನ ದೇಹವನ್ನು ಸೇರಿ ಅನಾರೋಗ್ಯ ಉಂಟ ಮಾಡುತ್ತವೆ. ಇದನ್ನು ತಡೆಗಟ್ಟುವ ಸಲುವಾಗಿ ಲಸಿಕೆಗಳನ್ನು ಹಾಕಲಾಗುತ್ತದೆ ಎಂದು ತಿಳಿಸಿದರು.

ಮಾತ್ರವಲ್ಲದೇ ಅವರು ತಮ್ಮ ಸ್ವಸ್ಥಾನಕ್ಕೆ ಮರಳಿದಾಗ ತಮ್ಮ ಜಿಲ್ಲೆಯವರಿಗೂ ಆ ಕಾಯಿಲೆ ಹರಡುವ ಸಾಧ್ಯತೆ ಇರುತ್ತದೆ. ಈ ಕಾರಣಕ್ಕೆ ಯಾವುದೇ ರೀತಿಯ ರೋಗಾಣು ದೇಹವನ್ನು ಸೇರಿದರೂ ಅದು ಯಾವುದೇ ಪರಿಣಾಮ ಉಂಟುಮಾಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪ್ರವಾಸ ತೆರಳುವವರಿಗೆ ಅದರಲ್ಲಿಯೂ ಹಜ್ ಯಾತ್ರಾರ್ಥಿಗಳಿಗೆ ಕಡ್ಡಾಯವಾಗಿ ಲಸಿಕೆಗಳನ್ನು ನೀಡಲಾಗುತ್ತದೆ ಎಂದು ಹೇಳಿದರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಎಂ. ಎಸ್.ಜಯಂತ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮ್ಮದ್ ಸೇರಿದಂತೆ ಆರೋಗ್ಯ ಕ್ಷೇತ್ರಗಳ ವೈದ್ಯಾಧಿಕಾರಿ ಗಳು, ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಜಿಲ್ಲಾ ಹಜ್ ಸಮಿತಿ ಪದಾಧಿಕಾರಿಗಳು ಹಾಜರಿದ್ದರು.

ಮೈಸೂರು ಮಿತ್ರ

ಜಮೀನಿನ ಬೇಲಿಗೆ ಅಳವಡಿಸಿದ್ದ ಕಲ್ಲು ಕಂಬಕ್ಕೆ ಬೈಕ್ ಡಿಕ್ಕಿ: ವಿದ್ಯಾರ್ಥಿ ಸಾವು

ಮೈಸೂರು, ಏ.30–ಬೈಕ್ ನಿಯಂತ್ರಣ ತಪ್ಪಿ ಜಮೀನಿಗೆ ಅಳವಡಿಸಿರುವ ಕಲ್ಲುಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಕಡಕೊಳ ಗ್ರಾಮದ ಬಳಿ ಸೋಮವಾರ ಮುಂಜಾನೆ ಸಂಭವಿಸಿದೆ.

ಕಡಕೊಳ ಗ್ರಾಮ, ಹಳ್ಳಿದಿಡ್ಡಿ ರಸ್ತೆಯಲ್ಲಿರುವ ಶ್ರೀ ಆಚಾರ್ಯ ಗುರುಕುಲ ವಿದ್ಯಾಸಂಸ್ಥೆ ಮುಖ್ಯಸ್ಥ ಜಿ.ವಿ.ಮಂಜುನಾಥ ಅವರ ಪುತ್ರ ಜಿ.ಎಂ.ಶಶಾಂಕ್ (21) ಅಪಘಾತದಲ್ಲಿ ಸಾವನ್ನಪ್ಪಿದ ಯುವಕ.

ಈತ ಕ್ರೈಸ್ಟ್ ಕಾಲೇಜಿನ ಅಂತಿಮ ಬಿ.ಕಾಂ ವಿದ್ಯಾರ್ಥಿಯಾಗಿದ್ದು, ಭಾನುವಾರ ಸಂಜೆ ತನ್ನ ರಾಯಲ್ ಎನ್‌ಫೀಲ್ಡ್ ಹಿಮಾಲಯನ್ ಬೈಕ್(ಕೆಎ–09, ಹೆಚ್‌ಜೆ–0274)ನಲ್ಲಿ ಮೈಸೂರಿನಲ್ಲಿರುವ ಸ್ನೇಹಿತ ವಿಶ್ವಾಸ್ ಮನೆಗೆ ಹೋಗಿದ್ದ. ಅವರ ತಂದೆ ರಾತ್ರಿ 10 ಗಂಟೆಗೆ ಕರೆ ಮಾಡಿ ವಿಚಾರಿಸಿದಾಗ ವಿಶ್ವಾಸ್ ಮನೆಯವರು ಹೊರಗೆ ಹೋಗಿದ್ದು ಅವರು ಬಂದ ನಂತರ ಊರಿಗೆ ಬರುವುದಾಗಿ ತಿಳಿಸಿದ್ದ. ಆಗ ಮನೆಯವರು ಇಷ್ಟು ರಾತ್ರಿಯಲ್ಲಿ ಬೇಡ ಬೆಳಗ್ಗೆ ಬಾ ಎಂದು ಹೇಳಿದ್ದಾರೆ. ಆದರೆ ಸೋಮವಾರ ಮುಂಜಾನೆ 2.30ಕ್ಕೆ ವಿಶ್ವಾಸ್ ಮನೆಯಿಂದ ಹೊರಟ ಶಶಾಂಕ್ ಕಡಕೊಳ–ನಂಜನಗೂಡು ಮುಖ್ಯರಸ್ತೆಯಿಂದ ಹಳ್ಳಿದಿಡ್ಡಿಗಿರುವ ಅಡ್ಡದಾರಿಯಲ್ಲಿ ಬರುವಾಗ ಬೈಕ್ ನಿಯಂತ್ರಣ ಕಳೆದುಕೊಂಡು ಜಮೀನಿಗೆ ಅಳವಡಿಸಿದ್ದ ಕಲ್ಲು ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ನೆಲಕ್ಕುರುಳಿದ ಶಶಾಂಕ್ ತಲೆಗೆ ತೀವ್ರ ಪೆಟ್ಟು ಬಿದ್ದು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬೆಳಗ್ಗೆ 7 ಗಂಟೆ ಸಮಯದಲ್ಲಿ ಸಾರ್ವಜನಿಕರು ಕರೆ ಮಾಡಿದಾಗಲೇ ಶಶಾಂಕ್ ಮನೆಯವರಿಗೆ ವಿಷಯ ಗೊತ್ತಾಗಿದೆ. ಈ ಸಂಬಂಧ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜ್ವಲ್ ರೇವಣ್ಣ ರಾಸಲೀಲೆ ಪ್ರಕರಣ: ವರದಿ ಕೇಳಿದ ಎನ್‌ಸಿಡಬ್ಲ್ಯು

ನವದೆಹಲಿ: ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರು ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕುರಿತು ಮೂರು ದಿನಗಳಲ್ಲಿ ವರದಿ ನೀಡುವಂತೆ ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯು) ಕರ್ನಾಟಕ ಪೊಲೀಸರಿಗೆ ಸೂಚಿಸಿದೆ.

ಈ ಸಂಬಂಧ ಕರ್ನಾಟಕ ಡಿಜಿಪಿಗೆ ಪತ್ರ ಬರೆದಿರುವ ಎನ್‌ಸಿಡಬ್ಲ್ಯು, ಪ್ರಜ್ವಲ್ ರೇವಣ್ಣ ಅವರು ಅನೇಕ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ವೀಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದು, ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿದೆ. ದೇಶದಿಂದ ಪರಾರಿಯಾಗಿರುವ ಆರೋಪಿಯನ್ನು ಬಂಧಿಸಲು ತ್ವರಿತ ಮತ್ತು ನಿರ್ಣಾಯಕ ಕ್ರಮ ತೆಗೆದುಕೊಳ್ಳುವಂತೆ ರಾಷ್ಟ್ರೀಯ ಮಹಿಳಾ ಆಯೋಗ ಕರ್ನಾಟಕ ಪೊಲೀಸರನ್ನು ಒತ್ತಾಯಿಸಿದೆ. ಆಯೋಗವು ಈ ಘಟನೆಯನ್ನು ಬಲವಾಗಿ ಖಂಡಿಸುತ್ತದೆ ಮತ್ತು ಘಟನೆಯಿಂದ ತೀವ್ರ ವಿಚಲಿತವಾಗಿರುವುದಾಗಿ" ಎನ್‌ಸಿಡಬ್ಲ್ಯು ಪತ್ರದಲ್ಲಿ ಹೇಳಿದೆ.

ಇಂತಹ ಘಟನೆಗಳು ಮಹಿಳೆಯರ ಸುರಕ್ಷತೆಗೆ ಅಪಾಯವನ್ನುಂಟು ಮಾಡುವುದು ಮಾತ್ರವಲ್ಲದೆ ಅವರ ವಿರುದ್ಧ ಅಗೌರವ ಮತ್ತು ಹಿಂಸೆಯ ಸಂಸ್ಕೃತಿಯನ್ನು ಬೆಳೆಸುತ್ತವೆ. ದೇಶದಿಂದ ಪರಾರಿಯಾಗಿರುವ ಆರೋಪಿಯನ್ನು ಶೀಘ್ರವಾಗಿ ಬಂಧಿಸಲು ಸಂಬಂಧಪಟ್ಟ ಪೊಲೀಸ್ ಪ್ರಾಧಿಕಾರಿಗಳು ತ್ವರಿತ ಮತ್ತು ನಿರ್ಣಾಯಕ ಕ್ರಮ ತೆಗೆದುಕೊಳ್ಳಬೇಕು ಎಂದು ನಾವು ಒತ್ತಾಯಿಸುತ್ತೇವೆ ಎಂದು ಪತ್ರದಲ್ಲಿ ತಿಳಿಸಲಾಗಿದೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಕೈಗೊಂಡ ಕ್ರಮಗಳ ವಿವರವಾದ ವರದಿಯನ್ನು ಮೂರು ದಿನಗಳಲ್ಲಿ ತನಗೆ ಸಲ್ಲಿಸಬೇಕು ಎಂದು ಆಯೋಗ ಪೊಲೀಸರಿಗೆ ಸೂಚಿಸಿದೆ.

ಕುಮಾರಸ್ವಾಮಿ ತಂಗಿದ್ದ ಹೋಟೆಲ್ ಮುತ್ತಿಗೆಗೆ ಯತ್ನ ಕಾಂಗ್ರೆಸ್, ಜೆಡಿಎಸ್ ಕಾರ್ಯಕರ್ತರ ನಡುವೆ ಜಟಾಪಟಿ



ಹುಬ್ಬಳ್ಳಿ, ಏ.30–ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ಮಂಗಳವಾರ ಭಾರಿ ಜಟಾಪಟಿ ನಡೆದಿದೆ. ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ, ವಾಗ್ವಾದ ನಡೆದಿದ್ದು, ಪೊಲೀಸರ ಮಧ್ಯ ಪ್ರವೇಶದಿಂದ ಪರಿಸ್ಥಿತಿ ತಿಳಿಯಾಗಿದೆ.

ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮಹಿಳೆಯರಿಗೆ ಲೈಂಗಿಕ ದೌರ್ಜನ್ಯ ಪ್ರಕರಣ ಕುರಿತು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ತಂಗಿದ್ದ ಹೋಟೆಲ್ ಮುಂದೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಹೋಟೆಲ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ. ಕಾಂಗ್ರೆಸ್ ಪ್ರತಿಭಟನಾಕಾರರನ್ನು ಜೆಡಿಎಸ್ ಕಾರ್ಯಕರ್ತರು ತಡೆದಿದ್ದಾರೆ. ಈ ವೇಳೆ ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ತೀವ್ರ ಮಾತಿನ ಚಕಮಕಿ, ವಾಗ್ವಾದ ನಡೆದಿದ್ದು, ಪರಿಸ್ಥಿತಿ ಕೈ ಕೈ ಮಿಲಾಯಿಸುವ ತಲುಪಿತು. ನಂತರ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಪರಿಸ್ಥಿತಿಯನ್ನು ಶಾಂತಗೊಳಿಸಿದ್ದಾರೆ.

ನಂತರ ಮಾತನಾಡಿದ ಮಾಜಿ ಸಚಿವ ಸಾರಾ ಮಹೇಶ್, ಕೋರ್ ಕಮಿಟಿ ಸಭೆಗೆ ಹೋಗುವಾಗ ಕಾಂಗ್ರೆಸ್ ಪ್ರತಿಭಟನಾಕಾರರು ನಮ್ಮನ್ನು ತಡೆದಿದ್ದಾರೆ. ಪ್ರತಿಭಟನೆ ವೇಳೆ ಚಪ್ಪಲಿ ಎಸೆದಿದ್ದಾರೆ ಎಂದು ಆರೋಪಿಸಿದರು. ಕಾಂಗ್ರೆಸ್ಸಿಗರಿಗೆ ಪ್ರತಿಭಟನೆ ನಡೆಸಲು ಅನುಮತಿ ನೀಡಿದವರು ಯಾರು, ಸಭೆ ವೇಳೆ ಏಕಾಏಕಿ ಬಂದು ಗಲಾಟೆ ಮಾಡಿದ್ದು ಸರಿನಾ ಎಂದು ಪ್ರಶ್ನಿಸಿದ ಅವರು, ಸೂಕ್ತ ರೀತಿಯಲ್ಲಿ ತನಿಖೆ ಮಾಡಿ ಕ್ರಮ ಕೈಗೊಳ್ಳಲು ಕಮೀಷನರ್ ಅವರನ್ನು ಒತ್ತಾಯಿಸುವುದಾಗಿ ತಿಳಿಸಿದರು.

ಒಂದನೇ ಪುಟದಿಂದ

ಕಾಂಗ್ರೆಸ್ ನಾಯಕರಿಗೆ ಕೊಟ್ಟಿಲ್ಲ

'ನಾನು ಹದಿನೈದು ವರ್ಷದಿಂದ ಪ್ರಜ್ವಲ್ ರೇವಣ್ಣ ಹಾಗೂ ಅವರ ಫ್ಯಾಮಿಲಿಗೆ ಕಾರು ಡ್ರೈವರ್ ಆಗಿ ಕೆಲಸ ಮಾಡಿದ್ದೀನಿ. ಒಂದು ವರ್ಷದ ಹಿಂದೆ ಕೆಲಸ ಬಿಟ್ಟಿದ್ದೀನಿ. ನನ್ನ ಜಮೀನು ಬರೆಸಿಕೊಂಡು ನನ್ನ ಪತ್ನಿ ಮೇಲೆ ಹಲ್ಲೆ ಮಾಡಿದರು. ಹಿಂಸೆ ಕೊಟ್ಟು ಹಲ್ಲೆ ಮಾಡಿದರು. ಆದ್ದರಿಂದ ಕೆಲಸ ಬಿಟ್ಟು ಅವರ ಮನೆಯಿಂದ ಹೊರಬಂದೆ ಎಂದು ಹೇಳಿದ್ದಾರೆ. ದೇವರಾಜೇಗೌಡ ಅವರು ದೇವೇಗೌಡರ ಫ್ಯಾಮಿಲಿ ವಿರುದ್ಧ ಹೋರಾಟ ಮಾಡುತ್ತಿದ್ದರು. ಯಾರಿಂದಲೂ ನ್ಯಾಯ ಸಿಗಲ್ಲ ಅಂತ ದೇವರಾಜೇಗೌಡ ಬಳಿ ಹೋದೆ ಎಂದಿರುವ ಮಾಜಿ ಕಾರ್ ಚಾಲಕ ಕಾರ್ತಿಕ್, ಯಾವುದೇ ಅಶ್ಲೀಲ ವಿಡಿಯೋ ರಿಲೀಸ್ ಮಾಡಬಾರದು ಎಂದು ನನ್ನ ವಿರುದ್ಧ ಪ್ರಜ್ವಲ್ ರೇವಣ್ಣ ಸ್ಟೇ ತಂದಿದ್ದಾರೆ. ಆಗ ನಿನ್ನ ಬಳಿ ಇರುವ ವಿಡಿಯೋ, ಫೋಟೋಸ್ ನಾನು ಯಾರಿಗೂ ತೋರಿಸಲ್ಲ ಕೊಡು ಎಂದು ದೇವರಾಜೇಗೌಡ ಕೇಳಿದರು. ನಾನು ನಂಬಿ ನನ್ನ ಬಳಿಯಿದ್ದ ವಿಡಿಯೋದ ಒಂದು ಕಾಪಿ ಕೊಟ್ಟೆ, ಅವರು ಅದನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೋ ಗೊತ್ತಿಲ್ಲ. ದೇವರಾಜೇಗೌಡರನ್ನು ಬಿಟ್ಟರೆ ಬೇರೆ ಯಾರಿಗೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಕಾಂಗ್ರೆಸ್‌ನವರಿಗೆ ನಾನು ವಿಡಿಯೋ ಕೊಟ್ಟಿಲ್ಲ ಎಂದಿರುವ ಕಾರ್ತಿಕ್, ಕಾಂಗ್ರೆಸ್‌ನವರ ಮೇಲೆ ನಂಬಿಕೆ ಇಲ್ಲದೆ ದೇವರಾಜೇಗೌಡರ ಹತ್ತಿರ ಕೊಟ್ಟಿದ್ದೆ. ಪೆನ್‌ಡ್ರೈವ್ ಯಾರು ಹಂಚಿದರೋ ಗೊತ್ತಿಲ್ಲ. ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ನಾನು ಕಾಂಗ್ರೆಸ್ ಅವರಿಗೆ ಕೊಡುವುದಿದ್ದರೆ ದೇವರಾಜೇಗೌಡ ಬಳಿ ಏಕೆ ಹೋಗುತ್ತಿದ್ದೆ ಇವತ್ತು ಎಸ್‌ಐಟಿ ಮುಂದೆ ಹಾಜರಾಗಿ ಎಲ್ಲಾ ಹೇಳಿಕೊಳ್ಳುತ್ತೇನೆ. ನಂತರ ಮಾಧ್ಯಮದ ಮುಂದೆ ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ ಎಂದಿದ್ದಾರೆ.

ರೇವಣ್ಣ ಮನೆಯಲ್ಲಿ ಏನೆಲ್ಲಾ ನಡೆದಿದೆ ನಾನು ನೋಡಿದ್ದೇನೆ. ಎಲ್ಲವನ್ನೂ ಎಸ್‌ಐಟಿ ಮುಂದೆ ಹೇಳುತ್ತೇನೆ. ಯಾರಿಗೆ ಅನ್ಯಾಯ ಆಗಿದೆಯೋ ಧೈರ್ಯವಾಗಿ ಮುಂದೆ ಬನ್ನಿ ಎಂದು ಕಾರ್ತಿಕ್ ವಿಡಿಯೊ ಮೂಲಕ ಮನವಿ ಮಾಡಿದ್ದಾರೆ.

ಎಸ್‌ಐಟಿ ತಂಡ: ಮೈಸೂರು ಎಸ್‌ಪಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಒಂದು ತಂಡ ರಚನೆ ಮಾಡಿದರೆ, ಎಸ್ ಪಿ ಸುಮನ್ ಡಿ ಪನ್ನೇಕರ್ ನೇತೃತ್ವದಲ್ಲಿ ಇನ್ನೊಂದು ತಂಡವನ್ನು ಸರ್ಕಾರ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ತನಿಖೆ ಮಾಡಲು ರಚನೆ ಮಾಡಿದೆ. ಇದರ ಜೊತೆಗೆ ಮತ್ತೊಂದು ತಾಂತ್ರಿಕ ತಂಡವನ್ನು ರಚನೆ ಮಾಡಲಾಗಿದೆ. ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚನೆ ಮಾಡಿರುವ ಮೂರು ತಂಡಗಳಿಗೆ ಪ್ರತ್ಯೇಕ ಜವಾಬ್ದಾರಿಯನ್ನು ನೀಡಲಾಗಿದ್ದು, ಹಾಸನದಲ್ಲಿ ಸಂತ್ರಸ್ತರನ್ನು ಪತ್ತೆ ಹಚ್ಚಿ, ಮಾಹಿತಿ ಸಂಗ್ರಹಿಸಲು ಒಂದು ತಂಡವನ್ನು ನಿಯೋಜಿಸಲಾಗಿದೆ.

ಟಿ20 ವಿಶ್ವಕಪ್ ಟೀಂ ಇಂಡಿಯಾ ಪ್ರಕಟ: ಪಂತ್, ದುಬೆ, ಸ್ಯಾಮ್ಸನ್, ಚಾಹಲ್‌ಗೆ ಸ್ಥಾನ; ಕೆಎಲ್ ರಾಹುಲ್‌ಗೆ ಕೊಕ್



ಮುಂಬೈ, ಏ.30– ಬಹುನಿರೀಕ್ಷಿತ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ತಂಡವನ್ನು ಘೋಷಣೆ ಮಾಡಲಾಗಿದ್ದು, ನಾಯಕ ರೋಹಿತ್ ಶರ್ಮಾ ನೇತೃತ್ವದಲ್ಲಿ 15 ಮಂದಿಯ ತಂಡವನ್ನು ಸಮಿತಿ ಆಯ್ಕೆ ಮಾಡಿದೆ.

ಇಂದು ನಡೆದ ಭಾರತ ತಂಡದ ಆಯ್ಕೆ ಸಮಿತಿ ಸಭೆಯಲ್ಲಿ ಮುಂಬರುವ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸಲಾಯಿತು. ತಂಡದಲ್ಲಿ ಹಾರ್ದಿಕ್ ಪಾಂಡ್ಯಾಗೆ ಉಪನಾಯಕ ಜವಾಬ್ದಾರಿ ನೀಡಲಾಗಿದ್ದು, ಈ ಹಿಂದೆ ಅಪಘಾತದಲ್ಲಿ ಗಾಯಗೊಂಡು ಚೇತರಿಸಿಕೊಂಡು ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ರಿಷಬ್ ಪಂತ್‌ಗೆ ವಿಕೆಟ್ ಕೀಪರ್ ಬ್ಯಾಟರ್ ಜವಾಬ್ದಾರಿ ನೀಡಲಾಗಿದೆ.

ಆದರೆ ಇದೇ ವಿಭಾಗದಲ್ಲಿ ತಂಡದ ಆಯ್ಕೆ ಬಯಸುತ್ತಿದ್ದ ಕನ್ನಡಿಗ ಕೆಎಲ್ ರಾಹುಲ್‌ಗೆ ಅಧ್ಯಕ್ಷ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಕೊಕ್ ನೀಡಿದೆ. ಉಳಿದಂತೆ ತಂಡವನ್ನು ರೋಹಿತ್ ಶರ್ಮ ಮುನ್ನಡೆಸಲಿದ್ದು, ಹಾರ್ದಿಕ್ ಪಾಂಡ್ಯ ಉಪನಾಯನಾಗಿದ್ದಾರೆ. ಅಂತೆಯೇ ತಂಡದ ವಿಕೆಟ್ ಕೀಪಿಂಗ್ ವಿಭಾಗದಲ್ಲಿ ತಂಡ ಸೇರ್ಪಡೆಗೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ರಿಷಬ್ ಪಂತ್, ಸಂಜು ಸ್ಯಾಮ್ಸನ್ ಮತ್ತು ಕೆಎಲ್ ರಾಹುಲ್ ನಡುವೆ ತೀವ್ರ ಪೈಪೋಟಿ ಇತ್ತು. ಆದರೆ ಸಂಜು ಸ್ಯಾಮ್ಸನ್ ಮತ್ತು ರಿಷಬ್ ಪಂತ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇನ್ನು ಆಲ್‌ರೌಂಡರ್ ಕೋಟದಲ್ಲಿ ಶಿವಂ ದುಬೆ, ಅಕ್ಷರ್ ಪಟೇಲ್, ರವೀಂದ್ರ ಜಡೇಜಾ ಮತ್ತು ಹಾರ್ದಿಕ್ ಪಾಂಡ್ಯ ಕಾಣಿಸಿಕೊಂಡಿದ್ದಾರೆ.

ಭಾರತ ತಂಡ ಇಂತಿದೆ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜ್ವೇಂದ್ರ ಚಾಹಲ್, ಅರ್ಶದೀಪ್ ಸಿಂಗ್, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್. ಮೀಸಲು ಆಟಗಾರರು ಶುಭಮನ್ ಗಿಲ್, ರಿಂಕು ಸಿಂಗ್, ಖಲೀಲ್ ಅಹ್ಮದ್ ಮತ್ತು ಅವೇಶ್ ಖಾನ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಎಲ್ಲ 20 ತಂಡಗಳು ಕೂಡ ಮೇ 1ರ ಒಳಗಡೆ ಆಟಗಾರರ ಅಂತಿಮ ಪಟ್ಟಿ ರಚಿಸಿ ಐಸಿಸಿಗೆ ನೀಡಬೇಕಿತ್ತು. ಹೀಗಾಗಿ ಏಪ್ರಿಲ್ 30ರಂದು ಹಾಲಿ ಚಾಂಪಿಯನ್ ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಭಾರತ ತನ್ನ ತಂಡವನ್ನು ಪ್ರಕಟಿಸಿತು. ಸೋಮವಾರ ನ್ಯೂಜಿಲ್ಯಾಂಡ್ ತನ್ನ ತಂಡವನ್ನು ಪ್ರಕಟಿಸಿತ್ತು. ಮೇ 25 ರ ತನಕ ಐಸಿಸಿ ಅನುಮತಿ ಇಲ್ಲದೆ ತಂಡದಲ್ಲಿ ಬದಲಾವಣೆ ಮಾಡಿಕೊಳ್ಳಬಹುದು. ಆ ಬಳಿಕ ಯಾವುದೇ ಬದಲಾವಣೆ ಮಾಡಬೇಕಿದ್ದರೆ ಐಸಿಸಿ ತಾಂತ್ರಿಕ ಸಮಿತಿಯ ಅನುಮತಿ ಅತ್ಯಗತ್ಯ. ಇದು ಕೂಡ ಆಟಗಾರರು ಗಾಯಗೊಂಡರೆ ಮಾತ್ರ ಬದಲಿ ಆಟಗಾರನ ಆಯ್ಕೆಯನ್ನು ಐಸಿಸಿ ಮಾನ್ಯ ಮಾಡುತ್ತದೆ ಎಂದು ಹೇಳಲಾಗಿದೆ.

ಮುಂಬೈ ವಿರುದ್ಧ ಗೆಲುವು: 3ನೇ ಸ್ಥಾನಕ್ಕೇರಿದ ಲಕ್ನೋ




ಲಖನೌ, ಏ.30– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಲಕ್ನೋ ಸೂಪರ್ ಜೈಂಟ್ಸ್ 5 ಬಾರಿಯ ಚಾಂಪಿಯನ್, ಮುಂಬೈ ಇಂಡಿಯನ್ಸ್ ವಿರುದ್ಧ 4 ವಿಕೆಟ್‌ಗಳ ಜಯ ಸಾಧಿಸಿದೆ. ಆ ಮೂಲಕ ಆಡಿರುವ 10 ಪಂದ್ಯಗಳಲ್ಲಿ 6 ಜಯ, 4 ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 12 ಅಂಕಗಳೊಂದಿಗೆ 3ನೇ ಸ್ಥಾನಕ್ಕೇರಿದೆ. ಇಲ್ಲಿನ ಭಾರತ್‌ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 144 ರನ್‌ಗಳ ಸಾಧಾರಣ ಮೊತ್ತ ಕಲೆ ಹಾಕಿತು.

ಮುಂಬೈ ಇಂಡಿಯನ್ಸ್ ಮತ್ತೊಮ್ಮೆ ಉತ್ತಮ ಆರಂಭ ಪಡೆಯಲು ವಿಫಲವಾಯಿತು. ಬರ್ತ್‌ಡೇ ಬಾಯ್ ರೋಹಿತ್ ಶರ್ಮಾ ಕೇವಲ 4 ರನ್ ಗಳಿಸಿ ಮೊಹ್ಸಿನ್ ಖಾನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಸೂರ್ಯಕುಮಾರ್ ಯಾದವ್ ಕೇವಲ 10 ರನ್ ಗಳಿಸಿ ಮಾರ್ಕಸ್ ಸ್ಟೊಯ್ನಿಸ್‌ಗೆ ವಿಕೆಟ್ ಒಪ್ಪಿಸಿದರು. ತಿಲಕ್ ವರ್ಮಾ 7 ರನ್ ಗಳಿಸಿ ರನೌಟ್ ಆದರೆ, ನಾಯಕ ಹಾರ್ದಿಕ್ ಪಾಂಡ್ಯ ಶೂನ್ಯ ಸುತ್ತಿ ನವೀನ್ ಉಲ್ ಹಕ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಹಾದಿ ಹಿಡಿದರು. ಪರಿಣಾಮ ಮುಂಬೈ ಇಂಡಿಯನ್ಸ್ 27 ರನ್ ಗಳಿಸುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಜೊತೆಯಾದ ವಿಕೆಟ್ ಕೀಪರ್ ಇಶಾನ್ ಕಿಶನ್ ಹಾಗೂ ನೆಹಾಲ್ ವದೇರಾ ತಂಡಕ್ಕೆ ಆಸರೆಯಾದರು. ರಕ್ಷಣಾತ್ಮಕ ಆಟವಾಡಿದ ಇಶಾನ್ ಕಿಶನ್ 36 ಎಸೆತಗಳಲ್ಲಿ 3 ಬೌಂಡರಿ ಒಳಗೊಂಡ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನು ನೆಹಾಲ್ ವದೇರಾ 41 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 46 ರನ್ ಗಳಿಸಿ ಮೊಹ್ಸಿನ್ ಖಾನ್‌ಗೆ 2ನೇ ಬಲಿಯಾದರು. ಇನ್ನಿಂಗ್ಸ್ ಕೊನೆಯಲ್ಲಿ ಟಿಮ್ ಡೇವಿಡ್ ಕೇವಲ 18 ಎಸೆತಗಳಲ್ಲಿ 3 ಬೌಂಡರಿ, ಒಂದು ಸಿಕ್ಸರ್ ಸಹಿತ ಅಜೇಯ 35 ರನ್ ಬಾರಿಸುವ ಮೂಲಕ ತಂಡದ ಮೊತ್ತವನ್ನು 140ರ ಗಡಿ ದಾಟಿಸಿದರು. ಲಕ್ನೋ ಪರ ಮೊಹ್ಸಿನ್ ಖಾನ್ 2, ಮಾರ್ಕಸ್ ಸ್ಟೊಯ್ನಿಸ್, ನವೀನ್ ಉಲ್ ಹಕ್, ಮಯಾಂಕ್ ಯಾದವ್ ಹಾಗೂ ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು.

ಮುಂಬೈ ನೀಡಿದ ಗೆಲುವಿನ ಗುರಿ ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್ 19.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಜಯದ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅರ್ಶೀನ್ ಕುಲಕರ್ಣಿ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಬಳಿಕ 2ನೇ ವಿಕೆಟ್‌ಗೆ ಜೊತೆಯಾದ ನಾಯಕ ಕೆ.ಎಲ್.ರಾಹುಲ್ ಹಾಗೂ ಮಾರ್ಕಸ್ ಸ್ಟೊಯ್ನಿಸ್ 58 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ರಾಹುಲ್ 28 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಸ್ಟೊಯ್ನಿಸ್ 45 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 65 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ದೀಪಕ್ ಹೂಡಾ 18, ನಿಕೋಲಸ್ ಪೂರನ್ 14 ರನ್ ಗಳಿಸಿದರು. ಮುಂಬೈ ಪರ ಹಾರ್ದಿಕ್ ಪಾಂಡ್ಯ 2, ಮೊಹಮ್ಮದ್ ನಬಿ, ನುವಾನ್ ತುಷಾರ್ ಹಾಗೂ ಜೆರಾಲ್ಡ್ ಕೋಟ್ಜಿ ತಲಾ ಒಂದೊಂದು ವಿಕೆಟ್ ಪಡೆದರು. ಲಕ್ನೋ ಪರ ಮಾರ್ಕಸ್ ಸ್ಟೊಯ್ನಿಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ (ಮೇ 1)
ಚೆನ್ನೈ ಸೂಪರ್ ಕಿಂಗ್ಸ್ / ಪಂಜಾಬ್ ಕಿಂಗ್ಸ್
ಸ್ಥಳ: ಚೆನ್ನೈ, ಎಂ.ಎ.ಚಿದಂಬರಂ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಪುರುಷರೊಬ್ಬರಿಂದ ಮ್ಯಾಕ್ಸಿ ಧರಿಸಿ ಮತದಾನ!



ಕೇರಳದ ಕೊಲ್ಲಂ ಜಿಲ್ಲೆಯ ಎಜುಕೋನ್ ಎಂಬ ಗ್ರಾಮದಲ್ಲಿ ಏ.26ರಂದು ಎಸ್.ರಾಜೇಂದ್ರ ಪ್ರಸಾದ್ ಎಂಬವರು ಮಹಿಳೆ ವೇಷಧಾರಿಯಾಗಿ ಬಂದು ಮತದಾನ ಮಾಡಿದರು.

ಮೈಸೂರು,ಏ.30(ಪಿಎಂ)– ಪುರುಷರೊಬ್ಬರು ಮಹಿಳೆಯರ ಉಡುಪು 'ಮ್ಯಾಕ್ಸಿ (ನೈಟ್ ಡ್ರೆಸ್)' ಧರಿಸಿ ಮತದಾನ ಮಾಡುವ ಮೂಲಕ ಮತಗಟ್ಟೆ ಅಧಿಕಾರಿ, ಸಿಬ್ಬಂದಿ ಮಾತ್ರವಲ್ಲದೆ, ಸ್ಥಳೀಯರು ತಬ್ಬಿಬ್ಬಾಗುವಂತೆ ಮಾಡಿದ್ದಾರೆ!

ಮ್ಯಾಕ್ಸಿ ಅಷ್ಟೇ ಅಲ್ಲ, ನೆಕ್ಲೇಸ್, ಕಿವಿಯೋಲೆಗಳು, ಕತ್ತಿನ ಸರ, ಸನ್ ಗ್ಲಾಸ್ ಅನ್ನೂ ಧರಿಸಿದ್ದರು. ಪುರುಷರೊಬ್ಬರು ಮಹಿಳೆಯ ವೇಷಧಾರಿಯಾಗಿ ಮತಗಟ್ಟೆಗೆ ಆಗಮಿಸಿದ್ದು ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದೂ ಮಾತ್ರವಲ್ಲದೆ, ಕುತೂಹಲ ಸನ್ನಿವೇಶಕ್ಕೂ ಕಾರಣವಾಯಿತು.

ಅವರು ಹೀಗೆ ಮಾಡಿದ್ದರ ಹಿಂದೆ ಬಲವಾದ ಕಾರಣವಂತೂ ಇದ್ದೇ ಇದೆ. ಮತದಾರರ ಪಟ್ಟಿಯಲ್ಲಿ ಅವರ ಲಿಂಗವನ್ನು ಮಹಿಳೆಯೆಂದು ತಪ್ಪಾಗಿ ಉಲ್ಲೇಖಿಸಿದ್ದ ಹಿನ್ನೆಲೆಯಲ್ಲಿ ಅವರು ಈ ರೀತಿಯಲ್ಲಿ ತಮ್ಮ ಪ್ರತಿಭಟನೆ ದಾಖಲಿಸಿದ್ದಾರೆ. ಕೇರಳದ ತಿರುವನಂತಪುರಂ ಸಮೀಪದ ಕೊಲ್ಲಂ ಮೂಲದ 76 ವರ್ಷ ವಯೋಮಾನದ ಹಿರಿಯ ನಾಗರಿಕರಾದ ಎಸ್.ರಾಜೇಂದ್ರ ಪ್ರಸಾದ್, ಹೀಗೆ ಮಹಿಳಾ ವಸ್ತ್ರಧಾರಿಯಾಗಿ ತಮ್ಮ ಪ್ರತಿಭಟನೆ ದಾಖಲಿಸಿದವರು. ಕೇರಳದ ಕೊಲ್ಲಂ ಜಿಲ್ಲೆಯ ಎಜುಕೋನ್ ಎಂಬ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಪಂಚಾಯತ್ ಬೋರ್ಡ್‌ನ ನಿವೃತ್ತ ಗ್ರಂಥಪಾಲಕರಾದ ರಾಜೇಂದ್ರ ಪ್ರಸಾದ್ ಅವರು, ಏ.26ರಂದು ಇಲ್ಲಿನ (ಕೇರಳದ ಕೊಲ್ಲಂ) ಎಜುಕೋನ್ ಸರ್ಕಾರಿ ಎಲ್‌ಪಿ ಶಾಲೆ ಮತಗಟ್ಟೆಗೆ ಮತದಾನ ಮಾಡುವ ಸಲುವಾಗಿ ಬಂದಿದ್ದರು. ಈ ವೇಳೆ ಮತದಾರರ ಪಟ್ಟಿಯಲ್ಲಿ ಅವರ ಲಿಂಗವನ್ನು 'ಮಹಿಳೆ' ಎಂದು ಉಲ್ಲೇಖಿಸಿದ್ದನ್ನು ಕಂಡು ಅವರು ಅಚ್ಚರಿಗೊಂಡರಲ್ಲದೆ, ತೀವ್ರ ಅಸಮಾಧಾನ ಸಹ ವ್ಯಕ್ತಪಡಿಸಿದರು. ಕೊನೆಗೆ ತಮ್ಮ ನೆರೆಹೊರೆಯವರಿಂದ ಮಹಿಳೆಯರು ಧರಿಸುವ ಮ್ಯಾಕ್ಸಿ, ಚೈನ್, ಕಿವಿಯೋಲೆಗಳು, ಬಳೆಗಳನ್ನು ಪಡೆದು ಮತಗಟ್ಟೆಯತ್ತ ಮರಳಿ ಹೆಜ್ಜೆ ಹಾಕಿದರು. ಜೊತೆಗೆ ತಮ್ಮೊಂದಿಗೆ 'ಭಾರತೀಯ ಸಂವಿಧಾನ'ದ ಪ್ರತಿಯೊಂದನ್ನು ಹಿಡಿದು ಮತಗಟ್ಟೆಗೆ ರಾಜೇಂದ್ರ ಪ್ರಸಾದ್ ಪ್ರವೇಶ ಪಡೆಯುತ್ತಿದ್ದಂತೆ ಮತಗಟ್ಟೆ ಅಧಿಕಾರಿ, ಸಿಬ್ಬಂದಿ ತಬ್ಬಿಬ್ಬಾದರು. ಆದರೆ ಸಂಬಂಧಿತ ದಾಖಲೆಗಳ ಪರಿಶೀಲಿಸಿ ಅವರಿಗೆ ಮತದಾನ ಮಾಡಲು ಅವಕಾಶ ನೀಡಲಾಯಿತು. 'ಚುನಾವಣಾ ಆಯೋಗವು ನನ್ನನ್ನು ಮಹಿಳೆ ಎಂದು ವರ್ಗೀಕರಿಸಿದೆ. ಆದ್ದರಿಂದ ನಾನು ಅದನ್ನೇ ಅನುಸರಿಸಿದ್ದೇನೆ' ಎಂದು ನಂತರದಲ್ಲಿ ರಾಜೇಂದ್ರ ಪ್ರಸಾದ್ ಪ್ರತಿಕ್ರಿಯಿಸಿದ್ದಾರೆ.

'ಗೀತಾ ಪಾಠಕ' ಪರೀಕ್ಷೆ; ಎ.ಹೇಮಗಂಗಾರಿಗೆ ಸರ್ವೋತ್ತಮ ಶ್ರೇಣಿ



ಮೈಸೂರು,ಏ.30(ಪಿಎಂ)– ಭಗವದ್ಗೀತೆ ಕಲಿಕೆಗೆ ಅಂತರ್ಜಾಲದ ಮೂಲಕ ಮಾರ್ಗದರ್ಶನ ನೀಡುತ್ತಿರುವ 'ಗೀತಾ ಪರಿವಾರ' ಏ.14ರಂದು ನಡೆಸಿದ 'ಗೀತಾ ಪಾಠಕ' ಪರೀಕ್ಷೆಯಲ್ಲಿ (9, 12, 14, 15, 16 ಮತ್ತು 17ನೇ ಅಧ್ಯಾಯಗಳ ಕಂಠಸ್ಥೀಕರಣ ಪರೀಕ್ಷೆ) ಮೈಸೂರಿನ ಖ್ಯಾತ ಸಂಘಟಕಿ ಹಾಗೂ ಕವಯಿತ್ರಿ ಎ.ಹೇಮಗಂಗಾ ಸರ್ವೋತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

200ಕ್ಕೆ 200 ಅಂಕಗಳನ್ನೂ ಪಡೆದು ಸರ್ವೋತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ಎ.ಹೇಮಗಂಗಾ ಅವರಿಗೆ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಬಿ.ಶೋಭಾ ಅಭಿನಂದನೆ ತಿಳಿಸಿದ್ದಾರೆ. ಕಳೆದ ವರ್ಷ ನಡೆಸಿದ್ದ 'ಗೀತಾ ಜಿಜ್ಞಾಸು' ಪರೀಕ್ಷೆಯಲ್ಲಿಯೂ ಹೇಮಗಂಗಾ ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದರು. ಹೇಮಗಂಗಾ ಅವರು ಚಾಮರಾಜನಗರ ಮೂಲದ ದಿವಂಗತ ಲಕ್ಷ್ಮೀ ಮತ್ತು ಅಶ್ವತ್ಥನಾರಾಯಣ ದಂಪತಿ ಪುತ್ರಿಯಾಗಿದ್ದಾರೆ.

ನಾಳೆ ನಿವೃತ್ತ 20 ಮಂದಿ ಯೋಧರಿಗೆ ಸನ್ಮಾನ

ಮೈಸೂರು, ಏ.30(ಎಸ್‌ಪಿಎನ್)– ಇಪ್ಪತ್ತೆಂಟು ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಯೋಧ ರಾಜೇಂದ್ರ ಬಾಸ್ಟಿನ್ ಹಾಗೂ 20 ಮಂದಿ ನಿವೃತ್ತ ಯೋಧರಿಗೆ ಮೇ2ರಂದು ಸಂಜೆ 6.45ಕ್ಕೆ ನಾಯ್ಡುನಗರದ ಪುಷ್ಪಾಶ್ರಮದ ಚರ್ಚ್ ಆವರಣದಲ್ಲಿ ಸನ್ಮಾನಿಸಲಾಗುವುದು ಎಂದು ಮೇರಿ ಎಲಿಜಬೆತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾಜೇಂದ್ರ ಬಾಸ್ಟಿನ್ ಅವರು 1996ರಲ್ಲಿ ಭಾರತೀಯ ಸೇನೆಗೆ ಆಯ್ಕೆಯಾಗಿದ್ದು, ಸತತ 28 ವರ್ಷ ನಾಲ್ಕು ದಿನಗಳು ಸೇನೆಯ ವಿವಿಧ ಹುದ್ದೆಗಳಲ್ಲಿ, ಅಸ್ಸಾಂ, ಉತ್ತರ ಪ್ರದೇಶದ ಘಾಜಿಯಾಬಾದ್, ಜಮ್ಮು ಮತ್ತು ಕಾಶ್ಮೀರದ ಕಾರ್ಗಿಲ್, ರಾಜಸ್ಥಾನದ ಕೋಟ, ಗುಜರಾತ್ ಮತ್ತು ಅರುಣಾಚಲ ಪ್ರದೇಶದ ಗಡಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಸುದೀರ್ಘ ಸೇವೆ ಸಲ್ಲಿಸಿ, ಮೈಸೂರಿಗೆ ಆಗಮಿಸುತ್ತಿರುವ ಇವರನ್ನು ಆತ್ಮೀಯವಾಗಿ ಸನ್ಮಾನಿಸಲಾಗುವುದು. ಈ ವೇಳೆ ಬಡಾವಣೆಯ ಗಣ್ಯರು ಉಪಸ್ಥಿತರಿರುತ್ತಾರೆ ಎಂದು ತಿಳಿಸಿದ್ದಾರೆ.

ಅವರ ಚಟಕ್ಕೆ ವೀಡಿಯೋ ಮಾಡಿಕೊಳ್ಳುತ್ತಾರೆ;

ಪೆನ್‌ಡ್ರೈವ್ ಇಟ್ಟುಕೊಂಡು ಹೆದರಿಸುವ ಚಿಲ್ಲರೆ ಕೆಲಸ ಮಾಡಲ್ಲ



ಬೆಂಗಳೂರು, ಏ.30– ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರು ನೂರಾರು ಮಹಿಳೆಯರ ಜೊತೆ ರಾಸಲೀಲೆ ನಡೆಸಿದ ವೀಡಿಯೋಗಳ ಹಿಂದೆ ತಮ್ಮ ಕೈವಾಡ ಇದೆ ಎಂಬ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಆರೋಪವನ್ನು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ.

ಕುಮಾರಸ್ವಾಮಿ ಅವರು ಮಾಡಿರುವ ಆರೋಪಗಳ ಸಂಬಂಧ ಇಂದು ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಡಿಸಿಎಂ, ಮಹಿಳೆಯರ ಬಗ್ಗೆ ಅಪಾರ ಗೌರವ ಇದೆ ಇಂಥ ಚಿಲ್ಲರೆ ಕೆಲಸಗಳನ್ನು ಯಾವತ್ತೂ ಮಾಡಲ್ಲ. ಪೆನ್‌ಡ್ರೈವ್ ಇದೆ ಎಂದು ಹೆದರಿಸಲ್ಲ. ನಾವು ಚುನಾವಣೆಯನ್ನು ಎದುರಿಸುತ್ತೇವೆ. ನೇರವಾಗಿ ಅಸೆಂಬ್ಲಿಯಲ್ಲಿ ಚರ್ಚೆ ಮಾಡುತ್ತೇವೆ. ಇವರ ಚಟಕ್ಕೆ ವಿಡಿಯೋ ಮಾಡಿಕೊಳ್ಳುತ್ತಾರೆ ಎಂದು ತಿರುಗೇಟು ನೀಡಿದರು.

ಇಂಥವರನ್ನು ಭಗವಂತನೂ ಕ್ಷಮಿಸಲ್ಲ. ಕುಮಾರಸ್ವಾಮಿ ಅವರಿಗೆ ನನ್ನನ್ನು ನೆನಪಿಸಿಕೊಂಡಿಲ್ಲ ಅಂದ್ರೆ ನಿದ್ರೆ ಬರಲ್ಲ. ಪ್ರಜ್ವಲ್ ರೇವಣ್ಣ ಅವರ ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಯುತ್ತಿದೆ. ಕಾನೂನು ಪ್ರಕಾರ ಏನು ಆಗಬೇಕೋ, ಅದು ಆಗುತ್ತದೆ. ಹಾಗೆಯೇ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗುವಾಗ ಅವರ ಜತೆಗೆ ಇದ್ದವರು ಯಾರು. ಯಾರು ಯಾರಿಗೆ ಕರೆ ಮಾಡಿದರು ಅನ್ನೋದನ್ನು ಅವರನ್ನೇ ಕೇಳಬೇಕು. ಇದು ಹಳೇ ವೀಡಿಯೋ ಎಂದು ಎಚ್ ಡಿ ರೇವಣ್ಣ ಹೇಳಿದ್ದಾರೆ. ಅಂದರೆ ಪ್ರಜ್ವಲ್ ವೀಡಿಯೋ ಬಗ್ಗೆ ರೇವಣ್ಣ ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಗುಸುಗುಸು ಚರ್ಚೆಯಾಗಿದ್ದು, ಈಗ ಬಹಿರಂಗವಾಗಿದೆ. ಬಿಜೆಪಿಯವರು ಈ ಬಗ್ಗೆ ಯಾಕೆ ಮಾತನಾಡುತ್ತಿಲ್ಲ ಎನ್ನುವುದು ಎಲ್ಲರ ಪ್ರಶ್ನೆ ಎಂದರು.

ಕುಮಾರಸ್ವಾಮಿ ನನ್ನ ಮನೆಯ ಮುಂದೆ ಪ್ರತಿಭಟನೆ ಮಾಡಿಸುವುದಾದರೆ ಧಾರಾಳವಾಗಿ ಮಾಡಿಸಲಿ ಎಂದ ಡಿಕೆ ಶಿವಕುಮಾರ್, ಕುಮಾರಸ್ವಾಮಿಯವರ ಹೇಳಿಕೆ ಮತ್ತು ಬಿಜೆಪಿ ಕಾರ್ಯಕರ್ತ ದೇವರಾಜೇಗೌಡ ಅವರು ಪ್ರಜ್ವಲ್ ವೀಡಿಯೋಗಳ ಬಗ್ಗೆ ಪಕ್ಷದ ವರಿಷ್ಠರಿಗೆ ಪತ್ರ ಬರೆದು ಹೇಳಿರುವುದನ್ನು ಓದಿ ಹೇಳಿದರು. ಪ್ರಜ್ವಲ್ ರೇವಣ್ಣ ಹಾಸನದಿಂದ ಸ್ಪರ್ಧಿಸಿದರೆ ಪಕ್ಷದ ಇಮೇಜಿಗೆ ಧಕ್ಕೆಯಾಗುತ್ತದೆ, ಚುನಾವಣೆಯಲ್ಲಿ ಕಾಂಗ್ರೆಸ್ ಈ ಅಂಶವನ್ನು ಟ್ರಂಪ್ ಕಾರ್ಡ್ ಆಗಿ ಬಳಸಿಕೊಳ್ಳುತ್ತದೆ ಎಂದು ಬರೆದಿದ್ದಾರೆ ಎಂದು ಶಿವಕುಮಾರ್ ಹೇಳಿದರು.

ಈ ಹಿಂದೆ ಕುಮಾರಸ್ವಾಮಿ ಅವರು ಚುನಾವಣಾ ಪ್ರಚಾರದಲ್ಲಿ ಪ್ರಜ್ವಲ್ ನನ್ನ ಮಗ ಅಂತ ಹೇಳಿದವರು ಈಗ ಆ ಕುಟುಂಬವೇ ಬೇರೆ ಅನ್ನುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪ್ರಜ್ವಲ್ ರೇವಣ್ಣ ಸೆಕ್ಸ್ ವೀಡಿಯೋ ನಾನೂ ನೋಡಿದ್ದೇನೆ; ಮನೆಗೆಲಸದವರೊಂದಿಗೆ ಅಸಹ್ಯ ನೋಡೋಕಾಗ್ಲಿಲ್ಲ



ಬೆಂಗಳೂರು, ಏ.30– ನಾನೂ ವಾಟ್ಸ್ ಆಪ್‌ನಲ್ಲಿ ಬಂದಂತಹ ಸಂಸದ ಪ್ರಜ್ವಲ್ ರೇವಣ್ಣ ಅವರ ಕೆಲವು ಅಶ್ಲೀಲ ವಿಡಿಯೋಗಳನ್ನು ನೋಡಿದ್ದೇನೆ. ಅವರ ನೀಚ ಕೃತ್ಯದ ವಿಡಿಯೋವನ್ನು ಎರಡು ಕ್ಷಣವೂ ನೋಡಲು ಆಗಲಿಲ್ಲ ಎಂದು ಕಾಂಗ್ರೆಸ್ ಸಂಸದ ಡಿಕೆ ಸುರೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಸುರೇಶ್ ಅವರು, ಒಬ್ಬ ಹುಡುಗ ಮನೆಗೆಲಸದ ಮಹಿಳೆಯೊಂದಿಗೆ ನಡೆದುಕೊಂಡಿರುವುದು ಅಸಹ್ಯಕರ. ಆ ಅಸಹ್ಯವನ್ನು ಎರಡು ಕ್ಷಣವೂ ನೋಡಲು ಆಗಲಿಲ್ಲ. ಯಾವ ನಂಬಿಕೆ ಇಟ್ಟುಕೊಂಡು ಮಹಿಳೆಯರು ಕೆಲಸಕ್ಕೆ ಹೋಗುವುದು ಎಂದು ಪ್ರಶ್ನಿಸಿದರು.

ಪ್ರಜ್ವಲ್ ರೇವಣ್ಣ ರಾಸಲೀಲೆ ವಿಡಿಯೋ ಪೆನ್ ಡ್ರೈವ್ ಮೊದಲು ಡಿಕೆ ಬ್ರದರ್ಸ್ ಕೈ ಸೇರಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಡಿಕೆ ಸುರೇಶ್, ನಮಗೆ ವಿಷಯ ಗೊತ್ತಿದ್ದರೆ ಇನ್ನು ಮುಂಚೆಯೇ ಹೊರ ಬರುತ್ತಿತ್ತು. ಆರೋಪ ಮಾಡುವುದಕ್ಕಾಗಿ ನಮ್ಮ ಹೆಸರುಗಳನ್ನು ತರಲಾಗುತ್ತಿದೆ. ಗುಸು ಗುಸು ಸುದ್ದಿ ಹಾಸನದಲ್ಲಿ ಇತ್ತು. ಆದರೆ ಸೂಕ್ತ ದಾಖಲೆಗಳು ಇಲ್ಲದೇ ಮಾತನಾಡುವುದು ಸೂಕ್ತವಲ್ಲ. ಹಾಸನದ ಬಿಜೆಪಿ ನಾಯಕ ದೇವರಾಜೇಗೌಡ ಉನ್ನತ ನಾಯಕರಿಗೆ ಪತ್ರ ಬರೆದಿದ್ದರು. ಪ್ರಕರಣದ ಬಗ್ಗೆ ಪ್ರಧಾನಿಗಳು ಹಾಗೂ ಅವರ ಕಾರ್ಯಾಲಯ ಮತ್ತು ಕುಟುಂಬಕ್ಕೆ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಮುಚ್ಚಿಟ್ಟು ಎನ್ ಡಿಎ ಅಭ್ಯರ್ಥಿಯನ್ನಾಗಿ ಮಾಡಿ. ಇಡೀ ದೇಶದಲ್ಲೇ ಕನ್ನಡಿಗರಿಗೆ, ಹಾಸನ ಜಿಲ್ಲೆಗೆ ಅವಮಾನ ಮಾಡಿದ್ದಾರೆ ಎಂದರು.

ಪ್ರಜ್ವಲ್ ರೇವಣ್ಣನ ಅಶ್ಲೀಲ ವಿಡಿಯೋ ಇಡೀ ಜಗತ್ತಿನಲ್ಲಿಯೇ ಅತೀ ದೊಡ್ಡ ಹಗರಣವಾಗಿದೆ. ಇದು ನಮ್ಮ ರಾಜ್ಯಕ್ಕೆ ಹಾಗೂ ರಾಜ್ಯದ ಮಹಿಳೆಯರಿಗೆ ಆಗಿರುವ ಅತೀ ದೊಡ್ಡ ಅವಮಾನವಾಗಿದೆ. ಸಂತ್ರಸ್ತರಿಗೆ ನ್ಯಾಯ ಕೊಡಿಸಬೇಕಿದೆ. ಸಂಸದನಾಗಿ ತನ್ನ ಕಚೇರಿಯನ್ನೇ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಇನ್ನು ನಮಗೆ ಮೊದಲೇ ಗೊತ್ತಿತ್ತು ಎಂದು ಬಿಜೆಪಿ ನಾಯಕರೇ ಒಪ್ಪಿಕೊಂಡಿದ್ದಾರೆ. ಪ್ರಜ್ವಲ್ ಅವರ ತಂದೆ ರೇವಣ್ಣ ಅವರೇ ಹಳೆಯ ವಿಡಿಯೋಗಳು ಎಂದು ಒಪ್ಪಿಕೊಂಡಿದ್ದಾರೆ. ಎಲ್ಲದಕ್ಕೂ ಮೊದಲು ಹೆಣ್ಣು ಮಕ್ಕಳ ರಕ್ಷಣೆ ಮಾಡಬೇಕಿರುವುದು ಸರ್ಕಾರದ ಮೊದಲ ಕೆಲಸ. ಇಲ್ಲಿ ಸುಮಾರು 500ಕ್ಕೂ ಹೆಚ್ಚು ಮಹಿಳೆಯರು ಶೋಷಣೆಗೆ ಒಳಗಾಗಿದ್ದಾರೆ ಎಂದು ಕಾಂಗ್ರೆಸ್ ಸಂಸದ ಹೇಳಿದ್ದಾರೆ.


ಮೈಸೂರು ಮಿತ್ರ

ಮುಳುಗಿದ ಕರ್ನಾಟಕದ ದಲಿತ ಸೂರ್ಯ

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ

ತಿ.ನರಸೀಪುರ, ಏ.30– ಶ್ರೀನಿವಾಸ ಪ್ರಸಾದ್ ಅವರ ಅಗಲಿಕೆಯಿಂದ ಕರ್ನಾಟಕದ ದಲಿತ ಸೂರ್ಯ ಮುಳುಗಿದಂತಾಗಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಹೇಳಿದರು.

ಮಾಜಿ ಸಚಿವ ಹಾಗೂ ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ನಿಧನರಾದ ಹಿನ್ನೆಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದಿಂದ ಪಟ್ಟಣದ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರದ ಮಾಜಿ ಸಚಿವರು, ಚಾಮರಾಜನಗರ ಲೋಕಸಭಾ ಸದಸ್ಯರಾದ ಹಿರಿಯ ಮುತ್ಸದ್ದಿ ರಾಜಕಾರಣಿ ವಿ.ಶ್ರೀನಿವಾಸ್ ಪ್ರಸಾದ್ ಅವರು ನಿಧನರಾದ ಸುದ್ದಿ ಅತೀವ ದುಃಖ ತರಿಸಿದೆ. ಅವರು ಬುದ್ಧ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಗಳನ್ನು ಅಳವಡಿಸಿಕೊಂಡ ಒಬ್ಬ ಮುತ್ಸದ್ದಿ ನಾಯಕರಾಗಿ ರಾಜ್ಯದಲ್ಲಿ ಗುರುತಿಸಿಕೊಂಡಿದ್ದರು. ದಲಿತ ದಮನಿತರ ಪರ ದಿಟ್ಟ ದನಿ ಮತ್ತು ಅನ್ಯಾಯ, ಅಸಮಾನತೆಯ ವಿರುದ್ಧದ ಹೋರಾಟವನ್ನೇ ಬದುಕಾಗಿಸಿಕೊಂಡಿದ್ದ ಅವರ ಅಗಲಿಕೆ ರಾಜ್ಯದ ಸಾಮಾಜಿಕ ನ್ಯಾಯದ ಪರವಾದ ರಾಜಕೀಯ ಹೋರಾಟಕ್ಕೆ ದೊಡ್ಡ ಹಿನ್ನಡೆಯಾಗಿದೆ. ಅವರೊಬ್ಬ ಪ್ರಗತಿಪರ ಚಿಂತನೆಯ ರಾಜಕೀಯ ನಾಯಕರಾಗಿದ್ದರು. ಸ್ವಾಭಿಮಾನಿ ನಾಯಕರಾಗಿದ್ದ ಪ್ರಸಾದ್ ಅವರ ಆದರ್ಶ ಹಾಗೂ ಪರಿಶುದ್ಧ ರಾಜಕಾರಣ ದೇಶಕ್ಕೆ ಮಾದರಿ ಎಂದರು.



ತಿ.ನರಸೀಪುರದಲ್ಲಿ ನಡೆದ ಸಭೆಯಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ ಮಾತನಾಡಿ, ಪಕ್ಷದ ತತ್ವ, ಸಿದ್ಧಾಂತ ಹಾಗೂ ರಾಷ್ಟ್ರೀಯವಾದದ ಸತ್ವವನ್ನು ಜನರಿಗೆ ತಿಳಿಸುವಲ್ಲಿ ನಾಯಕತ್ವ ವಹಿಸಿದ್ದ ಪ್ರಸಾದ್ ಅವರು ಸಾಮಾಜಿಕ ನ್ಯಾಯ ಹಾಗೂ ಸಂವಿಧಾನ ಮೌಲ್ಯ ಎತ್ತಿ ಹಿಡಿಯುವ ಬದ್ಧತೆ ಸಾಕ್ಷೀಕರಿಸಿದ್ದರು.

ಪ್ರಸ್ತುತ ಪ್ರಸಾದ್ ಅನುಪಸ್ಥಿತಿ ರಾಷ್ಟ್ರ ರಾಜಕಾರಣದಲ್ಲೂ ಕೊರತೆ ಸೃಷ್ಟಿಯಾದಂತಾಗಿದೆ. ಅಲ್ಲದೇ ದಲಿತರು ಹಾಗೂ ತುಳಿತಕ್ಕೊಳಗಾದವರ ಪರವಾಗಿ ಹೋರಾಟ ನಡೆಸಿದ ಅವರು ಸುದೀರ್ಘ 50 ವರ್ಷಗಳ ಕಾಲ ರಾಜಕಾರಣದಲ್ಲಿದ್ದರೂ, ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದೇ ಅಧಿಕಾರ ನಡೆಸಿದ ಪ್ರಾಮಾಣಿಕ ರಾಜಕಾರಣಿ. ಎಂತಹ ಸನ್ನಿವೇಶದಲ್ಲೂ ನೇರ ನುಡಿ, ಅಧಿಕಾರಕ್ಕಾಗಿ ಹಾತೊರೆಯದ ಅವರು ತಾವು ಮೈಗೂಡಿಸಿಕೊಂಡಿದ್ದ ತತ್ವ ಸಿದ್ಧಾಂತವನ್ನು ಬಿಟ್ಟು ಕೊಡದ ವ್ಯಕ್ತಿತ್ವ ಅವರದ್ದಾಗಿತ್ತು ಎಂದು ಬಣ್ಣಿಸಿದರು.

ಅವರ ಅಗಲಿಕೆಯ ನೋವನ್ನು ಕುಟುಂಬ ವರ್ಗದವರಿಗೆ ಹಾಗೂ ಅಭಿಮಾನಿಗಳಿಗೆ ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸಿದರು.

ಸಭೆಯಲ್ಲಿ ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ, ಪುರಸಭಾ ಸದಸ್ಯ ತುಂಬಲ ಪ್ರಕಾಶ್, ಸೋಸಲೆ ಮಹದೇವ ಸ್ವಾಮಿ, ಜಿಲ್ಲಾ ದಸಂಸ ಸಂಚಾಲಕ ಆಲಗೂಡು ಶಿವಕುಮಾರ್, ಸೋಸಲೆ ಶಶಿಕಾಂತ್, ಮೂಗೂರು ಎಂ.ಕೆ.ಸಿದ್ದರಾಜು, ಗ್ರಾಪಂ ಸದಸ್ಯ ಕಲಿಯೂರು ಶಿವಣ್ಣ, ಬಿಜೆಪಿ ಮಂಡಲ ಅಧ್ಯಕ್ಷ ಶಿವಕುಮಾರ್, ಪುರಸಭೆ ಮಾಜಿ ಸದಸ್ಯ ಎನ್.ಲೋಕೇಶ್, ಗಣೇಶ್, ತಾಪಂ ಮಾಜಿ ಉಪಾಧ್ಯಕ್ಷ ಪ್ರಸನ್ನ, ತೋಟದಪ್ಪ ಬಸವರಾಜು, ಮೂಗೂರು ಕುಮಾರಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಮಹೇಶ್, ಕನ್ನಳ್ಳಿ ಶಿವಕುಮಾರ್, ಗ್ರಾಮ ಮಾಜಿ ಅಧ್ಯಕ್ಷ ಲಕ್ಷ್ಮಣ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಲಿಂಗಪ್ಪಾಜಿ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ನಂಜುಂಡಯ್ಯ, ತಾಪಂ ಮಾಜಿ ಸದಸ್ಯ ಬಸವರಾಜು, ಮಂಜುನಾಥ್, ಹೊನ್ನಯ್ಯ, ಹಿರಿಯೂರು ಸೋಮಣ್ಣ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರತ್ನಂ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರುಸ್ಲಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರತ್ನಂ (ತ)	4 ಪ್ರದರ್ಶನಗಳು
ಪ್ರಭಾ	
ಇತ್ಯಾದಿ (ಕ)	2 ಪ್ರದರ್ಶನಗಳು
ಆತ್ಮ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.30ಕ್ಕೆ, ಗಿಲ್ಲಿ (ತ): ಮ.3.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಇತ್ಯಾದಿ (ಕ): ಬೆ.11.30ಕ್ಕೆ, O2 (ಕ): ಮ.1.55ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.15ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ, ಪವಿ ಕೇರ್‌ಟೇಕರ್ (ಮ): ರಾ.10.10ಕ್ಕೆ,
ಸ್ಕ್ರೀನ್ 3	ರತ್ನಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯುವ (ಕ): ರಾ.7.10ಕ್ಕೆ, ರುಸ್ಲಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ, ಘೋಸ್ಟ್‌ಬಸ್ಟರ್ಸ್ ಫ್ರೋಜನ್ ಎಂಪೈರ್ (ಇಂ): ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139


ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜೃಂಭಣೆಯ ಶ್ರೀಬಣ್ಣಾರಿ ಮಾರಮ್ಮನ ಕೊಂಡೋತ್ಸವ



ತಿ.ನರಸೀಪುರ, ಏ.30– ಪಟ್ಟಣದ ಶ್ರೀಬಣ್ಣಾರಿ ಮಾರಮ್ಮ ದೇವಾಲಯದಲ್ಲಿ 79ನೇ ವಾರ್ಷಿಕೋತ್ಸವ ಅಂಗವಾಗಿ ಮಂಗಳವಾರ ಮುಂಜಾನೆ ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಕೊಂಡೋತ್ಸವದಲ್ಲಿ ಹರಕೆ ಹೊತ್ತ 5 ಸಾವಿರಕ್ಕೂ ಹೆಚ್ಚು ಮಹಿಳೆಯರು ಕೊಂಡ ಹಾಯ್ದು ಭಕ್ತಿ ಭಾವ ಮೆರೆದರು. ಬಳಿಕ ದೇವಾಲಯದಲ್ಲಿ ಚಂಡಿಹೋಮ ನೆರವೇರಿಸಿ, ಮಧ್ಯಾಹ್ನ 12 ಗಂಟೆಗೆ ತಂಬಿಟ್ಟಿನ ಆರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ಬುಧವಾರ ಬಾಯಿಗೆ ಬೀಗ: ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಎದುರು ಹರಕೆ ಹೊತ್ತ ಭಕ್ತರು ಬಾಯಿಗೆ ಬೀಗ ಧರಿಸುವ ಭಕ್ತರ ಜೊತೆಗೂಡಿ ಬುಧವಾರ ಬೆಳಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 6 ಗಂಟೆಗೆ ಶ್ರೀಓಂ ಶಕ್ತಿ ದೀಪದ ಪೂಜಾ ಮಹೋತ್ಸವ ಜರುಗಲಿದೆ



ತಿ.ನರಸೀಪುರದ ಬಿಜೆಪಿ ಕಚೇರಿಯಲ್ಲಿ ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮಂಡಲದ ಅಧ್ಯಕ್ಷ ಶಿವಕುಮಾರ್, ಪುರಸಭೆ ಮಾಜಿ ಸದಸ್ಯ ಲೋಕೇಶ್, ಡಾ.ಮಲ್ಲಿಕಾರ್ಜುನ್, ಕೆ.ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಗೂಳಿ ಮಹೇಶ್, ಕರೋಹಟ್ಟಿ ಬಸವರಾಜು, ಚೌಹಳ್ಳಿ ಸಿದ್ದರಾಜು, ಕಾರ್ ಮಲ್ಲಪ್ಪ, ನೀಲಸೋಗೆ ಬಸವರಾಜು ಮತ್ತಿತರರಿದ್ದರು.



ಮೂಗೂರಿನ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯಲ್ಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ಕೆರೆಗಳಲ್ಲಿ ಅವೈಜ್ಞಾನಿಕ ಹೂಳು ತೆಗೆಯುವ ಕಾಮಗಾರಿ

ಜನಸ್ಪಂದನ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಪಿ.ಪ್ರಶಾಂತ ಗೌಡ



ಪಿರಿಯಾಪಟ್ಟಣ, ಏ.30– ತಾಲೂಕಿನ ಕೆರೆಕಟ್ಟೆಗಳಲ್ಲಿ ಅವೈಜ್ಞಾನಿಕವಾಗಿ ಹೂಳು ತೆಗೆಯುತ್ತಿರುವುದರಿಂದ ಸಾಕಷ್ಟು ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಜನಸ್ಪಂದನ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಪಿ.ಪ್ರಶಾಂತ ಗೌಡ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಮಳೆ ಇಲ್ಲದೆ ಕೆರೆಕಟ್ಟೆಗಳು ಬತ್ತಿ ಹೋಗಿವೆ. ತಾಲೂಕು ಆಡಳಿತ ಹಾಗೂ ಗ್ರಾಪಂಗಳು ಕೆರೆಗಳಲ್ಲಿ ಹೂಳು ಎತ್ತುವ ಕಾಮಗಾರಿಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡಿದ್ದು, ಅವರು ಅಡ್ಡಾದಿಡ್ಡಿಯಾಗಿ ಹೂಳು ತೆಗೆಯುತ್ತಿರುವುದು ಆತಂಕಕಾರಿ ಸಂಗತಿ. ಕೆಲವೆಡೆ 15 ರಿಂದ 20 ಅಡಿ ಹೂಳು ತೆಗೆದರೆ ಇನ್ನು ಕೆಲವೆಡೆ ಸಮತಟ್ಟಾಗಿ ಹೂಳು ತೆಗೆಯುವ ಕಾರ್ಯ ಮುಂದುವರೆದಿದೆ. ಈ ರೀತಿಯ ಅವೈಜ್ಞಾನಿಕ ಹೂಳು ತೆಗೆಯುವುದರಿಂದ ಹಸು, ದನಕರುಗಳನ್ನು ನೀರು ಕುಡಿಸಲು, ಗ್ರಾಮದ ಮಕ್ಕಳು ಈಜಲು, ಮಹಿಳೆಯರು ಬಟ್ಟೆ ಒಗೆಯಲು ಹೋದಾಗ ಅಪಾಯ ಕಟ್ಟಿಟ್ಟಬುತ್ತಿ ಎಂದು ತಾಲೂಕಿನ ಎಂ.ಶೆಟ್ಟಳ್ಳಿ ನಂದಿನಾಥಪುರ, ಹುಣಸವಾಡಿ ಸೇರಿದಂತೆ ಹಲವು ಕೆರೆಕಟ್ಟೆಗಳ ಹೂಳು ತೆಗೆಯುವ ಚಿತ್ರವನ್ನು ಪ್ರದರ್ಶಿಸಿದರು.

ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳಿಗೆ ದೂರು ನೀಡಿದ್ದು, ಕೂಡಲೇ ಕಾಮಗಾರಿ ನಡೆಯುವ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಇಲ್ಲದಿದ್ದರೇ ಮುಂದಿನ ದಿನಗಳಲ್ಲಿ ಜನಸ್ಪಂದನ ಟ್ರಸ್ಟ್ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ತಾಲೂಕಿನಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಎಲ್ಲಾ ಕಚೇರಿಯಲ್ಲೂ ಲಂಚಾವತಾರ ಎಗ್ಗಿಲ್ಲದೆ ನಡೆಯುತ್ತಿದೆ. ಈ ಬಗ್ಗೆ ಜನಪ್ರತಿನಿಧಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ ಎಂದ ಅವರು, ತಾಲೂಕಿನ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಈಗಾಗಲೇ ಚಾಲನೆ ನೀಡಿರುವ ಮುಖ್ಯಮಂತ್ರಿಗಳು ಇದುವರೆಗೂ ಒಂದು ಕೆರೆಗೂ ನೀರನ್ನು ಹರಿಸದೆ ರೈತರ ದಿಕ್ಕು ತಪ್ಪಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸ್ವಾಮಿ, ಆದಿತ್ಯ ಮೋಹನ್, ಚಂದ್ರು, ಮನು ಉಪಸ್ಥಿತರಿದ್ದರು.

ಶ್ರೀನಿವಾಸ್ ಪ್ರಸಾದ್ ಮೌಲ್ಯಯುತ ರಾಜಕಾರಣಿ



ಮಲ್ಲುಂಡಿ, ಏ.30– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಮೌಲ್ಯಯುತ ರಾಜಕಾರಣಿಯಾಗಿದ್ದು ಬಡವರ, ದಲಿತರ ಹಾಗೂ ಶೋಷಿತರ ಧ್ವನಿಯಾಗಿದ್ದರು ಎಂದು ತಾಪಂ ಸದಸ್ಯ ಎಸ್.ಬಸವರಾಜ್ ತಿಳಿಸಿದರು.

ಗ್ರಾಮದಲ್ಲಿ ಸಂಸದ ಶ್ರೀನಿವಾಸ್ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್ ಅವರು 6 ಬಾರಿ ಸಂಸದ, ಶಾಸಕರಾಗಿ ಜೊತೆಗೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಸದಾ ಬಡವರ, ದಲಿತರ, ಶೋಷಿತರ ಪರ ಅಪಾರ ಕಾಳಜಿ ಹೊಂದಿದ್ದ ಮಹಾನಾಯಕ ಶ್ರೀನಿವಾಸ ಪ್ರಸಾದ್ ಎಂದರು. ಈ ವೇಳೆ ದಸಂಸ ಕೃಷ್ಣ ಸೇರಿದಂತೆ ಇತರರಿದ್ದರು.

ಕುಡಿತದ ಚಟಕ್ಕೆ ಯುವಕ ಬಲಿ

ಹುಣಸೂರು, ಏ.30– ಕುಡಿತದ ಚಟಕ್ಕೆ ಯುವಕನೋರ್ವ ಬಲಿಯಾಗಿರುವ ಘಟನೆ ನಗರದಲ್ಲಿ ನಡೆದಿದೆ.

ತಾಲೂಕಿನ ಕಸಬಾ ಹೋಬಳಿಯ ರಾಮಪಟ್ಟಣದ ಲೇ.ಉಮೇಶ್–ರೇಣುಕಾ ದಂಪತಿ ಪುತ್ರ ಆದಿತ್ಯ(19) ಮೃತಪಟ್ಟ ಯುವಕ. ಈತ ಹುಣಸೂರಿನ ರೇಣುಕಾ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಸೋಮವಾರ ರಾತ್ರಿ ಕೆಲಸ ಮುಗಿಸಿಕೊಂಡು ಮದ್ಯ ಸೇವಿಸಿ ತಾಪಂ ಕಚೇರಿ ಬಳಿಯ ಫಾಸ್ಟ್‌ಫುಡ್ ನಿಲ್ಲಿಸುವ ಫುಟ್‌ಪಾತ್ ಬಳಿ ಮಲಗಿದ್ದ ಜಾಗದಲ್ಲೇ ಮೃತಪಟ್ಟಿದ್ದಾನೆ. ವಿಷಯ ತಿಳಿದು ಯುವಕನ ತಾಯಿ ರೇಣುಕಾ ಹಾಗೂ ಕುಟುಂಬದವರು ಶವವನ್ನು ಸ್ವಗ್ರಾಮಕ್ಕೆ ಕೊಂಡೊಯ್ದು ಅಂತ್ಯಕ್ರಿಯೆ ನಡೆಸಿದರು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶ: ಕಬ್ಬು ಬೆಳೆ ನಾಶ




ಮಲ್ಲುಂಡಿ, ಏ.30– ವಿದ್ಯುತ್ ಸ್ಪರ್ಶದಿಂದ ಮೂರು ಎಕರೆ ಕಬ್ಬು ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ಮಡುವಿನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಶಶಿಕುಮಾರ್ ಅವರಿಗೆ ಸೇರಿದ ಕಬ್ಬು ನಾಶವಾಗಿರುವುದು. ಮಳೆ ಇಲ್ಲದೇ ಬರಗಾಲದಲ್ಲಿ ಅಲ್ಪ ಸ್ವಲ್ಪ ನೀರಿನಿಂದ ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಹೀಗಾದರೆ ಮಾಡಿರುವ ಸಾಲ ತೀರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಶಶಿಕುಮಾರ್ ಒತ್ತಾಯಿಸಿದ್ದಾರೆ.

ಪಿರಿಯಾಪಟ್ಟಣದಲ್ಲಿ ಶ್ರೀನಿವಾಸ್ ಪ್ರಸಾದ್‌ಗೆ ಶ್ರದ್ಧಾಂಜಲಿ

ಪಿರಿಯಾಪಟ್ಟಣ, ಏ.30– ಅಂಬೇಡ್ಕರ್ ತತ್ವ, ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ನೇರ ನುಡಿಗೆ ಹೆಸರಾಗಿದ್ದ ರಾಜ್ಯ ಕಂಡ ಅಪರೂಪದ ರಾಜಕಾರಣಿ ಶ್ರೀನಿವಾಸ್ ಪ್ರಸಾದ್ ಅವರ ನಿಧನ ರಾಜ್ಯಕ್ಕೆ ತುಂಬಲಾರದ ನಷ್ಟ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ವಿ.ರಾಜೇಂದ್ರ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಕಳಂಕರಹಿತವಾಗಿ 5 ದಶಕಗಳ ಕಾಲ ಪ್ರಾಮಾಣಿಕವಾಗಿ ಜನಸೇವೆ ಮಾಡಿ ಸ್ವಾಭಿಮಾನಕ್ಕೆ ಹೆಸರಾಗಿದ್ದ ಶ್ರೀನಿವಾಸ ಪ್ರಸಾದ್ ಅವರು 6 ಬಾರಿ ಸಂಸದರಾಗಿದ್ದರು. ಅಂತಹ ಮುತ್ಸದ್ಧಿ ರಾಜಕಾರಣಿಯನ್ನು ಕಳೆದುಕೊಂಡಿರುವುದು ನಿಜಕ್ಕೂ ಬೇಸರದ ಸಂಗತಿ ಎಂದರು.



ಈ ವೇಳೆ ಮಾಜಿ ಶಾಸಕ ಹೆಚ್.ಸಿ. ಬಸವರಾಜ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸೋಮಶೇಖರ್, ಮುಖಂಡರಾದ ಆರ್. ಟಿ.ಸತೀಶ್, ಚಂದ್ರು, ಲೋಕಪಾಲಯ್ಯ, ಚೆನ್ನಬಸವರಾಜು, ಎಂ.ಪಿ.ರಾಜು, ವಿಶ್ವನಾಥ್, ರಾಘವೇಂದ್ರ, ಹರೀಶ್, ವಿಜಯ್ ಕುಮಾರ್ ಉಪಸ್ಥಿತರಿದ್ದರು.

ಕಾಡುಹಂದಿ ದಾಳಿ: ರೈತನಿಗೆ ತೀವ್ರ ಗಾಯ



ಹೆಚ್.ಡಿ.ಕೋಟೆ, ಏ.30– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಕಾಡುಹಂದಿ ದಾಳಿ ಮಾಡಿ ತೀವ್ರಗಾಯಗೊಳಿಸಿರುವ ಘಟನೆ ತಾಲೂಕಿನಲ್ಲಿ ಮಂಗಳವಾರ ನಡೆದಿದೆ.

ಇಲ್ಲಿಗೆ ಸಮೀಪದ ಶಾಂತಿಪುರ ಗ್ರಾಮದ ರೈತ ಮಹದೇವನಾಯಕ (62) ಗಾಯಗೊಂಡವರು. ಈತ ತಮ್ಮ ಜಮೀನಿನಲ್ಲಿ ಬಾಳೆ ಸೇರಿದಂತೆ ಇನ್ನಿತರ ಬೆಳೆಗಳನ್ನು ಬೆಳೆದಿದ್ದು, ಸಂಜೆ 4 ಗಂಟೆ ವೇಳೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 2 ಕಾಡುಹಂದಿಗಳು ದಾಳಿ ಮಾಡಿ ತೀವ್ರ ಗಾಯಗೊಳಿಸಿದೆ. ಈ ವೇಳೆ ಗಾಯಗೊಂಡು ಒದ್ದಾಡುತ್ತಿದ್ದ ಮಹದೇವ ನಾಯಕನನ್ನು ಅಕ್ಕಪಕ್ಕದ ಜಮೀನಿನ ರೈತರು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪುತ್ರ ಕುಮಾರ್ ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಆಸ್ಪತ್ರೆಗೆ ತೆರಳಿ ರೈತನನ್ನು ಭೇಟಿ ಮಾಡಿ ಸೂಕ್ತ ಚಿಕಿತ್ಸೆ ಕೊಡಿಸುವ ಭರವಸೆ ನೀಡಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆರ್‌ಎಫ್‌ಓ ಪೂಜಾ, ರೈತ ಮಹದೇವ ನಾಯಕ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕಾಡುಹಂದಿಗಳು ದಾಳಿ ನಡೆಸಿ ಗಾಯಗೊಳಿಸಿದೆ. ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸುವ ಜೊತೆಗೆ ಸರ್ಕಾರದಿಂದ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂಬಂಧ ಹೆಚ್.ಡಿ. ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕರ ವಿರುದ್ಧ ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪ ಸುಳ್ಳು

ಮಳಿಗೆಗಳ ಬಾಡಿಗೆದಾರರ ಬಳಗದ ಅಧ್ಯಕ್ಷ ಉಮೇಶ್

ಕೆ.ಆರ್.ನಗರ, ಏ.30– ಲೋಕಸಭಾ ಚುನಾವಣೆ ಪ್ರಚಾರದ ವೇಳೆ ಮಳಿಗೆಗಳ ಬಾಡಿಗೆದಾರರಿಂದ ಶಾಸಕ ಡಿ.ರವಿಶಂಕರ್ ಕೋಟ್ಯಾಂತರ ರೂ. ಹಣ ಪಡೆದಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಮಾಡಿರುವ ಆರೋಪ ಸುಳ್ಳು. ಅಂಗಡಿ ನಡೆಸಿ ಜೀವನ ಸಾಗಿಸುವ ನಮಗೆ ಕೋಟಿಗಟ್ಟಲೆ ಹಣ ಎಲ್ಲಿಂದ ಬರಲಿದೆ. ಮುಂದೆ ಈ ರೀತಿಯ ಅಪಪ್ರಚಾರ ಮಾಡಬೇಡಿ ಎಂದು ಮಾಜಿ ಸಚಿವರಿಗೆ ಮನವಿ ಮಾಡುತ್ತೇನೆ ಎಂದು ಮಳಿಗೆಗಳ ಬಾಡಿಗೆದಾರರ ಬಳಗದ ಅಧ್ಯಕ್ಷ ಉಮೇಶ್ ಮನವಿ ಮಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಸ್ತವವಾಗಿ 71 ಕುಟುಂಬಗಳು ಹಾಗೂ 150 ಕಾರ್ಮಿಕರು ಅಂಗಡಿಗಳಿಲ್ಲದೆ ಬೀದಿ ಪಾಲಾಗಿದ್ದಾರೆ. ಅಂಗಡಿಗಳ ಮುಂಭಾಗ ಮಾಲೀಕರೇ ಬೀದಿ ಬದಿ ವ್ಯಾಪಾರ ಮಾಡಿ ಅಲ್ಪ ಸ್ವಲ್ಪ ಆದಾಯದಿಂದ ಜೀವನ ಸಾಗಿಸುತ್ತಿದ್ದಾರೆ. ಹೀಗಿರುವಾಗ ನಮಗೆ ಕೊಡಲು ಕೋಟಿಗಟ್ಟಲೆ ಹಣ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದರು.



ಇಲ್ಲಿವರೆಗೂ ಆಡಳಿತದಲ್ಲಿದ್ದ ಶಾಸಕರು, ಪುರಸಭಾ ಸದಸ್ಯರು ಬಾಡಿಗೆದಾರರಿಗೆ ಆಯಾಯ ಸಂದರ್ಭ ಎಲ್ಲಾ ರೀತಿಯ ಸಹಕಾರ ನೀಡಿ ಜೀವನಕ್ಕೆ ದಾರಿ ಮಾಡಿಕೊಟ್ಟಿರುತ್ತಾರೆ. ಅದೇ ರೀತಿ ಈ ಬಾರಿಯೂ ಶಾಸಕ ಡಿ.ರವಿಶಂಕರ್ ಮತ್ತು ಪುರಸಭಾ ಸದಸ್ಯರು ನಮ್ಮ 71 ಕುಟುಂಬಗಳ ಹೊಟ್ಟೆ ಮೇಲೆ ಹೊಡೆಯಬಾರದೆಂಬ ಉದ್ದೇಶದಿಂದ ಮಳಿಗೆಗಳನ್ನು ನವೀಕರಣ ಮಾಡಲು ನಮಗೆ ಸಹಾಯ ಮಾಡುತ್ತಿದ್ದಾರೆ ಎಂದರು.

ತಾಲೂಕಿನ ಹಾಲಿ, ಮಾಜಿ ಸಚಿವರು 2 ಕಣ್ಣುಗಳಂತೆ. ಇಬ್ಬರೂ ಒಂದುಗೂಡಿ ನಮ್ಮ ಸಮಸ್ಯೆ ಬಗೆಹರಿಸಿ. ಇದರಲ್ಲಿ ಯಾವುದೇ ತಪ್ಪುಗ್ರಹಿಕೆ ಬೇಡ. ಬಡವರ ಪರ ಸದಾ ಇರುವ ಇಬ್ಬರು ನಮ್ಮ ಮನವಿ ಪರಿಗಣಿಸಿ ಎಂದು ಮನವಿ ಮಾಡಿದರು.

ಅಂಗಡಿಗಳಿಗೆ ದೀರ್ಘಕಾಲ ಬಾಗಿಲು ಹಾಕಿದರೆ ಒಳಗಿರುವ ವಸ್ತುಗಳೆಲ್ಲಾ ಹಾನಿಗೊಳಗಾಗುತ್ತವೆ. ಇದರಿಂದ ನಮಗೆ ಸಾಕಷ್ಟು ನಷ್ಟ ಸಂಭವಿಸುತ್ತದೆ. ಬೇಸಿಗೆ ಉರಿ ಬಿಸಿಲಿನಲ್ಲಿ ಜಗಲಿಗಳ ಮೇಲೆ ವ್ಯಾಪಾರ ಮಾಡಿ ಜೀವನ ಸಾಗಿಸುವ ಕಾರ್ಮಿಕರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಹೀಗಾಗಿ ದಯಮಾಡಿ ನಮ್ಮ ಕಷ್ಟಕ್ಕೆ ಸ್ಪಂದಿಸಿ ಎಂದು ಕೈಮುಗಿದು ಮನವಿ ಮಾಡಿದರು.

ಈಗಲಾದರೂ ಈ ಸಮಸ್ಯೆಯನ್ನು ಸಂಬಂಧಪಟ್ಟವರು ಲಘುವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಳಗದ ಸಂಚಾಲಕ ಕಾಮಧೇನು ಧರ್ಮ, ಮಹದೇವ, ಜಾವಿದ್, ನಾಗೇಂದ್ರ, ಅನ್ವರ್, ರಮೇಶ್, ಗಂಗಾಧರ ರಾಜ್ ಸೇರಿದಂತೆ ಇನ್ನಿತರರಿದ್ದರು.

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳದ, ರಾಣೆ ಮದ್ರಾಸ್ ಹತ್ತಿರ ಇರುವ ಎಲೆಕ್ಟ್ರಾನಿಕ್ ಕಂಪನಿಗೆ, ಯಾವುದೇ ಡಿಗ್ರಿ, ಐಟಿಐ, ಡಿಪ್ಲೊಮಾ ಪಾಸ್ ಆದ ಹುಡುಗ, ಹುಡುಗಿಯರು ಬೇಕಾಗಿದ್ದಾರೆ.

Call: 9606013313

ಬೇಕಾಗಿದ್ದಾರೆ

ಮೈಸೂರು ಜುವೆಲ್ಸ್ ಪ್ಯಾಲೇಸ್
ನಂ.28, ಲಕ್ಷ್ಮೀವಿಲಾಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು

ಮೈಸೂರಿನ ಜ್ಯೂಯಲರ್ಸ್ ಶೋರೂಂನಲ್ಲಿ
ಕೌಂಟರ್ ಸೇಲ್ಸ್ ಎಕ್ಸಿಕ್ಯೂಟೀವ್ (ಮಹಿಳೆ)
PUC / Any Degree
ಅಟೆಂಡರ್ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ
SSLC Pass/Fail

ಫೋನ್: 0821-4241100

neem BOND PLATINUM PLYWOOD DOORS

10 YEARS WARRANTY
@ FACTORY DEPOT RATES
✆ 9731591267, 9901291267

100% TEAK WOOD

FACTORY FINISH DOORS & FRAMES
@ FACTORY DEPOT RATES
10 YEARS WARRANTY
9845426862
9901291267

WANTED DRIVERS

with Heavy Vehicle Licence for a reputed CBSE School in Mysore.

Call :
99450 38026
94498 09181

ನಿಸರ್ಗ ಇಕೋ ಪ್ಯಾರಡೈಸ್

HP HYLAND PROPERTIES — DTCP APPROVAL
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ

ಸುಲಭ 4 ಕಂತುಗಳ ಸೌಲಭ್ಯವಿದೆ

ಕೇವಲ ₹650/ ಪ್ರತಿ ಚದರ ಅಡಿ

30x40	30x50
40x60	50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

95133 01854
90713 86615

NKF PUBLIC SCHOOL

B.Sc, B.Ed, PUC, D.Ed, ಹಾಗೂ BP.Ed, ಮತ್ತು ಕಂಪ್ಯೂಟರ್ ವಿದ್ಯಾರ್ಹತೆಯುಳ್ಳ ಮಹಿಳಾ ಶಿಕ್ಷಕಿಯರು ಬೇಕಾಗಿರುತ್ತಾರೆ. ಮೇಲ್ಕಂಡ ವಿದ್ಯಾರ್ಹತೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಕೂಡಲೇ ಸಂಪರ್ಕಿಸಿ ದಾಖಲೆ ಸಲ್ಲಿಸತಕ್ಕದ್ದು

ಸಂದರ್ಶನ ದಿನಾಂಕ: 03–05–2024
ಸಮಯ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆ

NKF ಪಬ್ಲಿಕ್ ಶಾಲೆ
ಕೊಳ್ಳೇಗಾಲ ಮುಖ್ಯ ರಸ್ತೆ, ಆಲಗೂಡು ಹತ್ತಿರ, ಟಿ.ನರಸೀಪುರ

08227-295990, 8861565645

ಲಭ್ಯವಿದೆ

ಭಾರತದ ಒರಿಜಿನಲ್ ಟೀಕ್‌ವುಡ್ ಲಾಗ್‌ಗಳು & ಕಟ್ ಸೈಜ್‌ಗಳು ಕಡಿಮೆ ಬೆಲೆಯಲ್ಲಿ ಲಭ್ಯವಿದೆ

9448379993

ದಿ ಶರೀಫ್ ಇಂಡಸ್ಟ್ರೀಸ್ ಅಂಡ್ ಸಾ ಮಿಲ್ #33, ನ್ಯೂ ಬಂಬೂ ಬಜಾರ್, ಮೈಸೂರು

BRICK-e EARTHEN WALLS

ಪ್ಲ್ಯಾಸ್ಟರ್ಡ್ ಅಥವಾ ತೆರೆದ ಗೋಡೆಗಳಿಗೆ 6 ಇಂಚು ಮತ್ತು 4 ಇಂಚಿನಲ್ಲಿ ಘನ ಮಣ್ಣಿನ ಬ್ಲಾಕ್‌ಗಳು ಲಭ್ಯವಿದೆ

6366383888

ಸೇಲ್ಸ್‌ಮ್ಯಾನ್ ತಕ್ಷಣ ಬೇಕಾಗಿದ್ದಾರೆ

WANTED

Tool Room Engineer
- 6-8 years experience
- Salary b/w 35k to 50k based on performance in the interview
- Qualification: GTTC Diploma or any equivalent

Maintenance Engineer
- For Injection moulding
- 4 years minimum experience
- Salary b/w 15k to 25k based on performance in the interview
- Qualification: Diploma in Mechanical Engg.,

Contact:
9513777350

VILLAS FOR SALE from a Reputed Builder

3 BHK Luxury Villas @ Mysore, Vijayanagar 4th Stage

- RERA Approved
- Built with 400+ Quality Checkpoints
- Vaastu compliant
- Elegant facade
- Ready for registration
- Starting at Rs.1.85 Cr

Contact: **96069 07153**

ಶ್ರೀ ಭಗವತಿ ದೇವಸ್ಥಾನ

ಕಾವಾಡಿ ಗ್ರಾಮ ಮತ್ತು ಅಂಚೆ, ಅಮ್ಮತ್ತಿ, ವೀರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ-571211

ಪ್ರಕಟಣೆ

ಶ್ರೀ ಭಗವತಿ ದೇವಸ್ಥಾನ, ಕಾವಾಡಿ, ಇಲ್ಲಿಯ ದೇವಸ್ಥಾನದಲ್ಲಿ ದೈನಂದಿನ ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅನುಭವಸ್ಥ ಶಿವಳ್ಳಿ ವೈಷ್ಣವ ಸಂಪ್ರದಾಯದ ಅರ್ಚಕರು ಬೇಕಾಗಿದ್ದು, ಈ ಮೇಲಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್ ಸಂಖ್ಯೆ

9448150371, 9449335045, 9663103642

ಇದರಲ್ಲಿ ಸಂಪರ್ಕಿಸಬಹುದಾಗಿದೆ

ಸಹಿ/– ಊರು ತಕ್ಕರು ಹಾಗು ಆಡಳಿತ ಮಂಡಳ ಸದಸ್ಯರುಗಳು

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಮಹದೇವು
(ಲೇಟ್ ಕರಿ ಚೆನ್ನಪ್ಪನ ಬಸಪ್ಪನ ಮಗ, ಕೆ.ಜಿ.ಕೊಪ್ಪಲು)

ಇಂತಿ ದುಃಖತಪ್ತರು: ಪತ್ನಿ ಪುಟ್ಟಮ್ಮ ಹಾಗೂ ಕುಟುಂಬವರ್ಗದವರು ಕೆ.ಜಿ.ಕೊಪ್ಪಲ್ ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಚಂದ್ರು

ಇವರು ದಿನಾಂಕ: 22.04.2024 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 02.05.2024ನೇ ಗುರುವಾರ ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲ್ ರುದ್ರಭೂಮಿ (ಕಾವೇರಿ ಶಾಲೆ ಪಕ್ಕ) ಆದಿಚುಂಚನಗಿರಿ ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ಭೋಜನ ಮ: 12.30 ಗಂಟೆಗೆ

ದುಃಖತಪ್ತರು: ಶ್ರೀಮತಿ ಪುಟ್ಟಲಕ್ಷ್ಮಮ್ಮ, ಮಗ ಭುವನ್ ಹಾಗೂ ಕುಟುಂಬವರ್ಗ

SRI RAMAKRISHNA VIDYASHALA

YADAVAGIRI, MYSURU 570 020
Phone Nos: 0821- 2514000 / 2417555 / 2516000
e-mail: vidyashala@gmail.com

WANTED

- Office Assistant (Only male candidates need apply) with good knowledge of English and skill in Computer Applications. Maximum age 40 years (relaxable in deserving cases)
- ಅಡುಗೆಯವರು (ಪುರುಷರು): ಸಾಮೂಹಿಕವಾಗಿ (ಕನಿಷ್ಠ 500 ಜನರಿಗೆ) ದಕ್ಷಿಣ ಮತ್ತು ಉತ್ತರ ಭಾರತದ ಭಕ್ಷ್ಯಗಳನ್ನು ತಯಾರಿಸುವ ಅನುಭವವುಳ್ಳವರು. ವಯೋಮಿತಿ 30 ವರ್ಷಗಳು (ಅರ್ಹ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ).

Please apply with detailed bio-data to the CORRESPONDENT before 10th May 2024 by e-mail or post.
ವಿವರವಾದ ಬಯೋಡೇಟಾದೊಂದಿಗೆ 10 ಮೇ 2024ರೊಳಗೆ ಇ–ಮೇಲ್ ಅಥವಾ ಅಂಚೆ ಮೂಲಕ ಕರೆಸ್ಪಾಂಡೆಂಟ್‌ರವರಿಗೆ ಸಲ್ಲಿಸುವುದು.

Only short listed candidates will be called for interview telephonically intimating the date and time of interview.
ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ದೂರವಾಣಿ ಮೂಲಕ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ತಿಳಿಸಿ ಹಾಜರಾಗಲು ತಿಳಿಸಲಾಗುವುದು.

ಕೊಠಾರಿ ಕೇಬಲ್ಸ್ Kothari Cables

Copper & Aluminium Wires, Submersible / UG Cables / PVC Pipes & RCC Mould Pipes - FRLS (ISI Mark)



AVAILABLE AT ALL LEADING STORES
For Enquires Contact:
99003 05451 / 96327 77535

WANTED

▸ PHARMACIST

with or without experience but with certificate and 2 Wheeler Driving License

▸ PHARMA AID

with experience and 2 Wheeler Driving License

Send your resume to: The Manager
RAGHULAL & CO.,
207, Sayyaji Rao Road, Mysore - 570 001
Ph: 0821-2520733 / 4260733

WANTED

A Reputed House building Society is looking for the following posts:

1. Telecaller, female. No of post: 2 with minimum two years of experience in telemarketing with good communication Skills.
2. Marketing executive, male, No of posts: 2 with one year experience in any marketing field, should have four wheeler driving licence must.

Walk in with resume and photo on Thursday 02-05-2024 between 11 am to 4 pm.

Address: **MYSORE IT PARK**
15th Main, 6th Cross, Sarswathipuram, Mysore-570007

Ph: 9448774372, 9448464479

1ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಮಂಜುಳಾ ಬಸವರಾಜು

ನಿಧನ: 01.05.2023
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಶ್ರೀ ಆರ್.ಬಿ.ಬಸವರಾಜು, ನಿವೃತ್ತ ಡಿಪೋ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್, ಶ್ರೀ ಬಿ.ಅಭಿಷೇಕ್ ಮತ್ತು ಬಿ.ಕಾವ್ಯ ಮಕ್ಕಳು, ಶ್ರೀಮತಿ ಶ್ರೀಲಕ್ಷ್ಮಿ ಸೊಸೆ, ಕು|| ಮಧುರಿಮ ಮೊಮ್ಮಗಳು ಹಾಗೂ ಕುಟುಂಬವರ್ಗ ಮತ್ತು ಬಂಧುಮಿತ್ರರು

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್

NSE Nypunya School of Excellence
A Premier CBSE School
Affiliation Code KA456
NEP Implemented

NEW CAMPUS

AT DATTAGALLI, MYSORE

NOW FUNCTIONAL

INTERNATIONAL STEMFIT AWARD WINNER
Charles Darwin University Australia



Dattagalli, Mysuru ✆ 0821-2340041 ☐ 91080 02966, 99010 72527
www.nypunyaschool.education

MMK & SDM MAHILA MAHA VIDYALAYA AND CENTER FOR PG STUDIES

|| OM SHRI MANJUNATHAYA NAMAHA ||

Managed by S.D.M. Educational Society®, Ujire
Accredited by NAAC with 'B' Grade
KRISHNAMURTHY PURAM, MYSURU - 570 004

ADMISSIONS OPEN FOR 2024 - 25

Affiliated to University of Mysore

▸ B.Com ▸ BBA ▸ BCA ▸ B.Sc

▸ B.Sc - Physical Science : Physics, Chemistry, Electronics, Mathematics, Computer Science

▸ B.Sc - Life Science- BtBM : Biochemistry, Microbiology, Biotechnology

Highlights:

- Recognised by UGC 2(f) 12(B)
- AICTE Approval for BBA/BCA
- Ranking agencies like NIRF, India Today, outlook etc.
- ICT classrooms
- Scholarship facilities
- Guest Lecturer by Eminent Scholars
- Add on course from all the departments
- Tally, CA/CS/CMA coaching
- MOU's with premier research institutions
- Encouragement for Research, Research publication
- Good number of sophisticated lab equipments
- Partner/Membership of Ulpath, ICT Academy FedEx, Dee, Microsoft, oracle.

Placement in major companies, Infosys, TCS, Cognizant, Accunture, EqualisE Rcm, Wipro, Star knowledge

For Online Application Forms Visit our website: ✉ principal@sdmmmkmysore.in ⊕ www.sdmmmkmysore.in
Ph : 0821-2332865 Mob : 98861 66750